
ಘಟಕ 2

# CBI

## ಮಕ್ಕಳ ಬೈಬಲ್ ಪರಿಶೋಧನೆ



## ಸಂಡೆ ಸ್ಕೂಲ್

ಎಲ್ಲಾ ವಯಸಿನವರಿಗೆ

# ಸಿಬಿಐ:

# ಮಕ್ಕಳ ಬೈಬಲ್

# ಪರಿಶೋಧನೆ

ಸಂಡೆ ಸ್ಕೂಲ್

ಘಟಕ 2

## ಶಿಕ್ಷಕರ ಪುಸ್ತಕ

ಮಕ್ಕಳೇ ಪ್ರಮುಖರು

"ಮಕ್ಕಳೇ ಪ್ರಮುಖರು" ಎನ್ನುವ ತಂಡದವರಿಗೆ ವಂದನೆಗಳು!

Chief Editor: Kristina Krauss

Creative Team: Angie Kangas, Dwight Krauss, Flor Boldo, Jennifer Sánchez Nieto, Jon Kangas, Julio Sánchez Nieto, Mike Kangas, Monserrat Duran Díaz, Rubén Darío, Suki Kangas, Verónica Toj, and Vickie Kangas.

Translation Team: Ali Atuha, Aline Xavier, Annupama Wankhede, Aroma Publications, Benjamin Gaxiola, Blessie Jetender, Blessy Jacob, Carla Mayumi, David Raju, Diana de León, Ephraim Njuguna Mirobi, Finny Jacob, Jacob Kuruvilla, Jetender Singh, Marcos Rocha, Mary Amelia Hernández, Mathew Das, Nassim Bougtaia, Paul Mwangi, Paul Septan, Rubina Rai, Sabrina Benny John, and SubtitleMe.

# ಸಿಬಿಐಗೆ ಸುಸ್ವಾಗತ ....“ಮಕ್ಕಳ ಬೈಬಲ್ ಪರಿಶೋಧನೆ”!!!

ನಿಮ್ಮ ಸಮುದಾಯದಲ್ಲಿ ಅಥವಾ ನಿಮ್ಮ ಪ್ರಾಂತ್ಯದಲ್ಲಿ ಅಥವಾ ನಿಮ್ಮ ಸಭೆಗಳಲ್ಲಿರುವ ನಿಮ್ಮ ಮಕ್ಕಳಿಗೆ ಇನ್ನೊಂದು ರೀತಿಯಾದ ವಾರದ ಬೈಬಲ್ ಅಧ್ಯಯನವು ಅಥವಾ ಇಡೀ ವರ್ಷಕ್ಕೆಲ್ಲಾ ಬೇಕಾದ ಸಂಡೆ ಸ್ಕೂಲ್ ತರಗತಿಗಳು ಕೊಡುವುದಕ್ಕೆ ನಾವು “ಮಕ್ಕಳೇ ಪ್ರಮುಖರು” ಎನ್ನುವ ಈ ಕಾರ್ಯಕ್ರಮದಲ್ಲಿ ಎಷ್ಟೋ ಸಂತೋಷವಾಗಿದ್ದೇವೆ. ಈ ಕಾರ್ಯಕ್ರಮದಲ್ಲಿ, ನಿಮ್ಮ ಮಕ್ಕಳೆಲ್ಲರೂ ಪ್ರತ್ಯೇಕವಾದ ಪ್ರತಿನಿಧಿಗಳೆಂದು ಅಥವಾ ಪರಿಶೋಧಕರೆಂದು ಊಹಿಸಿಕೊಳ್ಳುವರು ಮತ್ತು ಪ್ರತಿಯೊಂದು ವಾರ ಪರಿಷ್ಕಾರ ಮಾಡುವುದಕ್ಕೆ ಅವರಿಗೆ ಒಂದೊಂದು ಕೇಸನ್ನು ಕೊಡಲಾಗುತ್ತದೆ. ದೂರದರ್ಶನದಲ್ಲಿ (ಟಿವಿಯಲ್ಲಿ) “ಸಿಬಿಐ” ಎನ್ನುವ ಕಾರ್ಯಕ್ರಮಗಳು ಬರುತ್ತಿರುವಂತೆಯೇ, ನಿಮ್ಮ ವಿದ್ಯಾರ್ಥಿಗಳು ಪೋಲೀಸ್ ಪರಿಶೋಧಕರಾಗಿಯೂ ಮತ್ತು ಪ್ರತಿಯೊಂದು ಕೇಸನ್ನು ಪರಿಷ್ಕಾರ ಮಾಡುವುದಕ್ಕೆ ಫೋಟೋಗಳನ್ನು ತೆಗೆಯುವ, ಪ್ರಯೋಗಗಳನ್ನು ಮಾಡುವ ವಿಜ್ಞಾನ ತಂತ್ರಜ್ಞರಾಗಿ (ಸೈನ್ಸ್ ಟೆಕ್ನಿಶಿಯನ್ಸ್) ಇರುವರು. ನಿಮ್ಮ ಉಪಾಧ್ಯಾಯರೆಲ್ಲರು ಪೋಲೀಸ್ ಪರಿಶೋಧಕರ ಮತ್ತು ವಿಜ್ಞಾನ ತಂತ್ರಜ್ಞರ (ಸೈನ್ಸ್ ಟೆಕ್ನಿಶಿಯನ್ಸ್) ವಸ್ತ್ರಗಳನ್ನು ಧರಿಸಿಕೊಳ್ಳಲು ಹೇಳಿರಿ. ಅನೇಕ ವರ್ಷಗಳ ಹಿಂದೆ ನಾನು ಸಂಡೇ ಸ್ಕೂಲಿನಲ್ಲಿ ಬೋಧಿಸುತ್ತಿರುವಾಗ, ಪಾಸ್ತರ್ ಮಕ್ಕಳು ಮತ್ತು ಸಭೆಗೆ ಬರುವ ವಿಶ್ವಾಸಿಗಳ ಮಕ್ಕಳು ಸತ್ಯವೇದದಲ್ಲಿರುವ ಎಲ್ಲಾ ಸಾಧಾರಣ ಕಥೆಗಳನ್ನೆಲ್ಲಾ ತಿಳಿದುಕೊಂಡಿದ್ದರು. ಒಂದುವೇಳೆ ನಾನು ನೋವನ ನಾವೆಯ ಕಥೆಯನ್ನಾಗಲಿ ಅಥವಾ ಯೋನ ಮತ್ತು ಮೀನಿನ ಕಥೆಯನ್ನಾಗಲಿ ಹೇಳುವುದಕ್ಕೆ ಆರಂಭಿಸಿದಾಗ, ಮಕ್ಕಳೆಲ್ಲರೂ ನರಳುತ್ತಾ ಮುಲುಕುತ್ತಾ ಇರುತ್ತಿದ್ದರು. ಯಾಕಂದರೆ, ಆ ಕಥೆಗಳೆಲ್ಲಾ ಅವರಿಗೆ ಚೆನ್ನಾಗಿ ಗೊತ್ತು. ನಾನು ತರಗತಿ ತೆಗೆದುಕೊಳ್ಳುವ ವಿಧಾನವನ್ನು ಮಾರ್ಪಾಟು ಮಾಡಿಕೊಳ್ಳುವುದಕ್ಕೆ ಆರಂಭಿಸಿದೆ, ಆದರೆ ಅದು ಅನಿವಾರ್ಯವಾಗಿ ಅದಕ್ಕೆ ಮುಂದಿನ ತರಗತಿಯ ವಿಧಾನಕ್ಕೆ ಹೋಲುವಂತಿತ್ತು; ನನ್ನ ವಿದ್ಯಾರ್ಥಿಗಳೆಲ್ಲರೂ ತುಂಬಾ ಬೇಸರಗೊಳ್ಳುತ್ತಿದ್ದರು. ಈ ಸಮಸ್ಯೆಯನ್ನು ಗುರುತಿಸಿ, “ಮಕ್ಕಳೇ ಪ್ರಮುಖರು” ಸಿಬ್ಬಂದಿಯೆಲ್ಲರು ಒಂದು ಹೊಸ ಆಲೋಚನೆಯನ್ನು ಪಡೆದುಕೊಂಡರು, ಅದೇನಂದರೆ ಉಪಾಧ್ಯಾಯರೆಲ್ಲರು ಮಕ್ಕಳಿಗೆ ಕಥೆಯನ್ನು ಹೇಳಬಾರದು! ಅದರ ಬದಲಾಗಿ, ನಿಮ್ಮ ವಿದ್ಯಾರ್ಥಿಗಳೆಲ್ಲರು ಕೇಸನ್ನು ಪರಿಷ್ಕರಿಸಬೇಕು, ಮತ್ತು ಪ್ರತೀ ವಾರ ಅವರು ಯಾವ ಕಥೆಯನ್ನು ಕಲಿಯುತ್ತಿದ್ದಾರೋ ಅದನ್ನು ಹೇಳಬೇಕು! ಇದರ ಅರ್ಥವೇನಂದರೆ, ನಿಮ್ಮ ಮಕ್ಕಳು ಆ ಕಥೆ ಯಾವುದೆಂದು ಕಂಡುಕೊಳ್ಳುವವರೆಗೂ ನಿಮ್ಮ ಮಕ್ಕಳನ್ನು ನಿಮಗೆ ಕೊಡಲ್ಪಡುವ ಉಪಾಧ್ಯಾಯರ ಕೈಪಿಡಿಯನ್ನು, ಅಥವಾ ಸೂಚನೆಗಳಿಗೆ (ಕ್ಲುಗಳಿಗೆ) ಉತ್ತರಗಳನ್ನು ನೋಡುವುದಕ್ಕೆ ಅನುಮತಿಸಬಾರದು. ಮಕ್ಕಳು ಕಥೆಯನ್ನು ಕಂಡುಕೊಳ್ಳುವುದಕ್ಕೆ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ನಿಮಗೆ ಪ್ರತೀ ವಾರ 5 ಸೂಚನೆಗಳನ್ನು (ಕ್ಲುಗಳನ್ನು) ಕೊಡಲಾಗುತ್ತದೆ. ಮಕ್ಕಳು ಆ ಸೂಚನೆಗಳನ್ನೂ (ಕ್ಲುಗಳನ್ನು) ನೋಡುತ್ತಿರುವಾಗ, ಯಾವುದನ್ನು ನಿಶ್ಚಯಗೊಳಿಸಬೇಡಿರಿ ಅಥವಾ ಯಾವುದನ್ನು ಉಪೇಕ್ಷಿಸಬೇಡಿರಿ, ಅದರಿಂದ ತರಗತಿಯ ಮೊದಲ ಆರಂಭ ಕ್ಷಣಗಳಲ್ಲಿ ಬೈಬಲ್ ಕಥೆಯನ್ನು ಕಂಡುಕೊಳ್ಳುವುದರಲ್ಲಿ ಪ್ರತಿಯೊಬ್ಬರೂ ತುಂಬಾ ಹೆಚ್ಚಾಗಿ ಸಂತೋಷಪಡುತ್ತಾರೆ.

ಕೇಸ್ ಪರಿಷ್ಕಾರವಾದ ಕೂಡಲೇ, ನೀವು ಸಂಡೇ ಸ್ಕೂಲ್ ತರಗತಿಯ ಸಾಧಾರಣ ಭಾಗಗಳು ಇರುತ್ತವೆ, ಆಗ ಕೆಲವೊಂದು ವಿನೋದದಿಂದ ಕೂಡಿರುವ ಚಟುವಟಿಕೆಗಳಿರುತ್ತವೆ. ಪ್ರತೀ ವಾರ ನಾವು ಒಂದು ಆಟವನ್ನು, ಚರ್ಚೆಯ ಪ್ರಶ್ನೆಗಳನ್ನು, ಪಜಿಲ್.ಗಳು ಮತ್ತು ಬಣ್ಣ ಹಚ್ಚುವಿಕೆ ಚಟುವಟಿಕೆಗಳಿರುವ ವಿದ್ಯಾರ್ಥಿ ಪುಟಗಳು ಮತ್ತು "ಡಾ. ಲೂಕಸ್" ಎಂದು ಕರೆಯಲ್ಪಡುವ ದೊಡ್ಡ ವಿಜ್ಞಾನಿಯೊಂದಿಗೆ ವಿನೋದಾತ್ಮಕವಾದ ವಿಜ್ಞಾನ ಪ್ರಯೋಗಗಳು ಇರುತ್ತವೆ. ತರಗತಿಯಲ್ಲಿಯೇ ನೀವು ಪ್ರಯೋಗಗಳನ್ನು ಮಾಡಬಹುದು, ಅಥವಾ ನಾವು ತಯಾರು ಮಾಡಿರುವ ವಿಡಿಯೋಗಳನ್ನೂ ನೀವು ಉಪಯೋಗಿಸಬಹುದು.

ನಮ್ಮ ಸೇವೆಯಲ್ಲಿ ಯಾವಾಗಲೂ ಇರುವಂತೆಯೇ, ಈ ವರ್ಷದ ಕಾರ್ಯಕ್ರಮದ ಸಮಾಚಾರವೆಲ್ಲಾ ನಿಮಗೆ ಉಚಿತವಾಗಿ ಕೊಡಲ್ಪಡುವುದು. ನೀವು ಗ್ರಾಮೀಣ ಪ್ರಾಂತ್ಯದಲ್ಲಿದ್ದರೂ, ಉಪಾಧ್ಯಾರಾಯರಾಗಿರುವವರು ಇಂಟರ್ನೆಟ್.ನಿಂದ ಪುಸ್ತಕಗಳನ್ನು ಡೌನ್.ಲೋಡ್ ಮಾಡಿಕೊಳ್ಳಬಹುದು ಮತ್ತು ನೀವು ವಿದ್ಯಾರ್ಥಿ ಪುಟಗಳನ್ನು ಕಾಪಿ ಮಾಡಿಕೊಳ್ಳಬಹುದೋ ಇಲ್ಲವೋ ಎಂದು ತಿಳಿದುಕೊಳ್ಳಬಹುದು. "ಮಕ್ಕಳ ಬೈಬಲ್ ಪರಿಶೋಧನೆ"ಯಲ್ಲಿ ತುಂಬಾ ಹೆಚ್ಚು ಚಟುವಟಿಕೆಗಳಿವೆ. ಆದ್ದರಿಂದ ವಿದ್ಯಾರ್ಥಿ ಪುಸ್ತಕಗಳನ್ನು ಬಳಸಬಾರದೆಂದು ನೀವು ತೀರ್ಮಾನಿಸಿಕೊಂಡರೂ, ನಿಮ್ಮ ಪರಿಸ್ಥಿತಿಗಳಿಗೆ ಅವು ಉಪಯೋಗವಾಗುತ್ತವೆ. ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ನಿಮಗೆ ಇಂಟರ್ನೆಟ್ ಬೇಕಾಗಿರುವುದಿಲ್ಲ! ಒಬ್ಬರು ಒಂದು ಸಮಯವನ್ನುಂಟು ಮಾಡುತ್ತಾರೆ, ಬೇಕಾದವುಗಳನ್ನು ಸಭೆಯ ಸ್ಥಳಕ್ಕೆ ತರುತ್ತಾರೆ. ಅದನಂತರ ನಿಮ್ಮ ಸೇವೆಯು ಹೇಗೆ ಬೆಳೆಯುತ್ತದೆಯೆಂದು ನೀವು ನೋಡಿರಿ!

ಅತ್ಯುತ್ಸಾಹಕವಾದ, ಹೊಸದಾದ ಈ ಕಾರ್ಯಕ್ರಮದೊಂದಿಗೆ ನಾವೆಲ್ಲರು ಸೇರಿ, ಸಂಡೇ ಸ್ಕೂಲಿನೊಳಗೆ ಧುಮುಕೋಣ1 ಸಿಬಿಐ ಎಲ್ಲಾ 3 ಘಟಕಗಳಲ್ಲಿರುವ ಈ 39 ಪಾಠಗಳಲ್ಲಿ ದಾವೀದ, ಗೊಲ್ಯಾತ್, ಎಸ್ತೇರಳು, ಸೃಷ್ಟಿ, ಯೇಸು ಕ್ರಿಸ್ತನ ಪುನರುತ್ಥಾನ, ವಿಶ್ವಾಸ ಮತ್ತು ಇನ್ನೂ ಅನೇಕ ವಿಷಯಗಳ ಕುರಿತಾಗಿ ನಿಮ್ಮ ವಿದ್ಯಾರ್ಥಿಗಳು ಕಲಿತುಕೊಳ್ಳುತ್ತಾ ಇರುತ್ತಾರೆ. ನೀವು ನಿಮ್ಮ ತರಗತಿಯನ್ನು ವಿನೋದಾತ್ಮಕವಾಗಿ ಮತ್ತು ಉತ್ಸಾಹಕರವಾಗಿ ಮಾಡಬೇಕೆಂದು ನಿಮಗೆ ನಾನು ಸವಾಲು ಬೀಸುತ್ತಿದ್ದೇನೆ! ಸೃಜನಾತ್ಮಕವಾಗಿ ಲ್ಯಾಬ್ ಕೋಟು, ವಿಜ್ಞಾನದ ಪ್ರಯೋಗಗಳನ್ನುಂಟು ಮಾಡಿರಿ ಮತ್ತು "ಅಪರಾಧ ಸನ್ನಿವೇಶವನ್ನು" ತೋರಿಸುವುದಕ್ಕೆ ಹಳದಿ ಟೇಪ್ ಬಳಸುವುದು, ಇದನ್ನು ನಾವು "ಬೈಬಲ್ ಸನ್ನಿವೇಶ" ಎಂದು ಕರೆಯುತ್ತೇವೆ. ಈ ವರ್ಷದಲ್ಲಿ ನಿಮ್ಮ ವಿದ್ಯಾರ್ಥಿಗಳೆಲ್ಲರು ಹೆಚ್ಚಿನ ವಿನೋದವನ್ನು ಪಡೆಯುತ್ತಾರೆ!

ಒಂದು ಹೊಸದಾದ, ಉತ್ಸಾಹವನ್ನುಂಟು ಮಾಡುವ ವಿಧಾನದಲ್ಲಿ ನಿಮ್ಮ ಮಕ್ಕಳಿಗೆ ನೀವು ಸೇವೆ ಮಾಡುತ್ತಿರುವಾಗ ದೇವರು ನಿಮ್ಮನ್ನು ಹೆಚ್ಚಾಗಿ ಆಶೀರ್ವಾದ ಮಾಡಲಿ!

ಕ್ರಿಸ್ತನಲ್ಲಿ ನಿಮ್ಮ ಸಹೋದರಿ,
ಕ್ರಿಸ್ಟಿನಾ ಕ್ರಾಸ್



# --[ ಹೇಗೆ ಉಪಯೋಗಿಸಬೇಕು?]--



ವಿನೋದಾತ್ಮಕವಾದ ಪರಿಶೋಧನ ಬೈಬಲ್ ಕಾರ್ಯಕ್ರಮಕ್ಕೆ ಸುಸ್ವಾಗತ! ನಿಮ್ಮ ವಿದ್ಯಾರ್ಥಿಗಳನ್ನು ನೀವು ತರಬೇತಿಗೊಳಿಸುವಿರೆಂದು ನಮಗೆ ನಿರೀಕ್ಷೆಯುಂಟು. ಅದೇ ಸಮಯದಲ್ಲಿ, ಎಲ್ಲರು ಸೇರಿ ತುಂಬಾ ಹೆಚ್ಚಾದ ವಿನೋದವನ್ನು ಪಡೆಯಿರಿ! ಈ ಕಾರ್ಯಕ್ರಮವನ್ನು ನೀವು ಮಕ್ಕಳಿಗಾಗಿ ವಾರದ ಬೈಬಲ್ ಮಿನಿಸ್ಟ್ರೀ ಎಂದಾಗಲಿ, ಮಕ್ಕಳ ಸಭೆ ಎಂದಾಗಲಿ ಅಥವಾ ಸಂಡೇ ಸ್ಕೂಲ್ ಎಂದಾಗಲಿ ಉಪಯೋಗಿಸಿಕೊಳ್ಳಬಹುದು. ನಮ್ಮ ವೆಬ್.ಸೈಟ್.ನಲ್ಲಿ ದೃಶ್ಯ ಸಾಧನೆಗಳು ಲಭ್ಯದಲ್ಲಿವೆ. ಆದುದರಿಂದ ಪ್ರತಿಯೊಂದು ಚಿತ್ರವನ್ನು ದೊಡ್ಡದಾಗಿ ತೋರಿಸಬಹುದು, ಅಥವಾ ನಿಮ್ಮ ಮೊಬೈಲ್ ಫೋನ್ ಮೂಲಕ ವಿದ್ಯಾರ್ಥಿಗಳಿಗೆ ತೋರಿಸಬಹುದು. ಈ ಪಠ್ಯಕ್ರಮದ 3 ಘಟಕಗಳನ್ನು (ಅಥವಾ ವಿಭಾಗಗಳನ್ನು) ಓದಿ ಸಂತೋಷ ಪಡುತ್ತೀರೆಂದು ನಾವು ನಿರೀಕ್ಷಿಸುತ್ತಿದ್ದೇವೆ. ಇದು ನಿಮಗೆ 9 ತಿಂಗಳುಗಳ ತರಗತಿಗಳನ್ನು  ಕೊಡುತ್ತದೆ. ಈ ಮೊದಲನೇ ಘಟಕದಲ್ಲಿ 13 ಪಾಠಗಳಿರುತ್ತವೆ ಮತ್ತು ಇನ್ನುಳಿದ 2 ಘಟಕಗಳಲ್ಲಿ (ವಿಭಾಗಗಳಲ್ಲಿ) 39 ಪಾಠಗಳನ್ನು ನೀವು ಹೊಂದಿಕೊಳ್ಳುವಿರಿ.

## ಶಿಫಾರಸು ಮಾಡುವ ವೇಳಾಪಟ್ಟಿ (2-2 1/2 ಗಂಟೆಗಳು)

- 5 ಸೂಚನೆಗಳೊಂದಿಗೆ ಪರಿಚಯ (25 ನಿಮಿಷಗಳು)
    - ಅಂಶ (3 ನಿಮಿಷ)
    - ನಾಟಕ (10 ನಿಮಿಷ)
    - ವಸ್ತು (3 ನಿಮಿಷ)
    - ಪುರಾತನ ವಸ್ತು ಶಾಸ್ತ್ರ (2 ನಿಮಿಷ)
    - ಬೈಬಲ್ ಸನ್ನಿವೇಶ (7 ನಿಮಿಷ)
- ಮುಖ್ಯ ಪಾಠದ ಸಮಯ (35 ನಿಮಿಷ)
    - ಬೈಬಲ್ ಕಥೆ / ಕೇಸ್ ಪರಿಷ್ಕಾರ ಮಾಡಲಾಗಿದೆ (13 ನಿಮಿಷ)
    - ಅನ್ವಯ (2 ನಿಮಿಷ)
    - ಕಂಠಪಾಠ ವಾಕ್ಯ ಕಲಿತುಕೊಳ್ಳುವುದು (15 ನಿಮಿಷ)
    - ಮನೆಗೆಲಸ (3 ನಿಮಿಷ)
    - ದೇವರ ಡಿ.ಎನ್.ಎ. (2 ನಿಮಿಷ)
- ವಿನೋದ ಸಮಯ (1 ಗಂಟೆ)
    - ಆಟ (15 ನಿಮಿಷ)
    - ಚರ್ಚೆ (15 ನಿಮಿಷ)
    - ವಿದ್ಯಾರ್ಥಿ ಪುಸ್ತಕಗಳು (15 ನಿಮಿಷ)
    - ಲೂಕಸ್ ವಿಜ್ಞಾನ ಪ್ರಯೋಗ (15 ನಿಮಿಷ)



- “ಯಾರೆಂದು ಕಂಡುಹಿಡಿಯಿರಿ (ಗೆಸ್ ವೂ)” ಎನ್ನುವ ಆಟ (ಕಡ್ಡಾಯವಲ್ಲ) (30 ನಿಮಿಷ)



## ಸೂಚನೆಗಳು!

ಕೇಸನ್ನು ಪರಿಷ್ಕಾರ ಮಾಡಲು ನಿಮ್ಮ “ಪರಿಶೋಧಕರಿಗೆ” ಐದು ಸೂಚನೆಗಳೊಂದಿಗೆ ನಿಮ್ಮ ತರಗತಿಯನ್ನು ಪ್ರಾರಂಭಿಸಿಕೊಳ್ಳಿರಿ. ಇದಕ್ಕೆ ನಿಮಗೆ 5 ರಿಂದ 15 ನಿಮಿಷಗಳ ಸಮಯ ಬೇಕಾಗುತ್ತಿರಬಹುದು. ವಿನೋದವೆಲ್ಲ ನಿಮ್ಮ ಮೇಲೆಯೇ ಆಧಾರಪಟ್ಟಿರುತ್ತದೆ! ಪ್ರತಿಯೊಂದು ಪಾಠಕ್ಕೆ 5 ಸೂಚನೆಗಳಿರುತ್ತವೆ. ಆ ಸೂಚನೆಗಳನ್ನು ನೀವು ನಿಮ್ಮ ಮೊಬೈಲ್.ನಲ್ಲಿ ಉಪಯೋಗಿಸಿಕೊಳ್ಳಬಹುದು ಅಥವಾ ತಿಳಿಯಪಡಿಸುವುದಕ್ಕೆ ತರಗತಿಯಲ್ಲಿಗೆ ಆ ಸೂಚನೆಗಳನ್ನು ಉಂಟುಮಾಡಬಹುದು.

### ಸೂಚನೆ #1 ಅಂಶ

ಮೊಟ್ಟಮೊದಲನೇ ಸೂಚನೆ ಏನೆಂದರೆ ಪಾಠಕ್ಕಾಗಿ ಕೊಡಲ್ಪಟ್ಟ ಅಂಶವಾಗಿರುತ್ತದೆ. ಅಂಶವನ್ನು ವಿದ್ಯಾರ್ಥಿಗಳೆಲ್ಲರು ಓದಬೇಕು ಅಥವಾ ಅದನ್ನು ನೋಡುವುದಕ್ಕೆ ಅವರು ಒಂದು ಕಾಗದ ಮೇಲೆ ಮುದ್ರಣ ತೆಗೆದುಕೊಳ್ಳಬಹುದು ಉದಾಹರಣೆಗೆ, ದಾವೀದ ಮತ್ತು ಗೊಲ್ಯಾತರ ಮೇಲೆ ಪಾಠ ಇದೆಯೆಂದು ತಿಳಿದುಕೊಳ್ಳೋಣ, ಅದಕ್ಕೆ “ಮೊಂಡಾದ ಶಕ್ತಿಗೆ ಆಘಾತ” ಎಂದು ಕರೆಯಬಹುದು. ಮೊಂಡಾದ ಶಕ್ತಿಗೆ ಆಘಾತ ಎನ್ನುವುದು ದಾವೀದನು ಒಂದು ನದಿಯೊಳಗಿನಿಂದ ಕಲ್ಲನ್ನು ತೆಗೆದುಕೊಂಡು ಗೊಲ್ಯಾತನ ಹಣೆಯ ಮೇಲೆ ಹೊಡೆದು ಸಾಯಿಸಿದ್ದನ್ನು ಸೂಚಿಸುತ್ತದೆ. ಪರಿಶೋಧಕರು ಮತ್ತು ಫೋರನ್ಸಿಕ್ ವಿಶ್ಲೇಷಕರಿಂದ ತೆಗೆಕೊಂಡಿರುವ ಪದಗಳು ನಿಮ್ಮ ಬೈಬಲ್ ತರಗತಿಗೆ ವಿನೋದವನ್ನು ಕೊಡುತ್ತವೆ. ನಿಮ್ಮ ಉಪಾಧ್ಯಾಯ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ತೋರಿಸಬಾರದೆಂದು ನೆನಪಿಟ್ಟುಕೊಳ್ಳಿರಿ. ಅದರಿಂದ ಅವರು ಮೋಸಮಾಡುವುದಿಲ್ಲ ಮತ್ತು ಬೈಬಲ್ ಕಥೆಯನ್ನು ನೋಡುವುದಿಲ್ಲ.



### ಸೂಚನೆ #2 ನಾಟಕ

ಪ್ರತೀ ವಾರ ಒಂದು ನಾಟಕಕ್ಕೆ ಎರಡನೇ ಸೂಚನೆಯನ್ನು ಕೊಡಲಾಗಿದೆ. ನಿಮ್ಮ ಉಪಾಧ್ಯಾಯರು ಈ ಕಥೆಯನ್ನು ನಾಟಕ ಮಾಡಿ ತೋರಿಸಬೇಕು ಅಥವಾ ನಿಮ್ಮ ವಿದ್ಯಾರ್ಥಿಗಳು ನಾಟಕ ಮಾಡಿ ತೋರಿಸಬಹುದು. ಬೈಬಲ್ ಕಥೆಯನ್ನು ಸಂಪೂರ್ಣವಾಗಿ ತಿಳಿಸಿದೇ ನಾಟಕ ರೂಪದಲ್ಲಿ ಕೊಡುವುದೇ ಇನ್ನೊಂದು ಆಲೋಚನೆ. ಗೊಲ್ಯಾತ ಮತ್ತು ದಾವೀದ ಮೇಲಿನ ಪಾಠದಲ್ಲಿ, ಸೈನಿಕನು ಮನೆಗೆ ಬಂದು, ತನ್ನ ಹೆಂಡತಿಯೊಂದಿಗೆ ಮಾತನಾಡುತ್ತಿರುತ್ತಾರೆ. ಸೈನಿಕನು ಫಿಲಿಸ್ತಿಯನ್ ಆಗಿರುತ್ತಾನೆ ಮತ್ತು ಅವರು ಹೇಗೆ ಯುದ್ಧದಲ್ಲಿ ಸೋತಿದ್ದಾರೆಂದು ಮಾತನಾಡುತ್ತಿರುತ್ತಾನೆ. ಅವರು “ಬಲವಾಗಿರುವ” ಒಬ್ಬ ಮನುಷ್ಯನನ್ನು ಸೂಚಿಸುತ್ತಾರೆ ಮತ್ತು ತನ್ನ ಸಹೋದರನು ಕೂಡ ದೊಡ್ಡವನಾಗಿರುತ್ತಾನೆ. (ಗೊಲ್ಯಾತನ ಹೆಸರು ಹೇಳದಂತೆ ವ್ಯವಹರಿಸಬೇಕು). ಗೊಲ್ಯಾತನಿಗೆ “ಬಲವಾಗಿರುವ” ಒಬ್ಬ ತಮ್ಮನಿದ್ದಾನೆಂದು ಬೈಬಲ್ ಹೇಳುವುದಿಲ್ಲ, ಇದು ಕೇವಲ ಬೈಬಲ್ ಕಥೆಯನ್ನು ನಿಮ್ಮ ವಿದ್ಯಾರ್ಥಿಗಳು ಕಂಡುಕೊಳ್ಳುವುದಕ್ಕೆ ಮಾತ್ರ ಮಾಡುತ್ತಿರುವ ವಿನೋದಾತ್ಮಕವಾದ ನಾಟಕವಷ್ಟೇ.



## 3 ಸೂಚನೆ #3 ವಸ್ತು

ಪ್ರತಿಯೊಂದು ಪಾಠಕ್ಕಾಗಿ ನೀವು ತರಗತಿಗೆ ತೆಗೆದುಕೊಂಡು ಬರಬೇಕಾದ ಒಂದು ವಸ್ತುವು ಇರುತ್ತದೆ. ಇದು ನಿಮ್ಮ ವಿದ್ಯಾರ್ಥಿಗಳು ಮುಟ್ಟಿಕೊಳ್ಳುವ ಭೌತಿಕವಾದ ವಸ್ತುವಾಗಿರುತ್ತದೆ. ಇದು ಬೈಬಲ್ ಕಥೆ ಏನಾಗಿರುತ್ತದೆಯೆಂದು ಅವರು ಕಂಡು ಹಿಡಿಯುವುದಕ್ಕೆ ಸಹಾಯ ಮಾಡುತ್ತದೆ. ಉದಾಹರಣೆಗೆ, ನಿಮಗೆ ಕೊಟ್ಟಿರುವ ಪಾಠದಲ್ಲಿ, ತರಗತಿಗೆ ತೆಗೆದುಕೊಂಡು ಬರಬೇಕಾದ ವಸ್ತುವು 5 ಕಲ್ಲುಗಳೆಂದು ಹೇಳಲ್ಪಟ್ಟಿದೆ. ಈ ಕಲ್ಲುಗಳನ್ನು ವಿದ್ಯಾರ್ಥಿಗಳು ನೋಡಿದಾಗ, ದಾವೀದನು ನದಿಯ ಬಳಿ 5 ಕಲ್ಲುಗಳನ್ನು ತೆಗೆದುಕೊಂಡಿರುವ ಕಥೆಯನ್ನು ಈ ಸಮಯದಲ್ಲಿ ವಿದ್ಯಾರ್ಥಿಗಳು ಕಂಡುಹಿಡಿದರೆ, ಅದನ್ನು ಒಪ್ಪಿಕೊಳ್ಳಬೇಡಿರಿ ಅಥವಾ ತಿರಸ್ಕರಿಸಬೇಡಿರಿ. ಹಾಗೆಯೇ ನೀವು ನಿಮ್ಮ ವಿದ್ಯಾರ್ಥಿಗಳಿಗೆ ಸುಳ್ಳು ಕೂಡ ಹೇಳಬಾರದು, ಆದರೆ ನೀವು ಸಾಧ್ಯವದಷ್ಟು ಸಮಯ ವಿದ್ಯಾರ್ಥಿಗಳು ಇದು ಯಾವ ಕಥೆಯೆಂದು ಪ್ರಶ್ನಿಸುವುದನ್ನು ಮುಂದೆವರಿಸಿರಿ.

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ




ಪ್ರತಿಯೊಂದು ಪಾಠಕ್ಕೆ ನಾಲ್ಕನೆಯ ಸೂಚನೆ ಏನಂದರೆ ಪುರಾತನ ವಸ್ತು ಶಾಸ್ತ್ರದ ಚಿತ್ರವಾಗಿರುತ್ತದೆ. ಇಲ್ಲಿ ಕೊಟ್ಟಿರುವ ಚಿತ್ರವು, ಈಗಿನ ಗಾತ್ ಪಟ್ಟಣದ ಆಧುನಿಕ ಚಿತ್ರ. ಇದೀಗ ಟೆಲ್ ಜಫಿಟ್ ನ್ಯಾಷನಲ್ ಪಾರ್ಕ್.ನೊಳಗೆ ಕಂಡು ಬರುತ್ತದೆ. (ರಹಸ್ಯ: ಗೊಲ್ಯಾತನ ಊರು ಫಿಲಿಷ್ಟಿನ್ ಪಟ್ಟಣ.) ನೀವು ಈ ಚಿತ್ರವನ್ನು ತೋರಿಸಿ, ರಹಸ್ಯದ ಮಾತು ಹೇಳದಂತೆ, ಇದು ಪುರಾತನದ ಗಾತ್ ಪಟ್ಟಣದ ಚಿತ್ರವೆಂದು ಹೇಳಬೇಕು. ಅನೇಕ ಜನರಿಗೆ ಗೊಲ್ಯಾತನ ಹುಟ್ಟಿದ ಊರು ಗಾತ್ ಎಂಬುವ ವಿಷಯ ಗೊತ್ತಿರುವುದಿಲ್ಲ. ಆದ್ದರಿಂದ ನಿಮ್ಮ ಪಾಠವು ಇನ್ನೂ ರಹಸ್ಯವಾಗಿರುತ್ತದೆ!



## 5 ಸೂಚನೆ #5 ಬೈಬಲ್ ಸನ್ನಿವೇಶ

ಪ್ರತೀವಾರ ಕೊನೆಯ ಸೂಚನೆಯು ಬೈಬಲ್ ಸನ್ನಿವೇಶವಾಗಿರುತ್ತದೆ. ನಿಮ್ಮ ಪರಿಶೋಧಕರು ಪರಿಶೋಧನೆ ಮಾಡುವುದಕ್ಕೆ ಅಪರಾಧ ಸನ್ನಿವೇಶದಂತೆ ಕಾಣಿಸಿಕೊಳ್ಳುವ ರೀತಿಯಲ್ಲಿ ನೀವೇ ಸೃಷ್ಟಿಸಬೇಕು.



ಉದಾಹರಣೆಗೆ, ಅನನೀಯ ಮತ್ತು ಸಪ್ಫೀರಳು ದೇವರಿಗೆ ಸುಳ್ಳು ಹೇಳಿರುವ ಪಾಠದಿಂದ ನೀವು ಬೈಬಲ್ ಸನ್ನಿವೇಶವನ್ನು ಬರೆಯಬಹುದು. ನೀವು ನಿಮ್ಮ ಮಕ್ಕಳು ಪರಿಶೋಧನೆ ಮಾಡುವುದಕ್ಕೆ ನಾವು ಚಿತ್ರದಲ್ಲಿ ಕೊಟ್ಟಿರುವಂತೆ ಗೊಂಬೆಗಳನ್ನು ಬರೆಯಬಹುದು, ಅಥವಾ ನೀವೇ ನಿಮ್ಮದೇಯಾದ ಸೃಜನಾತ್ಮಕತೆಯಿಂದ ಸನ್ನಿವೇಶವನ್ನು ಸೃಷ್ಟಿಸಬಹುದು. ಇಲ್ಲಿ ನೀವು ನೋಡುವುದಾದರೆ, ಈ ಸಭೆಯು ತಮ್ಮ ವಿದ್ಯಾರ್ಥಿಗಳ ಪರಿಶೋಧನೆಗಾಗಿ ಹೆಚ್ಚಾದ ವಿನೋದವನ್ನು ಸೃಷ್ಟಿಸಲು, ನೆಲದ ಮೇಲೆ ಹಾಕಿರುವ

ಸೂಚನೆಗಳ ಸುತ್ತಮುತ್ತ ಪೋಲೀಸ್ ಟೇಪ್.ನ್ನು ಇಟ್ಟಿದ್ದಾರೆ ಮತ್ತು ಅವರು ಶವಗಳ ಗೊಂಬೆಗಳ ಗೆರೆಗಳಿಗೆ ಟೇಪ್.ನ್ನು ಉಪಯೋಗಿಸಿದ್ದಾರೆ.

ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕಾರ ಮಾಡಲಾಗಿದೆ!

ಒಂದುಬಾರಿ ನಿಮ್ಮ ವಿದ್ಯಾರ್ಥಿಗಳು ಸೂಚನೆಗಳನ್ನು ಪರಿಶೋಧನೆ ಮಾಡಿದನಂತರ, ಹಾಗೆಯೇ ಕೇಸನ್ನು ಪರಿಷ್ಕಾರ ಮಾಡುವುದಕ್ಕೆ ಅನುಮತಿಸಿರಿ ಅಥವಾ ಈ ವಾರದಲ್ಲಿ ಯಾವ ಕಥೆಯನ್ನು ನೀವು ಹೇಳುತ್ತಿರುವಿರೋ ಅದನ್ನು ಅವರು ಕಂಡುಹಿಡಿಯುವದಕ್ಕೆ ಸಮಯವನ್ನು ಕೊಡಿರಿ. ಅನೇಕ ವರ್ಷಗಳ ಕಾಲ ಸಭೆಗೆ ಬರಲಾರದ ಮಕ್ಕಳು ನಿಮ್ಮ ಹತ್ತಿರವಿದ್ದರೆ, ಅವರು ಬೈಬಲ್ ಕಥೆಯನ್ನು ಕಂಡುಹಿಡಿಯಲು ತುಂಬಾ ಕಷ್ಟಪಡುತ್ತಿರಬಹುದು. ಅದು ಸಮಸ್ಯೆಯಂತೆ ನೋಡದೆ, ಅವರಿಗೆ ಬೈಬಲ್ ಕಥೆಯನ್ನು ಹೇಳಿರಿ. ಆದರೂ ಅವರು ಸರಿಯಾಗಿ ಕಂಡುಹಿಡಿ ಯಲಿಲ್ಲವೆಂದರೆ, ಸೂಚನೆಗಳೆಲ್ಲವೂ ಕಥೆಗೋಸ್ಕರ ತುಂಬಾ ವಿನೋದವುಳ್ಳ ಪರಿಚಯವನ್ನು ಕೊಡುತ್ತವೆ. ಅದು ಒಂದು ಪ್ರತ್ಯೇಕವಾದ ಸಂಡೇ ಸ್ಕೂಲ್.ನ್ನು ನಿಮಗೆ ಕೊಡುತ್ತದೆ.

## ಬೈಬಲ್ ಕಥೆ



ಎಲ್ಲಾ ಸೂಚನೆಗಳು ಆದಮೇಲೆ, ಈ ವಾರದಲ್ಲಿ ಯಾವ ಬೈಬಲ್ ಕಥೆಯನ್ನು ಕಲಿತುಕೊಳ್ಳುತ್ತೀವೆಂದು ನಿಮ್ಮ ವಿದ್ಯಾರ್ಥಿಗಳಿಗೆ ಹೇಳಿರಿ. ಸಹಜವಾಗಿ ಸಂಡೇ ಸ್ಕೂಲ್ ತರಗತಿಯಲ್ಲಿ ಹೇಳುವಂತೆಯೇ ಈಗ ಕಥೆಯನ್ನು ಹೇಳಬೇಕು. ನಿಮಗೆ ಕೊಡಲ್ಪಟ್ಟ ಅನುಬಂಧ ಪುಸ್ತಕದಲ್ಲಿ ಬೈಬಲ್ ಕಥೆಯನ್ನು ನೋಡಬಹುದು, ಅಥವಾ ಉಪಾಧ್ಯಾಯರ ಪುಸ್ತಕದ ಸಹಾಯದೊಂದಿಗೆ ನೀವು ಕಥೆಯನ್ನು ಹೇಳಬಹುದು. ಕಥೆಯನ್ನು ಹೇಳುವುದಕ್ಕೆ ನಮ್ಮ ಉಪಾಧ್ಯಾಯರ ಪುಸ್ತಕವನ್ನು ನೀವು ಉಪಯೋಗಿಸುವುದಾದರೆ, ಅವಾಗಲೂ ನಿಮ್ಮ ಹತ್ತಿರ ಬೈಬಲ್.ನ್ನು ಇಟ್ಟುಕೊಂಡಿರುವುದು ಒಳ್ಳೇಯದು. ಅಗ ನೀವು ಬೈಬಲಿನಿಂದ ಕಥೆಯನ್ನು ಓದಿ ಹೇಳಬಹುದು. ಕಥೆಯಲ್ಲಿರುವವರಲ್ಲಿ ಒಬ್ಬರ ಚಿತ್ರಕ್ಕೆ ಬಣ್ಣ ಹಚ್ಚುವುದು ಪ್ರತೀ ವಾರ ಇರುತ್ತದೆ. ಕೆಲವೊಂದುಸಲ ಕಥೆಯ ನಾಯಕನಿಗೆ ಬಣ್ಣ ಹಚ್ಚುತ್ತಾರೆ, ಮತ್ತೊಂದುಸಲ ಕಥೆಯ ವಿಲನ್.ಗೆ ಬಣ್ಣ ಹಚ್ಚುತ್ತಾರೆ. ದಾವೀದ ಮತ್ತು ಗೊಲ್ಯಾತನ ಪಾಠದಲ್ಲಿ, ನಿಮ್ಮ ವಿದ್ಯಾರ್ಥಿಗಳಿಗೆ ತೋರಿಸುವದಕ್ಕೆ ಗೊಲ್ಯಾತನ ಚಿತ್ರವಿದೆ. ಪ್ರತಿಯೊಬ್ಬ ವಿದ್ಯಾರ್ಥಿ ತಿನ್ನುವುದಕ್ಕೆ ಕೊಡಲು, ನಿಮಗೆ ಕೊಡಲ್ಪಟ್ಟ ಬೈಬಲ್ ವ್ಯಕ್ತಿಗಳ ಕಾರ್ಡುಗಳನ್ನು ಉಪಯೋಗಿಸಿರಿ. ಇವು ಹಾಜರಾತಿ ಕಾರ್ಡುಗಳಾಗಿ ನೀವು ಉಪಯೋಗಿಸಬಹುದು, ಅಥವಾ "ಯಾರೆಂದು ಕಂಡುಹಿಡಿಯಿರಿ (ಗೆಸ್ ವೂ)" ಎನ್ನುವ ಆಟವನ್ನು ಆಡುವುದಕ್ಕೆ ಕೂಡ ಉಪಯೋಗಿಸಬಹುದು. ಈ ಆಟದ ಕುರಿತಾದ ಸೂಚನೆಗಳನ್ನು "ಹೇಗೆ ಉಪಯೋಗಿಸಬೇಕು" ಎನ್ನುವ ಈ ವಿಭಾಗದ ಕೊನೆಯ ಭಾಗದಲ್ಲಿ ತಿಳಿಸಲಾಗಿದೆ.

## ಅನ್ವಯ

ಪಾಠ ಹೇಳಿದನಂತರ ಜೀವನಕ್ಕೆ ಸರಿಯಾಗುವ ಅನ್ವಯವನ್ನು ಹಂಚಿಕೊಳ್ಳಿರಿ. ದಾವೀದ ಮತ್ತು ಗೊಲ್ಯಾತನ ಕಥೆಗಾದರೆ, "ನಾನು ಚಿಕ್ಕವನಾಗಿದ್ದರೂ ನಾನು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬಲ್ಲೆ" ಎನ್ನುವ ಅನ್ವಯವನ್ನು ಉಪಯೋಗಿಸಬಹುದು. ದೊಡ್ಡ ಕಾರ್ಯವನ್ನು ಮಾಡುವುದಕ್ಕೆ ದೇವರು ಚಿಕ್ಕವನಾಗಿರುವ ದಾವೀದನನ್ನು ಹೇಗೆ ಉಪಯೋಗಿಸಿಕೊಂಡರೆಂದು ಮತ್ತು ನಿಮ್ಮ ಮಕ್ಕಳನ್ನೂ ದೇವರು ಹೇಗೆ ಉಪಯೋಗಿಸಿಕೊಳ್ಳುತ್ತಾರೆನ್ನುವುದರ ಕುರಿತಾಗಿ ನಿಮ್ಮ ಮಕ್ಕಳೊಂದಿಗೆ ಮಾತನಾಡಿರಿ,

## ಕಂಠಪಾಠ ವಾಕ್ಯ

ಪ್ರತಿಯೊಂದು ವಾರಕ್ಕೆ ಕೊಡಲ್ಪಟ್ಟ ಕಂಠಪಾಠ ವಾಕ್ಯವು ಜೀವನಕ್ಕೆ ಅಳವಡಿಸುವ ಮಾತುಗಳಾನುಸವಾಗಿ ಹೋಗುವುದಕ್ಕೆ ಆಯ್ಕೆ ಮಾಡಲಾಗಿದೆ. ಬೈಬಲ್ ವಾಕ್ಯವನ್ನು ನಿಮ್ಮ ಮಕ್ಕಳು ಕಂಠಪಾಠಲು ಸ್ವಲ್ಪ ಸಮಯ ಸಹಾಯ ಮಾಡಿರಿ.

## ಮನೆಗೆಲಸ

ವಾರವೆಲ್ಲ ಕ್ರಿಯಾ ರೂಪದಲ್ಲಿ ನಿಮ್ಮ ಮಕ್ಕಳು ನಡೆಯುವಂತೆ ನಿಮ್ಮ ಮಕ್ಕಳಿಗೆ ಪ್ರತೀ ವಾರವು ಒಂದು ಮನೆಗೆಲಸವನ್ನು ಕೊಡಲಾಗುತ್ತದೆ. ಈ ಪಠ್ಯಕ್ರಮದಲ್ಲಿ ಇದು ತುಂಬಾ ಪ್ರಾಮುಖ್ಯವಾದ ವಿಷಯ! ನಾವು ಕೇವಲ ವಾಕ್ಯವನ್ನು ಕೇಳುವವರಾಗಿರಬೇಕೆನ್ನುವುದೇ ದೇವರ ಬಯಕೆಯಲ್ಲ, ಆದರೆ ಅದರ ಪ್ರಕಾರ ನಡೆಯುವುದೇ ಆತನ ಇಷ್ಟವಾಗಿದೆ! ಸಭೆಯಲ್ಲಿ ನಿಮ್ಮ ವಿದ್ಯಾರ್ಥಿಗಳು ಕಲಿತುಕೊಂಡಿರುವುದನ್ನು ಹೊರ ಪ್ರಪಂಚದಲ್ಲಿಯೂ ಅದನ್ನು ಅನುಸರಿಸಿ ಜೀವಿಸಬೇಕು. ಪ್ರತೀ ವಾರ ನಿಮ್ಮ ಕಲಿತುಕೊಳ್ಳುವ ಪಾಠವನ್ನು ಕ್ರಿಯಾ ರೂಪದಲ್ಲಿ ತೋರಿಸದೆ, ಕೇವಲ ಬೈಬಲ್ ವಾಕ್ಯಗಳನ್ನು ಮತ್ತು ಸಿದ್ಧಾಂತವನ್ನು ಕಂಠಪಾಠ ಮಾಡುವುದರಿಂದ ಫರಿಸಾಯರನ್ನಾಗಿ ಮಾಡಬೇಡಿರಿ. ನಾವು ವೇಷಧಾರಿಗಳನ್ನು ತಯಾರುಗೊಳಿಸುವ ತಪ್ಪನ್ನು ಮಾಡಬಾರದು! ನೀವು ನಿಮ್ಮ ವಿದ್ಯಾರ್ಥಿಗಳನ್ನು ವೇಷಧಾರಿಗಳಾಗಿ ಪ್ರೋತ್ಸಾಹ ಮಾಡುತ್ತಿಲ್ಲವೆಂದು ತಿಳಿದುಕೊಳ್ಳಬೇಕೆಂದರೆ ಒಂದೇ ಒಂದು ಮಾರ್ಗವಿದೆ. ಅದೇನಂದರೆ ಅವರು (ವಿದ್ಯಾರ್ಥಿಗಳು) ವಾರ ಮಧ್ಯೆದಲ್ಲಿ ಕಲಿತುಕೊಂಡಿರುವ ಪಾಠದ ಅನುಸಾರವಾಗಿ ನಡೆದುಕೊಳ್ಳುವುದೇ.

## ದೇವರ ಡಿ.ಎನ್.ಎ.




ದೇವರ ಡಿ.ಎನ್.ಎ. ಎನ್ನುವುದು ದೇವರ ಕುರಿತಾಗಿ ನಾವು ಕಲಿತುಕೊಳ್ಳುವ ಗುಣಲಕ್ಷಣವಾಗಿರುತ್ತದೆ. ಇದು ಬೈಬಲ್ ವಾಕ್ಯಾನುಸಾರವಾಗಿರುತ್ತದೆ. ಉದಾಹರಣೆಗೆ, ದಾವೀದ ಮತ್ತು ಗೊಲ್ಯಾತನ ಪಾಠದಲ್ಲಿ, ದೇವರು ತನ್ನ ಪ್ರಣಾಳಿಕೆಗಳನ್ನು ನೆರವೇರಿಸಿಕೊಳ್ಳಲು, ಜನರನ್ನು ಉಪಯೋಗಿಸಿಕೊಳ್ಳುತ್ತಾರೆನ್ನುವ ಪಾಠವನ್ನು ನಾವು ಕಲಿತುಕೊಳ್ಳಬಹುದು.

# ವಿನೋದ ಸಮಯ!

## ಆಟ

ನಿಮ್ಮ ತರಗತಿಗೆ ಆಟಗಳು ತುಂಬಾ ಪ್ರಾಮುಖ್ಯ, ನಿಮ್ಮ ವಿದ್ಯಾರ್ಥಿಗಳು ತಿರುಗಿ ತರಗತಿಗೆ ಬರುವುದಕ್ಕೆ ಸಹಾಯ ಮಾಡುತ್ತವೆ! ಮಕ್ಕಳಿಗೆ ಆಟಗಳೆಂದರೆ ತುಂಬಾ ಇಷ್ಟ. ಪ್ರತಿಯೊಂದು ತರಗತಿಯಲ್ಲಿ ಆಟವನ್ನು ಸೇರಿಸಿದರೆ, ವಾರ ವಾರಕ್ಕೂ ನಿಮ್ಮ ತರಗತಿ ಬೆಳೆಯುವುದನ್ನು ನೋಡುವಿರಿ. ನಿಮ್ಮ ತರಗತಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿದ್ದರೆ, ನೀವು ಅನೇಕ ಜೀವನಗಳನ್ನು ಮಾರ್ಪಡಿಸುವಿರಿ!

## ಚರ್ಚೆ



ಸವಾಲುನೊಂದಿಗೆ ಕೂಡಿರುವ ಚರ್ಚೆಯಲ್ಲಿ ನಿಮ್ಮ ಮಕ್ಕಳೆಲ್ಲರನ್ನು ಚುರುಕಾಗಿರುವುದಕ್ಕೆ ನಿಮಗೆ ಚರ್ಚೆ ಮಾಡಿಕೊಳ್ಳಲು ಮೂರು ಪ್ರಶ್ನೆಗಳು ಕೊಟ್ಟಿದ್ದೇವೆ. ಆ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿಕೊಂಡು ಹೋಗುವುದು ಸರಿಯಾದ ಪದ್ಧತಿಯಲ್ಲ. ಆದರೆ ಪ್ರತಿಯೊಂದು ಪ್ರಶ್ನೆಯ ಕುರಿತಾಗಿ ಅವರು ನಿಜವಾಗಿ ಮಾತನಾಡಿಕೊಳ್ಳುವುದಕ್ಕೆ ಅವರಿಗೆ ಸಮಯವನ್ನು ಕೊಡಿರಿ. ಅವರು ಎಷ್ಟು ಹೆಚ್ಚಾಗಿ ವಾದಿಸುತ್ತಾರೋ, ಅಷ್ಟೇ ಒಳ್ಳೆಯದನ್ನು ನೀವು ಅವರಿಗೆ ಮಾಡುವಿರಿ! ಆದುದರಿಂದ, ದೊಡ್ಡ ವಿವಾದವುಳ್ಳ ಚರ್ಚೆ ನಡೆಯುವುದಕ್ಕೆ ಪ್ರಯತ್ನಿಸಿರಿ. ಆಗ ನೀವು ನಿಜವಾದ ಅಭಿಪ್ರಾಯಗಳನ್ನು ನಿಮ್ಮ ಮಕ್ಕಳಿಂದ ಪಡೆದುಕೊಳ್ಳುವಿರಿ. ನಾವು ಆ ಪ್ರಶ್ನೆಗಳಿಗೆ ಉತ್ತರಗಳನ್ನು ಉಪಾಧ್ಯಾಯರ ಪುಸ್ತಕದಲ್ಲಿ ಕೊಟ್ಟಿದ್ದೇವೆ. ಆದ್ದರಿಂದ ಪ್ರಶ್ನೆಯ ಚರ್ಚೆಯ ಕೊನೆಯ ಭಾಗದಲ್ಲಿ ನೀವೂ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು

ನಿಮ್ಮ ತರಗತಿಗೆ ಚಟುವಟಿಕೆಗಳಾಗಿ ಉಪಯೋಗಿಸುವುದಕ್ಕೆ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಪುಟಗಳು ಕೂಡ ಇವೆ. ಮಕ್ಕಳಿಗೆ ಬಣ್ಣ ಹಚ್ಚುವುದೆಂದರೆ ಇಷ್ಟ ಮತ್ತು ಪದಗಳನ್ನು ಕಂಡುಹಿಡಿಯುವುದೆಂದರೆ ಇಷ್ಟ. ನಿಮ್ಮ ತರಗತಿಯನ್ನು ವಿನೋದಾತ್ಮಕವಾಗಿ ಮಾಡಿಕೊಳ್ಳಲು ನಮ್ಮ ವಿದ್ಯಾರ್ಥಿ ಪುಸ್ತಕಗಳನ್ನು ಉಪಯೋಗಿಸುವಿರೆಂದು ನಾವು ನಿರೀಕ್ಷಿಸುತ್ತೇವೆ. ಈ ವಿಭಾಗದಲ್ಲಿ, ವಿದ್ಯಾರ್ಥಿ ಪುಸ್ತಕಗಳಲ್ಲಿ 4ನೆ ಪುಟದಲ್ಲಿ ಪಜಿಲ್.ಗಳಿಗೆ ಉತ್ತರಗಳನ್ನು ಕಂಡುಕೊಳ್ಳುವಿರಿ.

## ಲೂಕಸ್ ರವರ ಪ್ರಯೋಗ

ನಿಮ್ಮ ತರಗತಿಯ ಕೊನೆಯ ಚಟುವಟಿಕೆ ಕ್ರೇಜಿ ವಿಜ್ಞಾನಿಯಾದ ಡಾಕ್ಟರ್ ಲೂಕಸ್.ರವರೊಂದಿಗೆ ವಿಜ್ಞಾನದ ಪ್ರಯೋಗವಾಗಿರುತ್ತದೆ! ಪ್ರತೀ ವಾರ ಇವರು ನಿಮಗೆ ವಿಜ್ಞಾನದ ಪ್ರಯೋಗವು ಕೊಡುತ್ತಾರೆ, ಅದನ್ನು ನೀವು ತರಗತಿಯಲ್ಲಿ ಒಂದು ಚಟುವಟಿಕೆಯಾಗಿ ಮಾಡಬಹುದು. ನೀವು ಅವರ ವೀಡಿಯೋಗಳನ್ನು ನೋಡಬಹುದು, ಅಥವಾ ಈ ಚಿತ್ರದಲ್ಲಿ ಒಬ್ಬ ಉಪಾಧ್ಯಾಯಿನಿ ತನ್ನ ಪ್ರಯೋಗಶಾಲೆಯ ಬಟ್ಟೆಗಳನ್ನು ಧರಿಸಿಕೊಂಡು ಪ್ರಯೋಗ ಮಾಡುತ್ತಿರುವಂತೆಯೇ, ನೀವೂ ಪ್ರಯೋಗವನ್ನು ಮಾಡಬಹುದು.




## ಯಾರೆಂದು ಕಂಡುಹಿಡಿಯಿರಿ ಎನ್ನುವ ಆಟ

ನಿಮ್ಮ ತರಗತಿಯಲ್ಲಿ ಕೊನೆಯದಾಗಿ ಮಾಡಬಹುದಾದ ಚಟುವಟಿಕೆ ಏನೆಂದರೆ ಅದು ಒಂದು ಆಟ. "ಯಾರೆಂದು ಕಂಡುಹಿಡಿಯಿರಿ" ಎಂದು ಕರೆಯಲ್ಪಡುವ ಬೈಬಲ್ ವ್ಯಕ್ತಿಗಳ ಕಾರ್ಡುಗಳೊಂದಿಗೆ ಈ ಆಟ ಆಡಬಹುದು. ಇದು ಸಾಂಪ್ರದಾಯಿಕವಾದ ಕೆಳಗೆ ಕುಳಿತುಕೊಂಡು ಇಬ್ಬರು ಅಥವಾ ಮೂವರು ಸಹಭಾಗಿಗಳಾಗಿ ಆಡುವ ಆಟ ಅಥವಾ ಇಬ್ಬರು ಮಕ್ಕಳು ಒಬ್ಬರಿಗೊಬ್ಬರು ಎದುರಾಳಿ ಆಡುವ ಆಟ.




ಪ್ರತಿಯೊಬ್ಬ ವಿದ್ಯಾರ್ಥಿಗೆ 13 ಕಾರ್ಡುಗಳನ್ನು ಮುದ್ರಿಸಿ ಕೊಡಿರಿ. ಉಪಾಧ್ಯಾಯರ ಹತ್ತಿರವೂ ಒಂದು ಸೆಟ್ ಕಾರ್ಡುಗಳು ಇರಬೇಕು. ಈ ಆಟವನ್ನು ಆಡುವ ಪ್ರತಿಯೊಬ್ಬ ವಿದ್ಯಾರ್ಥಿ ಬೈಬಲ್ ವ್ಯಕ್ತಿಗಳ ವಿಷಯದಲ್ಲಿ ತುಂಬಾ ಸುಪರಿಚಿತರಾಗುತ್ತಾರೆ.

ಕಾರ್ಡುಗಳನ್ನು ನಿಲ್ಲಿಸುವುದಕ್ಕೆ ಒಂದು ದಪ್ಪ ಕಾಗದವನ್ನು ತೆಗೆದುಕೊಂಡು ಮಡಿಚಿರಿ. ನಿಮ್ಮ ಸಹಭಾಗಿ ಅಥವಾ ನಮ್ಮ ಉಪಾಧ್ಯಾಯರ ಬಳಿ ಬೈಬಲ್ ವ್ಯಕ್ತಿಯ ಯಾರ ಕಾರ್ಡು ಇದೆಯೆಂದು ಊಹಿಸಿ ಹೇಳಬೇಕು. ನಿಮ್ಮ ಸಹಭಾಗಿಯಿಂದ ಆ ಕಾರ್ಡನ್ನು ರಹಸ್ಯವಾಗಿ ಇಡುತ್ತಾ, ಪ್ರತಿಯೊಬ್ಬರೂ ಬೈಬಲ್ ವ್ಯಕ್ತಿಯ ಕಾರ್ಡನ್ನು ಆಯ್ಕೆಮಾಡಿಕೊಳ್ಳಬೇಕು.

ಬೈಬಲ್ ವ್ಯಕ್ತಿಗಳ ವಿವಿಧವಾದ ಲಕ್ಷಣಗಳನ್ನು ನೋಡಿರಿ, ಅದರಲ್ಲಿ ವರ ಕಣ್ಣುಗಳ ಬಣ್ಣವನ್ನು, ಕೂದಲಿನ ಬಣ್ಣವನ್ನು ಕೂಡ ಸೇರಿಸಬೇಕು, ಅವರಿಗೆ ಗಡ್ಡ ಬಂದಿದ್ದರೆ, ಅವರು ಟೋಪಿಯನ್ನು, ಅವರ ಮೂಗು ಅಥವ ಕಿವಿಗಳ ಸೈಜುಗಳನ್ನು ಇಟ್ಟುಕೊಂಡಿದ್ದರೆ, ಮತ್ತು ಅವರು ಸ್ತ್ರೀಯೋ



ಅಥವಾ ಪುರುಷನೋ ಎನ್ನುವವುಗಳನ್ನು ಕೂಡ ಸೇರಿಸಬೇಕು. ಈ ಎಲ್ಲಾ ವಿಷಯಗಳನ್ನು ಮೊದಲ ಆಟಗಾರನು ಕೇಳುವುದಕ್ಕೆ ಪ್ರಾರಂಭಿಸುತ್ತಾನೆ, ಮತ್ತು ಎರಡನೇ ಆಟಗಾರನು "ಹೌದು" ಅಥವಾ "ಅಲ್ಲ" ಎಂದು ಎರಡು ಪದಗಳ ಉತ್ತರ ಮಾತ್ರವೇ ಕೊಡಬೇಕು. ಒಂದು ತಿರುಗುವಿಕೆಗೆ ಒಂದು ಪ್ರಶ್ನೆ ಮಾತ್ರ ಅನುಮತಿಸಬೇಕು. ಒಂದುಸಲ ನೀವು ಉತ್ತರ ಕೇಳಿಸಿಕೊಂಡಾಗ, ನಿಮ್ಮ ಹತ್ತಿರವಿಲ್ಲದ ಕಾರ್ಡುಗಳನ್ನು ಕೆಳಗಿಡಬಹುದು. ಉದಾಹರಣೆಗೆ, ನೀವು ಸ್ತ್ರೀ ಎಂದು ಕೇಳಿದ್ದೀರಿ, ನಿನ್ನ ಸಹಭಾಗಿ "ಅಲ್ಲ" ಎಂದು ಹೇಳುತ್ತಾನೆ, ಆಗ ನೀವು ಸ್ತ್ರೀಯರ ಎಲ್ಲಾ ಕಾರ್ಡುಗಳನ್ನು ಕೆಳಗೆ ಇಡಬೇಕು. ಹೀಗೆ ರಹಸ್ಯ ಬೈಬಲ್ ವ್ಯಕ್ತಿಯನ್ನು ಕಂಡುಹಿಡಿಯುವವರೆಗೂ ಪ್ರಶ್ನೆಗಳನ್ನು ಕೇಳುತ್ತಾ ಮುಂದೆವರಿಸಬೇಕು!

# --[ ಕೇಸ್ 1 ]--

## ಸೂಚನೆಗಳು! (ಕ್ಲೂಸ್) (ಪಾಠ 1)

### 1 ಸೂಚನೆ #1 ಅಂಶ (ಪಾಠ 1)

ಬೆದರಿಕೆ ಕೊಟ್ಟ ವರ್ಗದವರ ಕೇಸ್

### 2 ಸೂಚನೆ #2 ನಾಟಕ (ಪಾಠ 1)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ಪ್ರಾಣಿ ನಿಯಂತ್ರಕರು : ಸುರಕ್ಷಿತವಾದ ಬಂದರು ಪ್ರಾಣಿ ನಿಯಂತ್ರಣ ಇವತ್ತು ನಿಮಗೆ ಏನು ಸಹಾಯ ಮಾಡಬೇಕು?

ಕ್ಯಾಟ್ ಲೇಡಿ : ಹಾಯ್, ಓ... ನೀವು ಇನ್ನೂ ಅಲ್ಲೇ ಇದ್ದೀರಾ.

ಪ್ರಾಣಿ ನಿಯಂತ್ರಕರು : ಹೌದು, ಮೇಡಂ, ನಾವು ಇಲ್ಲೇ ಇದ್ದೀವಿ. ನಿಮಗೆ ನಾನು ಹೇಗೆ ಸಹಾಯ ಮಾಡಬಲ್ಲೆ?

ಕ್ಯಾಟ್ ಲೇಡಿ : ಓ... ಒಳ್ಳೇದು, ನನ್ನ ಬಿಳಿಯ ಬೆಕ್ಕು ಆಶ್ಚರ್ಯವನ್ನುಂಟು ಮಾಡಿದೆ, ಅದರ ಕುರಿತಾಗಿಯೇ ನಾನು ಆಲೋಚನೆ ಮಾಡುತ್ತಿದ್ದೇನೆ. ಅವನು ತುಂಬಾ ಸುಂದರವಾದ ಬೆಕ್ಕು, ಅವನನ್ನು ಯಾರೋ ತೆಗೆದುಕೊಂಡು ಹೋಗಿದ್ದಾರೆಂದು ನಾನು ಈಗತಾನೇ ತಿಳಿದುಕೊಂಡೆ. ಒಂದುವೇಳೆ, ನಿಮ್ಮ ಬಳಿ ಏನಾದರೂ ಇದೆಯಾ?

ಪ್ರಾಣಿ ನಿಯಂತ್ರಕರು : ಇಲ್ಲಿ ಕೆಲವೊಂದು ಬೆಕ್ಕುಗಳು ಇವೆ, ಆದರೆ ನನ್ನ ಬಳಿ ಬಿಳಿಯ ಬೆಕ್ಕು ಇಲ್ಲವೆಂದು ಹೇಳಿದ ಆ ಸ್ತ್ರೀಯಳಿಗೆ ಹೇಳಿದ್ದರೆ ಚೆನ್ನಾಗಿರುತ್ತಿತ್ತಲ್ಲ.

ಕ್ಯಾಟ್ ಲೇಡಿ : ಬಿಳಿಯ ಬೆಕ್ಕುಗೋಸ್ಕರ ಯಾರೋ ಕರೆದಂತಾಯಿತು?

ಪ್ರಾಣಿ ನಿಯಂತ್ರಕರು : ಹೌದು, ಆಕೆ ಪ್ರಿನ್ಸೆಸ್ ಎನ್ನುವ ಬಿಳಿಯ ಬೆಕ್ಕಿಗಾಗಿ ಎದುರುನೋಡುತ್ತಿದ್ದಳು.

ಕ್ಯಾಟ್ ಲೇಡಿ : ಓ.. ಇದು ಎಂಥ ವಿಚಿತ್ರ. ನಾನು ಕಳೆದುಕೊಂಡ ಬೆಕ್ಕಿನ ಹೆಸರು ಪ್ರಿನ್ಸೆಸ್. ಒಂದುವೇಳೆ ಅವರು ಒಬ್ಬರಿಗೊಬ್ಬರು ಸಿಕ್ಕಿಕೊಂಡು, (ಕಿಸಿ ಕಿಸಿ ನಗುತ್ತಾ) ಇಬ್ಬರು ಸೇರಿ ಓಡಿ ಹೋದರೋ.

ಪ್ರಾಣಿ ನಿಯಂತ್ರಕರು : ಅದೇ ವಿಚಿತ್ರ. ತುಂಬಾ ಆಲಸ್ಯವಾಗಿ ಹೋಗುತ್ತಿರುವವು ಇವೆ.

ಕ್ಯಾಟ್ ಲೇಡಿ : ಪ್ರಾಣಿಗಳೆಲ್ಲವು ಸೇರಿ ಓಡಿ ಹೋಗುತ್ತಿವೆಯಾ?

ಪ್ರಾಣಿ ನಿಯಂತ್ರಕರು : ಹೌದು, ಅವು ದಾರಿಯಲ್ಲಿ ಓಡಿ ಹೋಗುತ್ತಿವೆ.

ಕ್ಯಾಟ್ ಲೇಡಿ : ಓ... ಅದು ಜ್ಯುಸಿ ತಂಟೆಯಂತೆ ಕೇಳಿಸಿಕೊಳ್ಳುತ್ತಿದೆ. ಇದರ ಕುರಿತಾಗಿ ನನಗೆ ಹೇಳು.

ಪ್ರಾಣಿ ನಿಯಂತ್ರಕರು : ಹೌದು, ಕಾಣೆಯಾಗಿರುವ ಗಂಡು ಮತ್ತು ಹೆಣ್ಣು ನಾಯಿಗಳು ನನ್ನ ಬಳಿ ಇವೆ.

ಕ್ಯಾಟ್ ಲೇಡಿ : ಹೌದು, ಅದು ಅರ್ಥವುಳ್ಳ ವಿಷಯವೇ.

ಪ್ರಾಣಿ ನಿಯಂತ್ರಕರು : ಗಿಳಿಗಳ ಜೋಡಿ, ಹಾವುಗಳ ಜೋಡಿ, ಜೀಬ್ರಾಗಳ ಜೋಡಿ... ಈ ರೀತಿ ನಾನು ಹೇಳಿಕೊಂಡು ಹೋಗಬಹುದು?

ಕ್ಯಾಟ್ ಲೇಡಿ : ಓ... ಇದೇನಪ್ಪಾ... ಇದು ತುಂಬಾ ವಿಚಿತ್ರ! ಅವುಗಳೆಲ್ಲವು ಎಲ್ಲಿಗೆ ಹೋಗುತ್ತಿದ್ದವೋ ಗೊತ್ತಿಲ್ಲ, ನನಗೆ ತುಂಬಾ ಆಶ್ಚರ್ಯವಾಗುತ್ತಿದೆ.

ಪ್ರಾಣಿ ನಿಯಂತ್ರಕರು ; ಬೃಹತ್ ಸ್ಮಾರಕವನ್ನು ನಿರ್ಮಿಸುತ್ತಿರುವ ಒಬ್ಬ ವೃದ್ಧ ಪುರುಷನ ಬಳಿ ಕೆಲವೊಂದು ಪ್ರಾಣಿಗಳು ನಿಂತಿವೆಯೆಂದು ಕೇಳಿಸಿಕೊಂಡಿದ್ದೇನೆ.

ಕ್ಯಾಟ್ ಲೇಡಿ : ಅಲ್ಲಿ ನನ್ನ ಪ್ರಿನ್ಸೆಸ್ ಏನಾದರೂ ಇದೆಯೋ?

ಪ್ರಾಣಿ ನಿಯಂತ್ರಕರು : ನನಗೆ ಸಂದೇಹವಿದೆ. ಕೆಳಗೆ ತಪ್ಪಿಹೋದ ಪ್ರಾಣಿಗಳು ಇವೆಯೋ ಇಲ್ಲವೋ ಎಂದು ನೋಡುವುದಕ್ಕೆ ಹೋಗಿ ನಾನು ಅಲ್ಲಿ ತುಗಾಡುತ್ತಿದ್ದೆ. ಅಲ್ಲಿ ಪ್ರಾಣಿಗಳು ಇರುವುದಾದರೆ ನಾನು ಎಷ್ಟೋ ಸೂಚನೆಗಳನ್ನು ನೋಡುತ್ತಿದ್ದೆ, ಆದರೆ ಅಲ್ಲಿ ಯಾವ ಪ್ರಾಣಿಯೂ ಇಲ್ಲ.

ಕ್ಯಾಟ್ ಲೇಡಿ : ಒಳ್ಳೇದು, ಸರಿ, ನೀವು ಒಂದುವೇಳೆ ನನ್ನ ಬೆಕ್ಕನ್ನು ನೋಡಿದರೆ, ನನಗೆ ಫೋನ್ ಮಾಡುವೆಯಾ?

ಪ್ರಾಣಿ ನಿಯಂತ್ರಕರು : ತಪ್ಪದೇ ಖಂಡಿತವಾಗಿ ಮಾಡುತ್ತೇನೆ, ಸರಿ ಮತ್ತೇ ಭೇಟಿ ಯಾಗೋಣ.

ಕ್ಯಾಟ್ ಲೇಡಿ : ಬಾಯ್

## 3 ಸೂಚನೆ #3 ವಸ್ತು (ಪಾಠ 1)

ಈ ವಸ್ತುವನ್ನು ತರಗತಿಗೆ ತೆಗೆದುಕೊಂಡು ಬನ್ನಿರಿ : ಗರಗಸ ಅಥವಾ ಸುತ್ತಿಗೆ

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 1)




ಬೈಬಲ್.ನಲ್ಲಿ ಕರೆಯಲ್ಪಟ್ಟಿರುವ ಅರಾರಟ್ ಸೀಮೆ ಎನ್ನುವುದು ಸುಮಾರು 5,000 ಮೀಟರ್.ಗಳ ಎತ್ತರದಲ್ಲಿದೆ. ಇದೀಗ ಟರ್ಕಿಯ ಪೂರ್ವ ದಿಕ್ಕಿನಲ್ಲಿ ಕಂಡುಬರುತ್ತದೆ. ಈ ಅರಾರಟ್ ಪರ್ವತದ ಸೀಮೆಯು ಟರ್ಕಿ, ಅರ್ಮೇನಿಯಾ, ಅಜೆರ್ಬೇಜನ್ ಮತ್ತು ಇರಾನ್ ದೇಶಗಳು ಸಂಧಿಯಾಗುವ ಪ್ರಾಂತ್ಯಗಳವರೆಗೂ ವಿಸ್ತರಿಸಲ್ಪಟ್ಟಿದೆ.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 1)



ರಹಸ್ಯ : ಒಂದೇ ದಿಕ್ಕಿನಲ್ಲಿ ನಡೆದಿರುವ ಪ್ರಾಣಿಗಳ ಹೆಜ್ಜೆಗಳ ಗುರುತುಗಳು. ಚಿತ್ರದ ಮುದ್ರಣಗಳು ಆನೆ, ಗೊರಿಲ್ಲಾ, ಜೀಬ್ರಾ, ಗೊರಕೆ ಹಾವು, ಮೊಸಳೆ, ಆರ್ಡವಾರ್ಕ್, ಮತ್ತು ಜಿರಾಫೆಗಳಿಂದ ತೆಗೆದುಕೊಳ್ಳಲಾಗಿದೆ.

# ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

## ಕೇಸ್ ಪರಿಷ್ಕರಿಸಲಾಗಿದೆ! (ಪಾಠ 1)

### ಬೈಬಲ್ ಕಥೆ (ಪಾಠ 1)

**ನೋಹ ಮತ್ತು ನಾವೆ**

**ಬೈಬಲ್ ವಾಕ್ಯಭಾಗ : ಆದಿ.6-9 ಅಧ್ಯಾಯಗಳು**



ದೇವರು ಮನುಷ್ಯರನ್ನು ಸೃಷ್ಟಿ ಮಾಡಿ ಸ್ವಲ್ಪ ಕಾಲವಾದನಂತರ, ಮನುಷ್ಯರೆಲ್ಲರು ತುಂಬಾ ಹೆಚ್ಚಾಗಿ ಕೆಟ್ಟತನ ಮಾಡುವವರಾದರು. ಕರ್ತನ ದೃಷ್ಟಿಯಲ್ಲಿ ಅವರು ಕೆಟ್ಟ ಕಾರ್ಯಗಳನ್ನು ಮಾಡಿದರು. ದೇವರು ತನ್ನ ದೃಷ್ಟಿಯಲ್ಲಿ ನೀತಿವಂತನಾಗಿರುವ ನೋಹ ಎನ್ನುವ ಒಬ್ಬ ವ್ಯಕ್ತಿಯನ್ನು ಮಾತ್ರ ಕಂಡುಕೊಂಡನು. ನಾವೆಯನ್ನು ಅಥವಾ ದೊಡ್ಡ ಹಡಗನ್ನು ಕಟ್ಟಬೇಕೆಂದು ದೇವರು ನೋಹನಿಗೆ ಆಜ್ಞಾಪಿಸಿದನು. ಅದು ಎಷ್ಟು ದೊಡ್ಡದಾಗಿ ಕಟ್ಟಬೇಕೆಂದು ಆತನು ನೋಹನಿಗೆ ಸ್ಪಷ್ಟವಾಗಿ ತಿಳಿಸಿದನು, ಯಾಕಂದರೆ ಅದು ಭೂಮಿಯ ಮೇಲಿರುವ ಎಲ್ಲಾ ಜಾತಿ ಪ್ರಾಣಿಗಳನ್ನು ಹೊಂದಿರಬೇಕಾಗಿತ್ತು.  ಭೂಮಿಯ ಮೇಲೆ ಮಳೆ ಬರದಿದ್ದರೂ, ನೋಹನು ದೇವರಿಗೆ ವಿಧೇಯನಾಗಿ, ನಾವೆಯನ್ನು (ಅಥವಾ ದೊಡ್ಡ ಹಡಗನ್ನು) ನಿರ್ಮಿಸಿದನು. ನೋಹನು ತನ್ನ ಹೆಂಡತಿಯನ್ನು, ಮಕ್ಕಳನ್ನು, ಸೊಸೆಗಳನ್ನು ಮತ್ತು ಪ್ರಾಣಿಗಳನ್ನು ಕರೆದುಕೊಂಡು ನಾವೆಯೊಳಗೆ ಪ್ರವೇಶಿಸು ಎಂದು ದೇವರು ಹೇಳಿದ ಆ ಮಾತು ನೆರವೇರುವ ದಿನವು ಬಂದೇ ಬಂತು. ಅವರೆಲ್ಲರು ಒಳಗೆ ಹೋದನಂತರ ಮಳೆ ಸುರಿಯುವುದಕ್ಕೆ ಆರಂಭವಾಯಿತು. ದೇವರು ನೀರಿನಿಂದ ಭೂಮಿಯನ್ನು ನಾಶಮಾಡಲು ಆಕಾಶಗಳನ್ನು ತೆರೆದನು. ಭೂಮಿಯೆಲ್ಲಾ ಮುಳುಗಿ ಹೋಗುವವರೆಗೂ ಅಂದರೆ 40 ದಿನಗಳ ಕಾಲ ಮಳೆ ಬಂದಿತ್ತು .

ಸುಮಾರು 150 ದಿನಗಳ ಕಾಲ ಜಲ ಪ್ರಳಯ ಭೂಮಿಯೆಲ್ಲ ಆವರಿಸಿತ್ತು. ಇದಾದನಂತರ ದೇವರು ಭೂಮಿಯನ್ನು ಒಣಗಿಸುವುದಕ್ಕೆ ಗಾಳಿಯನ್ನು ಕಳುಹಿಸಿಕೊಟ್ಟರು. ನಾವೆಯ ಹೊರಗಡೆ ಭೂಮಿಯು ಎಷ್ಟರ ಮಟ್ಟಿಗೆ ಒಣಗಿದೆಯೆಂದು ನೋಡುವುದಕ್ಕೆ ನೋಹನು ಪಕ್ಷಿಗಳನ್ನು ಕಳುಹಿಸುವುದಕ್ಕೆ ಆರಂಭಿಸಿದನು, ಆದರೆ ಅವು ಹಿಂದಕ್ಕೆ ಬರಲಿಲ್ಲ. ಕೊನೆಗೆ, ಪಾರಿವಾಳವು ಎಣ್ಣೆಮರದ ಚಿಗುರುನೊಂದಿಗೆ ಹಿಂದಿರುಗಿ ಬಂದಿತ್ತು. ಪಾರಿವಾಳವು ಹಿಂದಕ್ಕೆ ಬಂದನಂತರ ನೋಹನು ಸುಮಾರು ಏಳು ದಿನಗಳ ಕಾಲ ನಿರೀಕ್ಷಿಸಿದನು. ಈ ಸಮಯದಲ್ಲಿ ಅದು ಹಿಂದಕ್ಕೆ ಬರಲೇ ಇಲ್ಲ. ನೋಹನು ನಾವೆಯ ಬಾಗಿಲನ್ನು ತೆರೆದಾಗ, ನೆಲವೆಲ್ಲ ಒಣಗಿ ಹೋಗಿತ್ತು. ಎಲ್ಲಾ ಪ್ರಾಣಿಗಳನ್ನು ಹೊರಗೆ ಬಿಡಬೇಕೆಂದು ನೋಹನಿಗೆ ದೇವರು ಆಜ್ಞಾಪಿಸಿದರು. ಇದರಿಂದ ಅವುಗಳು ಹೋಗಿ ಭೂಮಿಯೆಲ್ಲಾ ತುಂಬಿಸುತ್ತವೆ. ನೋಹನು ದೇವರಿಗೆ ಸರ್ವಾಂಗ ಹೋಮವನ್ನು ಮಾಡಿದನು. ಇದರಿಂದ ಆ ಸುವಾಸನೆಯು ಯೆಹೋವನಿಗೆ ಗಮಗಮಿಸಲು, ಇನ್ನು ಮೇಲೆ ನಾನು ಭೂಮಿಯನ್ನು ನೀರಿನಿಂದ ನಾಶ ಮಾಡುವುದಿಲ್ಲವೆಂದು ದೇವರು ನಿರ್ಣಯಿಸಿಕೊಂಡರು. ದೇವರ ತನ್ನ ವಾಗ್ದಾನವನ್ನು ನೋಹನಿಗೆ ತಿಳಿಸಿದನು; ಇವತ್ತಿಗೂ ಆ ಗುರುತನ್ನು ನಾವು ನೋಡಬಹುದು. ದೇವರಿಗೆ ಮತ್ತು ಭೂಮಿಯ ಮೇಲಿರುವ ಸಮಸ್ತ ಜೀವರಾಶಿಗಳಿಗೆ ಮಧ್ಯದಲ್ಲಿ ದೇವರ ವಾಗ್ದಾನ ನೆನಪಿಸುವ ಗುರುತು ಕಾಮನ ಬಿಲ್ಲಾಗಿರುತ್ತದೆ.

### ಅನ್ವಯ  (ಪಾಠ 1)

ನನ್ನ ಸುತ್ತಮುತ್ತ ಎಷ್ಟು ಕೆಟ್ಟತನವಿದ್ದರೂ ನಾನು ನೀತಿವಂತನಾಗಿ ಜೀವಿಸಬಲ್ಲೆ.

### ಕಂಠಪಾಠ ವಾಕ್ಯ (ಪಾಠ 1)

“ಆದದರಿಂದ ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವುದಕ್ಕೂ... ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ...” ಎಫೆಸ.6:13.

### ಮನೆಗೆಲಸ (ಪಾಠ 1)

ನೀವು ವಿಧೇಯತೆಯನ್ನು ತೋರಿಸುವ ಸಮಯದಲ್ಲಿ ನಿಮ್ಮ ಸುತ್ತಮುತ್ತ ಯಾರೂ ಇಲ್ಲದಿರುವಾಗ ದೇವರಿಗೆ ವಿಧೇಯತೆಯನ್ನು ತೋರಿಸುವುದು ತುಂಬಾ ಕಷ್ಟವಾಗಬಹುದು. ನೀವು ತಿಳಿದುಕೊಂಡ ಸರಿಯಾದದ್ದನ್ನು ಮಾಡುವುದಕ್ಕೆ ಒಂದು ಒಳ್ಳೇಯ ಅವಕಾಶಕ್ಕಾಗಿ ಎದುರುನೋಡಿರಿ. ಉದಾಹರಣೆ: ಕೆಲವರು ಸರಿಯಾಗಿ ಲೆಕ್ಕ ಮಾಡದೇ ಹೆಚ್ಚಾಗಿ ಚಿಲ್ಲರೆ ಕೊಟ್ಟಾಗ, ಅವರಿಗೆ ಆ ಚಿಲ್ಲರೆಯನ್ನು ಹಿಂದುರಿಗಿ ಕೊಡಿರಿ.

### ದೇವರ ಡಿ.ಎನ್.ಎ. (ಪಾಠ 1)




ದೇವರು ನೀತಿಗಾಗಿ ಎದುರುನೋಡುತ್ತಿದ್ದಾರೆ ಮತ್ತು ವಿಧೇಯತೆಗೆ ಬಹುಮಾನಗಳನ್ನು ಕೊಡುತ್ತಾರೆ. .



## ವಿನೋದ ಸಮಯ! (ಪಾಠ 1)

### ಆಟ (ಪಾಠ 1)

ನೋಹನ ನಾವೆ

ವಿದ್ಯಾರ್ಥಿಗಳೆಲ್ಲರು ಒಂದು ವೃತ್ತಾಕಾರದಲ್ಲಿ ನಿಲ್ಲುವುದಕ್ಕೆ ಹೇಳಿರಿ. ಮೊದಲನೇ ವ್ಯಕ್ತಿ ‘ಅ’ ಅಕ್ಷರದಿಂದ ಆರಂಭವಾಗುವ ಪ್ರಾಣಿಯ ಕುರಿತು ಆಲೋಚನೆ ಮಾಡುತ್ತಾನೆ (ಇಲ್ಲಿ ಆಂಗ್ಲ ಅಕ್ಷರಗಳನ್ನು ಕೂಡ ಬಳಸಬಹುದು) ಮತ್ತು 1 ರಿಂದ 10 ಸಂಖ್ಯೆಗಳನ್ನು ಎಣಿಸಬೇಕು. ಈ ರೀತಿ ಮತ್ತೊಬ್ಬ ವಿದ್ಯಾರ್ಥಿ ‘ಅ’ ಅಕ್ಷರದಿಂದ ಬರುವ ಇನ್ನೊಂದು ಪ್ರಾಣಿಯ ಹೆಸರಿನ ಕುರಿತಾಗಿ ಆಲೋಚನೆ ಮಾಡುತ್ತಾನೆ. ಈ ರೀತಿ ಅಲ್ಲಿರುವ ಇನ್ನೊಬ್ಬ ವಿದ್ಯಾರ್ಥಿ ‘ಅ’ ಅಕ್ಷರದಿಂದ ಬರುವ ಇನ್ನೊಂದು ಪ್ರಾಣಿಯ ಕುರಿತಾಗಿ ಆಲೋಚನೆ ಮಾಡುತ್ತಾನೆ. ಆ 10 ಸಂಖ್ಯೆಗಳನ್ನು ಎಣಿಸುವಷ್ಟರಲ್ಲಿ ಒಂದುವೇಳೆ ಆ ವಿದ್ಯಾರ್ಥಿ ಹೇಳದಿದ್ದರೆ, ಅವನು ಆ ವೃತ್ತದೊಳಗಿಂದ ಹೊರಗಡೆ ಹೋಗುತ್ತಾನೆ. ಈ ರೀತಿ ಇನ್ನೊಬ್ಬ ವಿದ್ಯಾರ್ಥಿ ‘ಆ’ ಎನ್ನುವ ಇನ್ನೊಂದು ಅಕ್ಷರದಿಂದ ಆರಂಭವಾಗುವ ಪ್ರಾಣಿಯ ಹೆಸರನ್ನು ಹೇಳುವುದಕ್ಕೆ ಆಲೋಚನೆ ಮಾಡುತ್ತಾನೆ. 10 ಸಂಖ್ಯೆಗಳನ್ನು ಎಣಿಸುವಷ್ಟರಲ್ಲಿ ಹೇಳದ ವಿದ್ಯಾರ್ಥಿಯವರೆಗೂ ಈ ಆಟ ಮುಂದೆವರಿಯುತ್ತದೆ ಮತ್ತು ಕೊನೆಗೆ ಯಾರು ಹೇಳದೇ ಇರುತ್ತಾರೆ ಅವರು ಆಟದಿಂದ ಎದ್ದು ಹೊರ ಬರಬೇಕು. ಇದಾದಮೇಲೆ, ಇನ್ನೊಬ್ಬ ವಿದ್ಯಾರ್ಥಿ ‘ಇ’ ಅಕ್ಷರದಿಂದ ಬರುವ ಪ್ರಾಣಿಗಳ ಹೆಸರುಗಳನ್ನು ಹೇಳುವುದಕ್ಕೆ ಆರಂಭಿಸುತ್ತಾನೆ. ಈ ರೀತಿ ಆಟ ಮುಂದಕ್ಕೆ ಹೋಗುತ್ತದೆ.

### ಚರ್ಚೆ (ಪಾಠ 1)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ದೇವರ ಆಜ್ಞೆಗಳನ್ನು ಅನುಸರಿಸುವುದು ತುಂಬಾ ಕಷ್ಟ ಯಾಕೆ? ನಾವು ಕೆಲವೊಂದು ಕಾರ್ಯಗಳು ಮಾಡಬೇಕೆಂದು ದೇವರು ಕೇಳಿದಾಗ, ಅವುಗಳನ್ನು ನಾವು ನಿಜವಾಗಲೂ ಮಾಡಬೇಕೋ?



ಹೌದು, ದೇವರು ಕೇಳಿದ ಪ್ರತಿಯೊಂದನ್ನು ನಾವು ಮಾಡಬೇಕೆಂದು, ದೇವರು ನಮ್ಮಿಂದ ಬಯಸುತ್ತಿದ್ದಾರೆ, ಆದರೆ ಆತನು ತನ್ನ ಶಕ್ತಿಯನ್ನು ಮತ್ತು ತನ್ನ ಸಹಾಯವನ್ನು ನಮಗೆ ಕೊಡುತ್ತಾರೆ. ಆದ್ದರಿಂದ ಅವುಗಳನ್ನು ನಾವೊಬ್ಬರೇ ಮಾಡುವುದಕ್ಕಾಗುವುದಿಲ್ಲ. ದೇವರ ಆಜ್ಞೆಗಳು ಮತ್ತು ಕಟ್ಟಳೆಗಳು ನಿರಂತರವಾಗಿ ನಮ್ಮನ್ನು ಹೊಸ ಒಡಂಬಡಿಕೆಯನ್ನು ಮತ್ತು ಕೃಪೆಯನ್ನು ಅನುಗ್ರಹಿಸುವ ಕ್ರಿಸ್ತನ ಕಡೆಗೆ ನಡೆಸುತ್ತವೆ. ಈ ಹೊಸ ಒಡಂಬಡಿಕೆಯು ಏನೆಂದರೆ ದೇವರನ್ನು ಪ್ರೀತಿಸಿ, ನಮ್ಮ ನೆರೆಹೊರೆಯವರನ್ನು ಪ್ರೀತಿಸುವುದು ಮಾತ್ರವೇ. ದೇವರ ಧರ್ಮಶಾಸ್ತ್ರವನ್ನು ಅನುಸರಿಸುವುದು ಎಂದರೆ ನಮ್ಮ ಪ್ರೀತಿಯ ಪ್ರಭಾವವಾಗಿರುತ್ತದೆ. (ರೋಮಾ.8:5,6, ಗಲಾತ್ಯ.3:21-25, ರೋಮಾ.7:7-25)


2. ಯಾಕೆ ದೇವರು ಕೆಲವೊಂದು ಸಂಕಷ್ಟಗಳು ಬರುವಂತೆ ಅನುಮತಿಸುತ್ತಾರೆ? ಕೆಲವೊಂದು ಸಂಕಷ್ಟಗಳು ನಡೆದರೂ ದೇವರು ಇನ್ನೂ ತನ್ನ ಚಿತ್ತವನ್ನು ನಡೆಸಿಕೊಳ್ಳುತ್ತಾರೋ?


   ದೇವರು ತನ್ನ ಜನರಿಗೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುತ್ತಾರೆ, ಇದರಲ್ಲಿ ಪಾಪ ಮಾಡುವುದಕ್ಕೂ ಅವಕಾಶವಿರುತ್ತದೆ. ಆತನ ಬಳಿ ಸಂಕಷ್ಟಗಳನ್ನು ಆಶೀರ್ವಾದಗಳನ್ನಾಗಿ ಮಾಡುವ ಅದ್ಭುತವಾದ ಮಾರ್ಗವೂ ಇರುತ್ತದೆ. ಕಷ್ಟ ಸಂಕಷ್ಟಗಳಲ್ಲಿ ನನ್ನ ಪಾಲು "ದೇವರ ಹಸ್ತದಿಂದ ನಾವು ಒಳ್ಳೇದನ್ನು ಹೊಂದುತ್ತೇವಷ್ಟೇ; ಕೆಟ್ಟದ್ದನ್ನು ಹೊಂದಬಾರದೋ" (ಯೋಬ.2:10) ಎಂದು ಹೇಳಿದ ಯೋಬನಂತೆ ದೇವರಿಗೆ ವಿಧೇಯರಾಗಿರುವುದಾಗಿರುತ್ತದೆ.


3. ನನ್ನ ತಲೆಯಲ್ಲಿ ನಾನು ದೇವರ ಸ್ವರವನ್ನು ಕೇಳುತ್ತಿದ್ದೇನೆಂದು ನಾನು ಆಲೋಚನೆ ಮಾಡುತ್ತಿರುವಾಗ ನಾನು ಹೇಗೆ ಅದನ್ನು ಹೇಳಬಲ್ಲೆ?

   ದೇವರು ಅಧಿಕಾರವನ್ನು ಪಡೆದವರ ಮೂಲಕ ಮಾತನಾಡುತ್ತಾರೆ : ತಂದೆತಾಯಿಗಳು, ಸಭಾಪಾಲಕರು ಮತ್ತು ಉಪದೇಶಕರು. ಸತ್ಯವೇದದಲ್ಲಿ ದೇವರು ಅನೇಕ ವಿಧಗಳ ಮೂಲಕ ಮಾತನಾಡಿದ್ದಾರೆ : ಮಂದಮಾರುತ ಶಬ್ದ (1 ಅರಸುಗಳು.19:12), ಸೆರೆಮನೆಯಲ್ಲಿ (ವಿಮೋ.33:11), ಸಂದೇಶಗಾರರ ಮೂಲಕ, ದೂತಗಳ ಮೂಲಕ, ಕನಸುಗಳಲ್ಲಿ, ಪ್ರಕಾಶಮಾನ ಬೆಳಕಿನ ಮೂಲಕ, ಅನೇಕ ಅದ್ಭುತ ಕಾರ್ಯಗಳ ಮೂಲಕ, ಉರಿಯುತ್ತಿರುವ ಪೊದೆಯ, ಗುಡುಗು, ಮಿಂಚು ಮತ್ತು ತುತ್ತೂರಿಗಳ ಮೂಲಕ ಮಾತನಾಡುತ್ತಾರೆ. ಆತನು ತನ್ನ ವಾಕ್ಯದ ಮೂಲಕ ಕೂಡ ನಿಮ್ಮೊಂದಿಗೆ ಮಾತನಾಡುತ್ತಾರೆ. ನೀವು ಎಷ್ಟು ಬೈಬಲ್ ಓದಿದರೆ, ಅಷ್ಟು ಹೆಚ್ಚಾಗಿ ದೈನಂದಿನ ಜೀವನದಲ್ಲಿ ಸವಾಲುಗಳು ಉಂಟಾಗುತ್ತವೆ. ದೇವರ ಸ್ವರವನ್ನು ನಾನು ಹೇಗೆ ಕಂಡುಕೊಳ್ಳಬೇಕು? "ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆವು; ಅವು ನನ್ನ ಹಿಂದೆ ಬರುತ್ತವೆ." (ಯೋಹಾನ.10:26) ನಿಮಗೆ ದೇವರು ಗೊತ್ತಿಲ್ಲದಿದ್ದರೆ, ನಿಮ್ಮ ಸ್ವಂತ ಆಲೋಚನೆಗಳಿಂದ, ಬಯಕೆಗಳಿಂದ ಮತ್ತು ಹಗಲು ಕನಸುಗಳಿಂದ ದೇವರ ಸ್ವರವನ್ನು ನೀವು ಹೇಳುವುದಕ್ಕೆ ಆಗುವುದಿಲ್ಲ.

## ವಿದ್ಯಾರ್ಥಿಗಳ ಪುಟಗಳಿಗೆ ಉತ್ತರಗಳು (1 ಪಾಠ)



## ಲೂಕಾಸ್ ರವರ ಪ್ರಯೋಗ (1 ಪಾಠ)

ಪಾಪ್.ನಲ್ಲಿ ಒಣ ದ್ರಾಕ್ಷಿ

ಒಂದು ಸೋಡಾ ಪಾಪ್.ನಲ್ಲಿ ಒಣದ್ರಾಕ್ಷಿಯನ್ನು ಹಾಕಿರಿ, ಅವು ಕೆಳಗಡೆವರೆಗು ಮುಳುಗುವತನಕ ನೋಡುತ್ತಾ ಇರಿ. ಬರುವ ಗುಳ್ಳೆಗಳನ್ನು ಸಂಗ್ರಹಿಸಿ ಮತ್ತು ಅದನ್ನು ಮೇಲಕ್ಕೆ ಬರುವಂತೆ ಮಾಡಿ, ಗುಳ್ಳೆಗಳನ್ನು ಕಳಕೊಳ್ಳುವುದಕ್ಕೆ ಮಾತ್ರ ಮತ್ತು ಅದನ್ನು ಮತ್ತೊಮ್ಮೆ ಮುಳುಗಿಸಿ. ಸೋಡಾ ಪಾಪ್.ನಲ್ಲಿ ಇಪ್ಪತ್ತು ಒಣದ್ರಾಕ್ಷಿಗಳನ್ನು ಹಾಕಿರಿ ಮತ್ತು ಅದರ ಕ್ರಿಯೆಯನ್ನು ನೋಡಿರಿ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 2 ]--



## ಸೂಚನೆಗಳು! (ಕ್ಲೂಸ್) (ಪಾಠ 2)

### 1 ಸೂಚನೆ #1 ಅಂಶ (ಪಾಠ 2)

ಯುಎಫ್.ಓ ಸೈಟಿಂಗ್ ಕೇಸ್. ( ಗುರುತಿಸಲಾಗದ ಹಾರುವ ತಟ್ಟೆ)

### 2 ಸೂಚನೆ #2 ನಾಟಕ (ಪಾಠ 2)

ತನಿಖೆಗಾರರು : (ಬಾಗಿಲನ್ನು ತಟ್ಟುತ್ತಿದ್ದಾರೆ)

ವಸತಿಗೃಹದ ಯಜಮಾನ : ಒಳಗೆ ಬನ್ನಿರಿ.

ತನಿಖೆಗಾರರು : ಹಲೋ, ನಾನು ಪುರಸಭೆ ಅತಿಥಿ ಆಯೋಗದಿಂದ ಬಂದಿದ್ದೇನೆ.

ವಸತಿಗೃಹದ ಯಜಮಾನ : ನಾನು ಯಾವರೀತಿ ಸಹಾಯ ಮಾಡಬಲ್ಲೆ ಅಧಿಕಾರಿಗಳೇ...



ತನಿಖೆಗಾರರು : ಒಂದು ವಿಶೇಷವಾದ ಮನವಿಯೊಂದಿಗೆ ನಾನು ಪಟ್ಟಣದಲ್ಲಿರುವ ಪ್ರತಿಯೊಂದು ಹೋಟೆಲನ್ನು ಸಂದರ್ಶಿಸುತ್ತಿದ್ದೇನೆ.

ವಸತಿಗೃಹದ ಯಜಮಾನ : ನಾನೂ ಕೇಳಿಸಿಕೊಂಡಿದ್ದೇನೆ.

ತನಿಖೆಗಾರರು : ಇತ್ತೀಚೆಗೆ ಪ್ರಕಟನೆಯಾದ  ಜನಗಣತಿ ಪ್ರಕಾರ ನಾವು ಎದುರುನೋಡುತ್ತಿರುವಂತೆ ಅನೇಕರು ಹೆಚ್ಚಾಗಿ ಬರುತ್ತಿದ್ದಾರೆ. ಅವರಿಗೆ ನೀವು ಬಾಡಿಗೆ ಕೊಡುವುದಕ್ಕೆ ಆದಷ್ಟು ಹೆಚ್ಚಾಗಿ ಅನೇಕ ವಸತಿ ಗೃಹಗಳನ್ನು ಒದಗಿಸಿಕೊಡಲು ನೀವು ಚೆನ್ನಾಗಿ ಕೆಲಸ ಮಾಡಬೇಕೆಂದು ನಾವು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ವಸತಿಗೃಹದ ಯಜಮಾನ : ಇದು ತುಂಬಾ ಚಿಕ್ಕ ಹೋಟೆಲ್; ನನ್ನ ಬಳಿ ಕೇವಲ ಹತ್ತು ಕೊಠಡಿಗಳು ಮಾತ್ರ ಇವೆ.

ತನಿಖೆಗಾರರು : ಓ.. ಹೌದಾ, ಆದರೆ ನೀವು ಆ ಹತ್ತು ಕೊಠಡಿಗಳನ್ನು ನಮಗೆ ಲಭ್ಯದಲ್ಲಿರಿಸುವೆರಾ?

ವಸತಿಗೃಹದ ಯಜಮಾನ : ಹೌದು, ಖಂಡಿತ.. ಆದರೆ ಒಂದು ಕೊಠಡಿಯನ್ನು ನಾನು ರಿಪೇರಿ ಮಾಡಬೇಕಾಗಿದೆ.

ತನಿಖೆಗಾರರು : ಈಗ ಆ ರಿಪೇರಿಯನ್ನು ಮಾಡಿ ಕೊಡುವುದಕ್ಕೆ ಸಾಧ್ಯವೋ?

ವಸತಿಗೃಹದ ಯಜಮಾನ : ಇಲ್ಲ, ಆ ಕೊಠಡಿಯನ್ನು ತನಿಖೆ ಮಾಡುವುದಕ್ಕೆ ನಿಮ್ಮನ್ನು ನಾನು ಕರೆಯುವುದಕ್ಕೆ ಮುಂಚಿತವಾಗಿ  ಆ ಕೊನೆಯ ಭಾಗವು ಪೂರ್ತಿಯಾಗುವವರೆಗೂ ನಾನು ನಿರೀಕ್ಷಿಸಬೇಕು.

ತನಿಖೆಗಾರರು : ಹೌದಾ, ಜನಗಣತಿಗಾಗಿ ಆ ಕೊಠಡಿಯನ್ನು ತಿರುಗಿ ತೆರೆಯುವುದಕ್ಕೆ ತಾತ್ಕಾಲಿಕ ಅನುಮೋದನೆಯನ್ನು ಪಡೆಯಲು, ನಿಮಗೆ ಅನುಮತಿ ಕೊಡಲು ನನಗೆ ಅಧಿಕಾರ ಕೊಡಲ್ಪಟ್ಟಿದೆ.  ಸುರಕ್ಷಿತ ಕಾಳಜಿಗಳನ್ನೆಲ್ಲಾ ನೀವು ಕೈಗೊಂಡಿದ್ದೀರಲ್ಲವೋ?

ವಸತಿಗೃಹದ ಯಜಮಾನ : ಹೌದು, ನಾನು ಎಲ್ಲವನ್ನು ಕೈಗೊಂಡಿದ್ದೇನೆ.

ತನಿಖೆಗಾರರು : ಆದರೆ, ನಾವೀಗ ಒಂದುದಲ ನೋಡೋಣ.

ವಸತಿಗೃಹದ ಯಜಮಾನ : ನಾವು ಇಲ್ಲಿದ್ದೇವೆ.

ತನಿಖೆಗಾರರು : [ಸುತ್ತಮುತ್ತ ತಿರುಗಿ ನೋಡುತ್ತಿರುತ್ತಾರೆ] ಚೆನ್ನಾಗಿ ಕಾಣಿಸುತ್ತಿದೆ, ನೀವು ಇದನ್ನು ಜನರಿಗೆ ಕೊಡಬಹುದು.

ವಸತಿಗೃಹದ ಯಜಮಾನ : ಅದು ತುಂಬಾ ಸುಲಭ, ಆದರೆ ನೀವು ಅದನ್ನು ಚೆನ್ನಾಗಿ ತನಿಖೆ ಮಾಡಿದ್ದೀರೆಂದು ನಾನು ಅಂದುಕೊಳ್ಳುತ್ತಿದ್ದೇನೆ ಮತ್ತು ನಾನು ಅದನ್ನು ಇಂದಿನಿಂದ ಬಳಸುತ್ತೇನೆ.

ತನಿಖೆಗಾರರು : ಹಾಸ್ಯ ಮಾಡಬೇಡ. ಅತ್ಯಗತ್ಯ ವಿಷಯದಲ್ಲಿ ಮಾತ್ರವೇ ಪ್ರಾಣಿಗಳಿಗೆ ತಪ್ಪಿಸಿ ಇನ್ನಾರಿಗೂ ಆತಿಥ್ಯವನ್ನು ಕೊಡುವುದಕ್ಕೆ ಕುದುರೆ ಲಾಯಗಳನ್ನು ಉಪಯೋಗಿಸುವುದಿಲ್ಲ.

ವಸತಿಗೃಹದ ಯಜಮಾನ : ನಾನು ಸುಮ್ಮನೆ ಹಾಸ್ಯ ಮಾಡುತ್ತಿದ್ದೇನೆ, ಹೆದರಬೇಡಿರಿ. ಅದರಲ್ಲಿ ಬೇರೊಂದು ಅವಕಾಶವಿಲ್ಲದಿದ್ದರೆ ಹೊರತು ನಾನು ನನ್ನ ನಿರ್ಣಯವನ್ನು ಕೊಡುವುದಿಲ್ಲ.

## 3 ಸೂಚನೆ #3 ವಸ್ತು (ಪಾಠ 2)


ತರಗತಿಗೆ ತೆಗೆದುಕೊಂಡು ಬನ್ನಿರಿ: ಶಿಶುವಿನ ಹೊದಿಕೆ, ಮೇವು ಅಥವಾ ಒಣ ಹುಲ್ಲು

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 2)




ಸಭೆಯ ಜನನವು ಬಸಿಲಿಕಾ, ಇದು ಪಾಲಾಸ್ತೀನಾದಲ್ಲಿಣ ಪಶ್ಚಿಮ ಬ್ಯಾಂಕ್.ನಲ್ಲಿರುವ ಬೆತ್ಲೆಹೇಮದಲ್ಲಿದೆ. ಇದು ಒಂದು ಗುಹೆಯಲ್ಲಿರುತ್ತದೆ ಅದನ್ನೇ ಯೇಸು ಕ್ರಿಸ್ತ ಜನ್ಮಸ್ಥಳವೆಂದು ಕೂಡ ಕರೆಯುತ್ತಾರೆ. ಸಭೆಯನ್ನು ಗ್ರೀಕ್ ಸಂಪ್ರದಾಯ, ರೋಮನ್ ಕ್ಯಾಥೊಲಿಕ್, ಅರ್ಮೇನಿಯನ್ ಅಪೊಸ್ಟಲಿಕ್ ಮತ್ತು ಸಿರಿಯಾಕ್ ಸಂಪ್ರದಾಯ ಅಧಿಕಾರಗಳೆಲ್ಲವು ಒಂಗೂಡಿ ಪಾಲಿಸಿದ್ದಾರೆ. ಆ ಸ್ಥಳದಲ್ಲಿ ಆ ನಾಲ್ಕು ಆಚಾರಗಳನ್ನೊಳಗೊಂಡ ಕ್ರೈಸ್ತ ಸಮುದಾಯಗಳು ನಡೆದುಕೊಂಡು ಬಂದಿರುತ್ತವೆ. ಇದರ ತತ್ಫಲಿತವಾಗಿ, ಇತರರ ಪ್ರಾರ್ಥನೆಗಳಿಗಾಗಿ, ಹಾಡುಗಳನ್ನು ಹಾಡಿಕೊಳ್ಳುವುದಕ್ಕಾಗಿ ಸನ್ಯಾಸಿ ತರಬೇತಿಗಾರರ ಮಧ್ಯೆದಲ್ಲಿ ಅನೇಕ ಪುನರಾವರ್ತಿತ ಕಾದಾಟಗಳು ನಡೆದಿವೆ ಮತ್ತು ಶುಚಿ ಮಾಡುವ ಕರ್ತವ್ಯಗಳಿಗಾಗಿ ನೆಲ ಭಾಗಗಳನ್ನು ಕೂಡ ವಿಂಗಡಿಸಲ್ಪಟ್ಟಿವೆ. ಪಾಲಸ್ತೀನಾ ರಕ್ಷಕ ಭಟರು ಅನೇಕಸಲ ಬಂದು ಸಮಾಧಾನ ಮತ್ತು ಕ್ರಮಕ್ಕಾಗಿ ಹೋರಾಟ ಮಾಡಿದ್ದರು. ಸಂದರ್ಶನ ಮಾಡಲು ಪ್ರವಾಸಿಗಳಿಗೆ ಎಂದಿಗೂ ಸ್ವಾಗತವುಂಟು.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 2)



ರಹಸ್ಯ ; ರಾತ್ರಿಯ ಆಕಾಶವು ಆಕಾಶ ಮಂಡಲಗಳೊಂದಿಗೆ ತೆರೆದುಕೊಂಡಿದೆ. ದೂತರು ಏನೋ ಒಂದು ಪ್ರಕಟನೆಯನ್ನು ತಿಳಿಸುವುದಕ್ಕೆ ಸಿದ್ಧರಾಗಿದ್ದಾರೆ.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 2)

## ಬೈಬಲ್ ಕಥೆ (ಪಾಠ 2)

**ಕ್ರಿಸ್ತ ಜನನ**

**ಸತ್ಯವೇದ ವಾಕ್ಯ : ಮತ್ತಾಯ.1:18-2:15, ಲೂಕ.2:1-20**



ಮರಿಯಳು ಮತ್ತು ಯೋಸೇಫನು ಜನಗಣತಿಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಲು ಬೆತ್ಲೆಹೆಮಕ್ಕೆ ಹೊರಟಿದ್ದರು. ಅದು ಸ್ವಲ್ಪ ದೂರದಲ್ಲಿಯೇ ಇದ್ದಿತ್ತು, ಆ ಸಮಯದಲ್ಲಿ ಮರಿಯಳು ಶಿಶುವಾದ ಯೇಸುವಿಗೆ ಬಸುರಾಗಿದ್ದಳು. ನಡೆಯುವದಕ್ಕೆ ತುಂಬಾ ಕಷ್ಟವಾಗಿದ್ದರಿಂದ, ಆಕೆ ಕತ್ತೆಯ ಮೇಲೆ ಕುಳಿತು ಬಂದಿದ್ದಳು. ಅವರು ಬೆತ್ಲೆಹೇಮಕ್ಕೆ ಬಂದಾಗ, ಹೆರಿಗೆ ಆಗುವ ಸಮಯ ಬಂದಿತ್ತೆಂದು ಆಕೆಗೆ ಗೊತ್ತಿತ್ತು. ಆಕೆಯನ್ನು ಒಂದು ಸ್ಥಳದಲ್ಲಿರಿಸುವುದಕ್ಕೆ ಯೋಸೇಫನು ಸ್ಥಳಕ್ಕಾಗಿ ತುಂಬಾ ಹೆಚ್ಚಾಗಿ ಹುಡಿಕಿದ್ದನು. ಜನಗಣತಿಯಲ್ಲಿ ದಾಖಲಿಸಿಕೊಳ್ಳುವುದಕ್ಕೆ ಅನೇಕ ಸ್ಥಳಗಳಿಂದ ಜನರು ಬಂದಿರುವ ಕಾರಣದಿಂದ ಎಲ್ಲಿರುವುದಕ್ಕೂ ಸ್ಥಳವು ಸಿಕ್ಕಿದ್ದಿಲ್ಲ. ಕೊನೆಗೆ, ಈ ಎಲ್ಲಾ ಪ್ರಾಣಿಗಳನ್ನು ಕಟ್ಟಿ ಹಾಕುವ ಒಂದು ಸ್ಥಳದಲ್ಲಿ ನೀವು ಇರಬಹುದೆಂದು ವಸತಿ ಗೃಹ ಯಜಮಾನನು ಹೇಳಿದನು. ಅದಕ್ಕೆ ಮರಿಯಳು ಮತ್ತು ಯೋಸೇಫನು ತುಂಬಾ ಸಂತೋಷಪಟ್ಟು ಇಳುಕೊಂಡರು; ಇಲ್ಲಿ ಬೆಚ್ಚಗೆಯಿರುವ ಒಣ ನೆಲವಾದರೂ ಇದೆಯೆಂದು ತಿಳಿದುಕೊಂಡರು. ಆ ರಾತ್ರಿಯಲ್ಲಿಯೇ ಯೇಸು ಆ ಸ್ಥಳದಲ್ಲಿ ಜನಿಸಿದರು. ಆ ಶಿಶುವನ್ನು ಗೋದಲಿಯಲ್ಲಿ ಮಲಗಿಸಿದರು.

ಆ ಊರಿಗೆ ಎಷ್ಟೋ ದೂರದಲ್ಲಿ ಅರಸರೆಂದು ಕರೆಯಲ್ಪಡುತ್ತಿರುವ ಕೆಲವರು ಜೋಯಿಸರು ಇದ್ದಿದ್ದರು. ಅವರು ಆಕಾಶದಲ್ಲಿ ಒಂದು ಪ್ರತ್ಯೇಕ ನಕ್ಷತ್ರವನ್ನು ನೋಡಿದ್ದರು ಮತ್ತು ಅರಸರಿಗೆ ಅರಸನು ಜನಿಸಿದ್ದಾನೆಂದು ತಿಳಿದುಕೊಂಡಿದ್ದರು. ಆ ಜೋಯಿಸರು ಶಿಶುವಾದ ಯೇಸುವಿಗೆ ಕೆಲವು ಉಡುಗೊರೆಗಳನ್ನು ಕೊಡಬೇಕೆಂದು ಬಯಸಿದ್ದರು. ಆದ್ದರಿಂದ ಅವರು ಆಕಾಶದಲ್ಲಿ ನಕ್ಷತ್ರವನ್ನು ನೋಡುತ್ತಾ ಯೇಸುವನ್ನು ಕಂಡುಕೊಳ್ಳಲು ತಮ್ಮ ಪ್ರಯಾಣವನ್ನು ಆರಂಭಿಸಿದರು. ಆ ಜೋಯಿಸರು ಶಿಶುವಾದ ಅರಸನಿಗಾಗಿ ಹುಡುಕುತ್ತಿದ್ದಾರೆಂದು ಅರಸನಾದ ಹೆರೋದನು ಕೇಳಿಸಿಕೊಂಡಿದ್ದನು. ಅವನು ತುಂಬಾ ಅಸೂಯೆಗೊಂಡು ಯೇಸುವನ್ನು ಸಾಯಿಸಬೇಕೆಂದಿದ್ದನು. ಅರಸನಾದ ಹೆರೋದನು ಆ ಜೋಯಿಸರನ್ನು ತನ್ನ ಬಳಿಗೆ ಬರಬೇಕೆಂದು ಕರಕಳುಹಿಸಿದನು. ಆತನಿಗೆ ಯೇಸು ಎಲ್ಲಿ ಹುಟ್ಟಿದ್ದಾನೆಂದು ತಿಳುದುಕೊಂಡು, ಆತನನ್ನು ನಾನು ಆರಾಧಿಸುತ್ತೇನೆಂದು ಹೇಳಿದನು. ಜೋಯಿಸರು ಯೇಸುವನ್ನು ಕಂಡುಕೊಂಡನಂತರ, ಅವರು ಹಿಂದಿರುಗಿ ಬಂದು, ಯೇಸು ಎಲ್ಲಿ ಹುಟ್ಟಿದ್ದಾನೆಂದು ನನಗೆ ಹೇಳಬೇಕೆಂದು ಅರಸನು ಅವರಿಗೆ ಆಜ್ಞಾಪಿಸಿದನು. ಜೋಯಿಸರು ಯೇಸುವನ್ನು ಕಂಡುಕೊಂಡನಂತರ, ಅವರು ಆತನಿಗೆ ಚಿನ್ನ ಧೂಪ ರಕ್ತಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು. ಅವರು ಅಲ್ಲಿಂದ ಹಿಂದುರಿಗೆ ತಮ್ಮ ಮನೆಗಳಿಗೆ ಹೋಗುವಾಗ ಅರಸನಾದ ಹೇರೋದನ ಬಳಿಗೆ ಹೋಗದೆ ಬೇರೊಂದು ಮಾರ್ಗದಲ್ಲಿ ಹೋಗಿದ್ದರು, ಯಾಕಂದರೆ ಅರಸನಾದ ಹೆರೋದನು ಯೇಸುವನ್ನು ಆರಾಧನೆ ಮಾಡುವುದಿಲ್ಲವೆಂದು, ಆತನನ್ನು ಸಾಯುಸುತ್ತಾನೆಂದು ಅವರು ಗ್ರಹಿಸಿದ್ದರು.

## ಅನ್ವಯ (ಪಾಠ 2)

ನನ್ನ ಜೀವನದಲ್ಲಿ ಯೇಸುವು ನಿವಾಸವಾಗಿರಲು ಸ್ಥಾನವನ್ನು ಕೊಡುತ್ತೇನೆ.

### ಕಂಠಪಾಠ ವಾಕ್ಯ (ಪಾಠ 2)

“ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು.” - ಪ್ರಕಟನೆ.3:20.

### ಮನೆಗೆಲಸ (ಪಾಠ 2)

ಯೇಸುವು ನಿಮ್ಮ ಜೀವನದೊಳಗೆ ಬರಬೇಕೆಂದು ಮತ್ತು ಆತನು ನಿಮಗೆ ಯಜಮಾನನಾಗಿ ಇರಬೇಕೆಂದು ಆತನಲ್ಲಿ ಕೇಳಿಕೊಳ್ಳಿರಿ. ನಿಮ್ಮ ಸ್ವಶಕ್ತಿಯಿಂದ ಒಳ್ಳೆಯವರಾಗಿರುವುದಕ್ಕೆ ಸಾಧ್ಯವಿಲ್ಲವೆಂದು ಮತ್ತು ಆತನ ರಕ್ಷಣೆಯ ವರವು ನಿಮಗೆ ತುಂಬಾ ಅವಶ್ಯಕವೆಂದು ದೇವರ ಮುಂದೆ ಒಪ್ಪಿಕೊಳ್ಳಿರಿ. ನೀವು ಈಗಾಗಲೇ ಕ್ರೈಸ್ತರಾಗಿದ್ದಾರೆ, ನೀವು ಯಾವಾಗ ಮತ್ತು ಎಲ್ಲಿ ಪ್ರಾರ್ಥನೆ ಮಾಡಬೇಕೆಂದು ತಿಳಿದುಕೊಂಡಿರ್ರಿ. ಇದರ ಕುರಿತಾಗಿ ನಿಮ್ಮ ಸ್ನೇಹಿತರಿಗೆ ಹೇಳಿರಿ. ಪ್ರಾರ್ಥನೆ ಮಾಡುವುದಕ್ಕೆ ನಿಮ್ಮ ಸಹಾಯ ಬೇಕೆಂದು ನಿಮ್ಮ ಸ್ನೇಹಿತನನ್ನು ಕೇಳಿರಿ ಮತ್ತು ಅವರ ಜೀವನದೊಳಗೆ ಯೇಸು ಸ್ವಾಮಿ ಪ್ರವೇಶಿಸಬೇಕೆಂದು ಯೇಸುವಲ್ಲಿ ಪ್ರಾರ್ಥಿಸಿರಿ.

### ದೇವರ ಡಿ.ಎನ್.ಎ (ಪಾಠ 2)

ಈ ಭೂಮಿಯ ಮೇಲೆ ದೇವರನ್ನು ಕಂಡುಕೊಳ್ಳಬಹುದು, ಆದರೆ ನೀವು ಬಯಸಿದ ಸ್ಥಳದಲ್ಲಿ ಕಂಡುಕೊಳ್ಳುವುದಕ್ಕಾಗುವುದಿಲ್ಲ.






## ವಿನೋದ ಸಮಯ! (ಪಾಠ 2)

### ಆಟ (ಪಾಠ 2)

ಕೇಳು ಮತ್ತು ಮುಂದೆವರಿಸು

ವೃತ್ತಾಕಾರದಲ್ಲಿ ವಿದ್ಯಾರ್ಥಿಗಳು ನಿಂತಿರುತ್ತಾರೆ ಆದರೆ ಅವರ ಪಕ್ಕದಲ್ಲಿ ನಿಂತಿರುವವರು ಹಿಂದಕ್ಕೆ ತಿರುಗಿ ನಿಲ್ಲಬೇಕು. ಒಂದು ಕಾಗದದ ಚೆಂಡನ್ನು ಇಬ್ಬರು ಅಥವಾ ಮೂವರು ವಿದ್ಯಾರ್ಥಿಗಳಿಗೆ ಕೊಡಿರಿ. ಸಾಧ್ಯವಾದಷ್ಟು ಬೇಗ ಆ ಕಾಗದದ ಚೆಂಡನ್ನು ಒಬ್ಬರಾದನಂತರ ಒಬ್ಬರಿಗೆ ಕೊಡಬೇಕೆಂದು ಹೇಳಿರಿ, ಆದರೆ ಅವರು ಉಪಾಧ್ಯಾಯರ ಮಾತುಗಳನ್ನೇ ಕೇಳುತ್ತಿರಬೇಕು.

ಉದಾಹರಣೆಗೆ, “ಬಲ ಭುಜದ ಮೇಲೆ ಅದನ್ನು ಪಾಸ್ ಮಾಡಬೇಕು” ಎಂದು ಉಪಾಧ್ಯಾಯರು ಕೂಗುತ್ತಾರೆ. ಆಗ ವಿದ್ಯಾರ್ಥಿಗಳು ತಮ್ಮ ಬಲ ಭುಜದ ಮೇಲೆ ಮಾತ್ರವೇ ಆ ಚೆಂಡನ್ನು ಪಾಸ್ ಮಾಡುತ್ತಾರೆ. ಉಪಾಧ್ಯಾಯರು ಇನ್ನೊಂದು ರೀತಿಯಲ್ಲಿ ಆ ಚೆಂಡನ್ನು ಕೊಡಬೇಕೆಂದು ಹೇಳುವವವರೆಗೂ ಮುಂಚೆ ಹೇಳಿದ ವಿಧಾನವನ್ನೇ ಮುಂದೆವರಿಸಬೇಕು. ಉದಾಹರಣೆಗೆ, ವೇಗವಾಗಿ, ನಿದಾನವಾಗಿ, ರಿವರ್ಸಾಗಿ ಕೊಡಬೇಕೆಂದು ಹೇಳುತ್ತಾರೆ. ಆ ಕಾಗದದ ಚೆಂಡನ್ನು ಕೊಡುವ ವಿಧಾನವನ್ನು ಕೂಡ ಮಾರ್ಪಡಿಸಬಹುದು: ಕಾಲು ಕೆಳಗೆ, ಎಡಗೈ ಕೆಳಗೆ, ತಲೆಯ ಮೇಲೆ, ಇನ್ನೂ ಇತ್ಯಾದಿ ರೀತಿಯಲ್ಲಿ ಕೊಡಬಹುದು.

### ಚರ್ಚೆ (ಪಾಠ 2)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ಯೇಸುವು ನನ್ನ ಸ್ನೇಹಿತರ ಮಧ್ಯೆದಲ್ಲಿ ಇರುತ್ತಾನೋ? ಒಂದುವೇಳೆ ಯೇಸುಕ್ರಿಸ್ತನು ನಿಮ್ಮ ಜೀವನವನ್ನು ಹೊಂದಿಕೊಂಡಿದ್ದರೆ, ಅವರು ಯಾವರೀತಿ ತನ್ನ ಸಮಯವನ್ನು ಕಳೆಯುತ್ತಿರಬಹುದು?



ಈ ಪ್ರಶ್ನೆಗೆ ವಿದ್ಯಾರ್ಥಿಗಳು ವಿಭಿನ್ನವಾದ ಉತ್ತರಗಳನ್ನು ಹೇಳುತ್ತಾರೆ, ಮತ್ತು ಕೆಲವರ ಸಂಬಂಧಗಳಲ್ಲಿ ಮತ್ತು ಕಾರ್ಯಾಚರಣೆಗಳಲ್ಲಿ ಅವರಿರಲು ಆತನು ಬಯಸಿದಂತೆ ಇರದ ವಿದ್ಯಾರ್ಥಿಗಳ ಆತ್ಮಸಾಕ್ಷಿಯನ್ನು ನಡೆಸಲು ಪವಿತ್ರಾತ್ಮನನ್ನು ನಂಬಬಹುದು. ಮಾನಸಾಂತರ ಹೊಂದುವುದರ ಕುರಿತಾಗಿ ದೇವರು ಯಾರೊಂದಿಗಾದರೂ ಮಾತನಾಡುತ್ತಿದ್ದರೆ, ಆ ಗುಂಪನ್ನು ಪ್ರಾರ್ಥನೆಯಲ್ಲಿ ನಡೆಸಿರಿ. ಇದರಿಂದ ಬದ್ಧತೆಯು ದೃಡಿಕರಿಸಲ್ಪಡುತ್ತದೆ ಮತ್ತು ಮಾರ್ಪಡಿಸುವುದಕೆಕ್ ದೇವರ ಸಹಾಯಕ್ಕಾಗಿ ಕೇಳಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಕೀರ್ತನೆ 1; 1 ಕೊರಿಂಥ.15:33-34; ಎಫೆಸ.4:17-32; 2 ತಿಮೊಥೆ.2:22; ಯೋಹಾನ.1:6-13; ರೋಮಾ.10:9-13.


2. ಯಾಕೆ ಪ್ರತಿಯೊಬ್ಬರೂ ಯೇಸುವನ್ನು ನಂಬುವುದಕ್ಕೆ ಇಷ್ಟಪಡುವುದಿಲ್ಲ?


ನಮ್ಮ ಪಾಪಗಳಿಗೆ ಪಶ್ಚಾತ್ತಾಪಪಡುವುದೆಂದರೆ ಶಮೆದಮೆಯ ವ್ಯಾಯಾಮ ಮತ್ತು ಆಹಾರವನ್ನು ನಿಯಂತ್ರಿಸಿಕೊಳ್ಳುವಂತೆ ಇರುತ್ತದೆ. ನಮ್ಮ ಮರಣಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಇದೊಂದೇ ಮಾರ್ಗ. ಕ್ರಿಸ್ತನು ಕೊಡುವ ನೀತಿಯನ್ನು ಸ್ವೀಕರಿಸುವುದಕ್ಕೆ ಮತ್ತು ಪರಲೋಕವನ್ನು ಪಡೆಯಲು ಒಳ್ಳೇಯದಾಗಿರಬೇಕೆಂದು ಮಾಡುವ ಪ್ರಯತ್ನವನ್ನು ನಿಲ್ಲಿಸುವುದಕ್ಕೆ ಮನ ಮುರಿಯಬೇಕು ಮತ್ತು ತಗ್ಗಿಸಿಕೊಳ್ಳಬೇಕು.  ಇದನ್ನು ಮಾಡುವುದಕ್ಕೆ ಅನೇಕರು ಸಿದ್ಧತೆಯಿಂದ ಇಲ್ಲ. ಯೋಹಾನ.1:6-13; ರೋಮಾ.10:9-13.

3. ಪರಲೋಕದ ಕುರಿತಾಗಿ ಅಷ್ಟು ವಿಶೇಷತೆ ಏನು?

ಪರಲೋಕ ಎನ್ನುವುದು ಯಾವಾಗಲೂ ದೇವರೊಂದಿಗೆ ಇರುವ ನಿತ್ಯತ್ವ. ನಿಮಗೆ ಇಷ್ಟವಾದ ವಿಷಯಗಳೇನು,  ಅವು ಒಳ್ಳೇಯ ಅನುಭೂತಿಗಳಾಗಿರಬಹುದು ಅಥವಾ ರುಚಿಕರವಾದ ಪದಾರ್ಥಗಳಾಗಿರಬಹುದು, ಅಥವಾ ನೀವು ತುಂಬಾ ಸಂತೋಷ ಪಡುವ ವಿಷಯಗಳಾಗಿರಬಹುದು?  ಅವರಿಗೆ ಅದ್ಭುತಕರವಾದ ವಿಷಯಗಳ ಕುರಿತಾಗಿ ಮಾತನಾಡಿರಿ. ಈಗ, ನಿಮಗೆ ಇಷ್ಟವಾದ ಎಲ್ಲವುಗಳಲ್ಲಿ, ಯಾವುದನ್ನು ದೇವರು ನೇರವಾಗಿ ಸೃಷ್ಟಿ ಮಾಡಿದ್ದಾರೆ? ಆತನು ಸೃಷ್ಟಿ ಮಾಡಿದವುಗಳಿಂದ ಯಾವುದನ್ನು ನಕಲು ಮಾಡಿದ್ದಾರೆಂದು ಕಾಣಿಸಿಕೊಳ್ಳುತ್ತಿದೆ (ಅಂತರ್ಜಾಲ ನಕಲುಗಳಹಾಗೆ, ನಮ್ಮ ಬಯಕೆಗಳು ಸಮುದಾಯದೊಂದಿಗೆ ಸಂಬಂಧವನ್ನು ಹೊಂದಿರಬೇಕು - ಅಂದರೆ ದೇವರು ಸೃಷ್ಟಿ ಮಾಡಿದವುಗಳೊಂದಿಗೆ ಸಂಬಂಧವಿರಬೇಕು) ನಾವು ಪ್ರೀತಿ ಮಾಡುವಂತಹ ಉತ್ತಮವಾದವುಗಳನ್ನುಂಟು ಮಾಡುವುದಕ್ಕೆ ದೇವರು 7 ದಿನಗಳ ಕಾಲ ತೆಗೆದುಕೊಂಡಿದ್ದರೆ; ಆತನೊಂದಿಗೆ ಇರುವ ನಿತ್ಯತ್ವವು ಭೂಮಿಯ ಮೇಲೆ ಕಳೆಯುವ ಉತ್ತಮ ದಿನಕ್ಕಿಂತಲೂ ಅದು ಅದ್ಭುತಕರವಾಗಿರುತ್ತದೆಯೆಂದು ನೀವು ಊಹಿಸುವಿರಾ? ಪರಲೋಕ ಎನ್ನುವುದು ಪಾಪವಿಲ್ಲದ ಸ್ಥಳ, ಕಣ್ಣೀರು ಮತ್ತು ನೋವುಗಳಿಲ್ಲದ ಸ್ಥಳ ಮತ್ತು ದೇವರೊಂದಿಗೆ ಕುಟುಂಬ ಸ್ನೇಹಭಾವವಿರುವ ಸ್ಥಳ. ಯೋಹಾನ.14:1-3; ಕೊಲೊಸ್ಸ.3:1-2; ಪ್ರಕಟನೆ.21:1-22:6.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 2)







## ಲೂಕಾಸ್ ರವರ ಪ್ರಯೋಗ (ಪಾಠ 2)

ನೆರಳು ಗಡಿಯಾರ

ಗಡಿಯಾರ ಆಕೃತಿಯಲ್ಲಿ ಒಂದು ಅಟ್ಟೆಯನ್ನು ತೆಗೆದುಕೊಂಡು ಕತ್ತರಿಸಿರಿ ಮತ್ತು ಇನ್ನೊಂದು ಬೇರೆ ಆಕೃತಿಯಲ್ಲಿ ಮಾಡಿರಿ. ಅವುಗಳನ್ನು ತೆಗೆದುಕೊಂಡು ನೆರಳು ಗಡಿಯಾರ ಆಕೃತಿಗೆ ಅಂಟಿಸಿರಿ. ಅದನ್ನು ತೆಗೆದುಕೊಂಡು ನಿಮ್ಮ ಕೈಗೆ ಕಟ್ಟಿಕೊಳ್ಳಿರಿ. ಈ ಗಡಿಯಾರದಿಂದ ಸಮಯವನ್ನು ಲೆಕ್ಕಿಸುವುದಕ್ಕೆ ಬಿಸಿಲು ಹೆಚ್ಚಾಗಿರುವ ದಿನದಂದು ಹೊರಗಡೆ ಮಾಡು ವಿನೋದವನ್ನು ಹೊಂದಿರಿ ಅಥವಾ ಮನೆಗಳಲ್ಲಿ ಸಮಯವನ್ನು ಹೇಳುವುದಕ್ಕೆ ಇವುಗಳನ್ನು ಬಳಿಸಿ ತಮಾಷೆಯನ್ನು ಮಾಡಿರಿ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 3 ]--

## ಸೂಚನೆಗಳು! (ಕ್ಲೂಸ್) (ಪಾಠ 3)

### 1 ಸೂಚನೆ #1 ಅಂಶ (ಪಾಠ 3)

ಜೋರಾದ ಶಬ್ದ ತರಂಗಗಳ ಕೇಸ್

### 2 ಸೂಚನೆ #2 ನಾಟಕ (ಪಾಠ 3)



ಪೋಲೀಸ್ : ಇನ್ಸ್ಪೆಕ್ಟರ್ ಸಾಬ್ ನೀವು ಬಂದಿದ್ದಕ್ಕಾಗಿ ವಂದನೆಗಳು. ಈ ಸ್ಥಳದಲ್ಲಿ ನೀವು ಒಂದು ಬಾರಿ ನೋಡಿ, ನಿಮಗೆ ಏನು ಅನ್ನಿಸುತ್ತದೋ ಹೇಳಿರಿ.

ಇನ್ಸ್ಪೆಕ್ಟರ್ : ಖಂಡಿತ ಹೇಳುತ್ತೇನೆ. ನಾನು ಅಲ್ಲಿ ಏನು ನೋಡುತ್ತಾ ಇದ್ದೇನೆ?

ಪೋಲೀಸ್ : ನೀವು ಈ ಗೋಡೆಯನ್ನು ನೋಡುತ್ತಿದ್ದೀರಾ?

ಇನ್ಸ್ಪೆಕ್ಟರ್ : ಹೌದು, ಅದು ಒಂದು ದೊಡ್ಡ ಗೋಡೆ. ಆ ಗೋಡೆಯ ಒಳಗಡೆ ದೊಡ್ಡ ಮನೆಯನ್ನು ಕಟ್ಟಿಕೊಂಡಿದ್ದಾರೆ.

ಪೋಲೀಸ್ : ಹೌದು, ಒಳ್ಳೇದು, ಇಲ್ಲಿ ಏನು ನಡೆದಿರಬಹುದೆಂದು ಲೆಕ್ಕಾಚಾರ ಮಾಡುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಇದು ಯಾವರೀತಿ ನಡೆಯಿತು?

ಇನ್ಸ್ಪೆಕ್ಟರ್ : ನಾನೂ ಅದೇ ನೋಡುತ್ತಾ ಇದ್ದೇನೆ. ಎಲ್ಲಾ ಪಟ್ಟಣಗಳಲ್ಲಿ ನಾನು ನೋಡಿದಂತೆ ಈ ಗೋಡೆಯನ್ನು ತುಂಬಾ ಗಟ್ಟಿಯಾಗಿ ಕಟ್ಟಿದ್ದಾರೆ.

ಪೋಲೀಸ್ : ಈ ರೀತಿಯಾದ ಗೋಡೆ ಕೆಳಗೆ ಬಿದ್ದಿರುವುದನ್ನು ನೀವು ಎಂದಾದರೂ ನೋಡಿದ್ದೀರಾ?

ಇನ್ಸ್ಪೆಕ್ಟರ್ : ಇಂಥ ಗೋಡೆಯು ಕೇವಲ ಭೂಕಂಪ ಬಂದಾಗ ಮಾತ್ರ ಬಿದ್ದಿರುವುದನ್ನು ನಾನು ನೋಡಿದ್ದೇನೆ, ಆದರೆ ಇಲ್ಲಿ ದೊಡ್ಡ ಭೂಕಂಪ ಬಂದಿರಬೇಕು.

ಪೋಲೀಸ್ : ಈ ಗೋಡೆ ಬಿದ್ದಾಗ ಯಾವ ಭೂಕಂಪನೂ ಬಂದಿರಲಿಲ್ಲ.

ಇನ್ಸ್ಪೆಕ್ಟರ್ : ಒಂದುವೇಳೆ ಭೂಕಂಪ ಬಂದರೂ, ನಾನು ಕೇವಲ ಗೋಡೆಗಳು ಸೀಳಿಕೊಂಡಿರುವುದನ್ನು ಮಾತ್ರ ನೋಡಿದ್ದೇನೆ ಹೊರತು ಈ ರೀತಿ ಪೂರ್ತಿಯಾಗಿ ನೆಲ ಮಟ್ಟಕ್ಕೆ ಬಿದ್ದಿರುವುದನ್ನು ನೋಡಲಿಲ್ಲ.

ಪೋಲೀಸ್ : ಅದನ್ನೇ ನಾನೂ ಆಲೋಚನೆ ಮಾಡುತ್ತಿದ್ದೇನೆ..

ಇನ್ಸ್ಪೆಕ್ಟರ್ : ಎಲ್ಲಾ ಗೋಡೆಗಳು ಉತ್ತರ ದಿಕ್ಕಿಗೆ ಬಿದ್ದಿವೆಯಾ? ಅಥವಾ ಕೇವಲ ಉತ್ತರ ದಿಕ್ಕಿನಲ್ಲಿರುವ ಗೋಡೆ ಮಾತ್ರ ಬಿದ್ದಿದೆಯಾ?

ಪೋಲೀಸ್ : ಇಲ್ಲಿರುವ ಎಲ್ಲಾ ಗೋಡೆಗಳನ್ನು ನಿಮ್ಮ ಕಣ್ಣಿನಿಂದಲೇ ನೋಡಿರಿ.

ಇನ್ಸ್ಪೆಕ್ಟರ್ : ಓ.. ಈ ರೀತಿ ಆಗುತ್ತದೆಯೆಂದು ನಾವು ಅಂದುಕೊಂಡಿಲ್ಲ. ಪಶ್ಚಿಮದ ದಿಕ್ಕಿಗಿರುವ ಗೋಡೆಯು ಪಶ್ಚಿಮದ ಕಡೆಗೆ ಬಿದ್ದಿದೆ. ಎಲ್ಲಾ ಗೋಡೆಗಳು ನೇರವಾಗಿ ಇದ್ದ ಸ್ಥಳದಲ್ಲೇ ಕುಸಿದು ಬಿದ್ದಿವೆಯಾ ಅಥವಾ ಬೇರೊಂದು ರೀತಿಯಲ್ಲಿ ಬಿದ್ದಿವೆಯಾ?

ಪೋಲೀಸ್ : ಹೌದು, ನೇರವಾಗಿ ಇದ್ದ ಸ್ಥಳದಲ್ಲೇ ಕುಸಿದು ಬಿದ್ದಿವೆ.

ಇನ್ಸ್ಪೆಕ್ಟರ್ : ಹೌದಾ!.. ಈ ರೀತಿ ಸಂಘಟನೆ ನಡೆಯುವುದಕ್ಕೆ ಕಾರಣ ಏನಾಗಿರಬಹುದೆಂದು ಅಂದುಕೊಳ್ಳುತ್ತಿದ್ದಾರೆ?

ಪೋಲೀಸ್ : ಕೆಲವು ವದಂತಿಗಳಿವೆ, ಆದರೆ ಕಣ್ಣಾರೆ ಕಂಡ ಸಾಕ್ಷಿಗಳಿಲ್ಲ.

ಇನ್ಸ್ಪೆಕ್ಟರ್ : ಇದು ಹೆಚ್ಚಿನ ಜನಸಂಖ್ಯೆ ಇರುವ ಪಟ್ಟಣ, ಇದನ್ನು ನೋಡುತ್ತಿದ್ದರೆ ತುಂಬಾ ಶ್ರೀಮಂತಿಕೆಯ ಪಟ್ಟಣವೆಂದು ತೋಚುತ್ತಿದೆ. ಯಾರು ನೋಡದೇ ಇರಲು ಹೇಗೆ ಸಾಧ್ಯ?

ಪೋಲೀಸ್ : ಅವರೆಲ್ಲರು ಸತ್ತು ಹೋಗಿದ್ದಾರೆ. ಯಾರೂ ಜೀವಂತವಾಗಿಲ್ಲ ಮತ್ತು ಯಾರ ಬಳಿಯೂ ಬಂಗಾರ, ಬೆಳ್ಳಿ, ಅಥವಾ ತಾಮ್ರಗಳೆನ್ನುವವು ಇಲ್ಲ.

ಇನ್ಸ್ಪೆಕ್ಟರ್ : ಈ ರೀತಿ ನಾನು ಎಂದಿಗೂ ಕಂಡಿಲ್ಲ.

ಪೋಲೀಸ್ : ಸರಿ, ನಿಮ್ಮ ಸಮಯಕ್ಕಾಗಿ ತುಂಬಾ ಧನ್ಯವಾದಗಳು ಇನ್ಸ್ಪೆಕ್ಟರ್. ನಿಮ್ಮ ಕೆಲಸದ ಸ್ಥಳಕ್ಕೆ ನಾನು ಬಿಡುತ್ತೇನೆ. ನಾನು ತಪ್ಪದೇ ಪ್ರಧಾನ ಕಾರ್ಯಾಲಯಕ್ಕೆ ಹಿಂದಿರುಗಬೇಕು.

ಇನ್ಸ್ಪೆಕ್ಟರ್ : ನಾನು ಕಂಡುಕೊಳ್ಳುವ ಪ್ರತಿಯೊಂದನ್ನು ನಿಮಗೆ ಕೂಡ ಕಳುಹಿಸಿಕೊಡುತ್ತೇನೆ.

ಪೋಲೀಸ್ : ನಿಮಗೆ ಧನ್ಯವಾದಗಳು. ನಾನು ಅತೀ ಶೀಘ್ರದಲ್ಲಿಯೇ ಸಿಗುತ್ತೇನೆ, ನಾನು ಹಾಯಿಗೆ ಕಳುಹಿಸಲ್ಪಡುತ್ತೇನೆ, ನಮ್ಮನ್ನು ಧಾಳಿ ಮಾಡುಲು ಪ್ರಯತ್ನಿಸುವುದಕ್ಕೆ ಒಂದು ಸೈನ್ಯವಿದೆ. ನಾವು ಅವರನ್ನು ಒಂದುಸಲ ಹೊಡೆದಿದ್ದೇವೆ, ಆದರೆ ಅವರು ಮತ್ತೊಂದುಸಲ ನಮ್ಮ ಮೇಲಕ್ಕೆ ಬರಬಹುದು.

ಇನ್ಸ್ಪೆಕ್ಟರ್ : ಸರಿ, ಒಳ್ಳೇಯದಾಗಲಿ. ಕಿಟಕಿಯಿಂದ ಇಳಿಯಾಕಲ್ಪಟ್ಟಿರುವ ಈ ಕೆಂಪು ಬಣ್ಣದ ದಾರವನ್ನು ನೋಡುವುದಕ್ಕೆ ನಾನು ಹೋಗುತ್ತಿದ್ದೇನೆ.

ಪೋಲೀಸ್ : ಸರಿ ಸಾರ್, ನಿಮ್ಮೊಂದಿಗೆ ಮತ್ತೇ ಮಾತನಾಡುತ್ತೇನೆ..

## 3 ಸೂಚನೆ #3 ವಸ್ತು (ಪಾಠ 3)

ತರಗತಿಗೆ ತೆಗೆದುಕೊಂಡು ಬನ್ನಿರಿ : ಇಟ್ಟಿಗೆ, ಕಹಳೆ ಅಥವಾ ಮೇಕೆಯ ಕೊಂಬು




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 3)

ನಾಶವಾದಂಥ ಈ ಪುರಾತನ ಯೆರಿಕೋ ಸ್ಥಳವನ್ನು ಏರ್ನ್.ಸ್ಟ್ ಸೇಲ್ಲಿನ್ ಮತ್ತು ಪುರಾತನ ವಸ್ತು ಶಾಸ್ತ್ರ ಸಮಾಜದಿಂದ "ಡ್ಯುತ್ಸ್ಚೆ ಓರಿಯಂಟ್ ಗೆಸೆಲ್ಸ್ಕ್ಯಾಫ್ಟ್" ರವರು ಸಂಶೋಧನೆ ಮಾಡಿದ್ದಾರೆ. ಗೋಡೆಗಳು ಹೊರಬದಿಗೆ ಬಿದ್ದಿವೆಯೆಂದು ಹೇಳುವುದಕ್ಕೆ ಆಧಾರವನ್ನು ಕಂಡುಕೊಂಡಿದ್ದಾರೆ.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 3)

ರಹಸ್ಯ : ಎರಡು ಮೇಕೆಗಳ ಕೊಂಬುಗಳು – ಸೈನ್ಯವು ಕಹಳೆಯನ್ನು ತೆಗೆದು ಜೋರಾಗಿ ಕೂಗುವಂತೆ ಮಾಡುವುದಕ್ಕೆ.



ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 3)

## ಬೈಬಲ್ ಕಥೆ (3 ಪಾಠ)

**ಯೆರಿಕೋ ಹತ್ತಿರ ಯೆಹೋಶುವ**

**ಬೈಬಲ್ ವಾಕ್ಯಭಾಗ: ಯೆಹೋ.5:13-6:27.**



ಯೆಹೋಶುವ ಮತ್ತು ಸೈನ್ಯವು ಯೆರಿಕೋ ಪಟ್ಟಣವನ್ನು ದಾಟಿದನಂತರ, ದೇವರ ದೂತ ಯೆಹೋಶುವನ ಮುಂದೆ ಬಂದು ನಿಂತುಕೊಂಡಿತು ಮತ್ತ ಆ ದೂತ ಅವನಿಗೆ ಯೆರಿಕೋವನ್ನು ಕೊಡುತ್ತೇನೆಂದು ಯೆಹೋಶುವನಿಗೆ ಹೇಳಿರಬೇಕು. ಯೆರಿಕೋಗಿಂತಲೂ ದೇವರ ಆಜ್ಞೆಗಳನ್ನೇ ಯೆಹೋಶುವನು ಅನುಸರಿಸುತ್ತಿದ್ದರೆ, ಯೆರಿಕೋ ಬಿದ್ದು ಹೋಗುತ್ತದೆ ಮತ್ತು ಯೆಹೋಶುವ ಅದನ್ನು ದೇವರಿಗಾಗಿ ಪ್ರತಿಷ್ಠೆ ಮಾಡುತ್ತಿದ್ದನು. ಯೆಹೋಶುವನು ಮುಂಚೆ ಎಂದಿಗೂ ಕಲಿತುಕೊಳ್ಳದಿರ ಮಿಲಟರಿ ಧಾಳಿಯಿಂದ ಅವರು ಬಂದಿದ್ದರೂ ಯೆಹೋಶುವ ದೇವರು ಕೊಟ್ಟ ಆಜ್ಞೆಗಳನ್ನು ಪರಿಪೂರ್ಣವಾಗಿ ಕೈಗೊಂಡಿದ್ದನು. ಆದರೆ ಮೊದಲನೇ ದಿನ ಯೆಹೋಶುವನ ಬಳಿ ಇದ್ದಿದ್ದ ಯಾಜಕರು ಟಗರು ಕೊಂಬುಗಲನ್ನು ತೆಗೆದುಕೊಂಡು ದೇವರ ಒಡಂಬಡಿಕೆಯ ಮಂಜೂಷದ ಮುಂದೆ ನಿಂತು, ಯೆರಿಕೋ ಗೋಡೆಯ ಸುತ್ತಲೂ ಒಂದುಬಾರಿ ತಿರುಗಿ ಬರಬೇಕಾಗಿತ್ತು. 2ನೇ ದಿನದಂದು ಕೂಡ ಅವರು ಅದನ್ನೇ ಮಾಡಿದರು, ಆದರೆ ಯಾವ ಗಲಾಟೆ ಮಾಡದಂತೆ ನಡೆದಿದ್ದರು. ಹೀಗೆ ಅವರು 7 ದಿನಗಳ ಕಾಲ ಮಾಡಿದರು. ಏಳನೇ ದಿನದಂದು ಅವರು ಏಳು ಬಾರಿ ಗೋಡೆಯ ಸುತ್ತಲೂ ತಿರುಗಿದರು. ಯಾಜಕರು ಟಗರಿನ ಕೊಂಬುಗಳನ್ನು ಊದುತ್ತಿರುವಾಗ, ಯೋಧರಾದ ಪ್ರತಿಯೊಬ್ಬರೂ ಜಯಕ್ಕಾಗಿ ಜೋರಾಗಿ ಕೂಗಿದರು. ಆಗ, ಯೆರಿಕೋ ಗೋಡೆಗಳು ಇದ್ದಕ್ಕಿದ್ದಂತೆ ಬಿದ್ದು ಹೋದವು! ಸೈನಿಕರೆಲ್ಲರೂ ಪಟ್ಟಣದೊಳಗೆ ಓಡಿ ಹೋಗಿ, ಪಟ್ಟಣದ ಮೇಲೆ ಜಯವನ್ನು ಹೊಂದಿದರು, ಎಲ್ಲಾ ಬಂಗಾರ, ಬೆಳ್ಳಿ ಮತ್ತು ತಾಮ್ರವನ್ನೆಲ್ಲ ದೇವರ ನಿಧಿಯಂತೆ ಸೇಕರಣೆ ಮಾಡಿ ಇಟ್ಟಿದ್ದರು. ಆ ದಿನದಂದು ರಾಹಾಬಳು ಮತ್ತು ತನ್ನ ಕುಟುಂಬವನ್ನು ಬಿಟ್ಟು ಪಟ್ಟಣದಲ್ಲಿರುವ ಪ್ರತಿಯೊಂದನ್ನು ನಾಶಗೊಳಿಸಿದರು. ಯೆಹೋಶುವನು ಮತ್ತು ಸೈನಿಕರು ಆ ಪಟ್ಟಣವನ್ನು ವಶ ಮಾಡಿಕೊಳ್ಳಲು ರಾಹಾಬಳು ಯೆಹೋಶುವನಿಗೆ ಸಹಾಯ ಮಾಡಿದ್ದಳು, ಆದ್ದರಿಂದ ಆಕೆಯನ್ನು ಮತ್ತು ಆಕೆಯ ಕುಟುಂಬವನ್ನು ನಾಶ ಮಾಡದೆ ಬಿಟ್ಟಿದ್ದರು.

## ಅನ್ವಯ (ಪಾಠ 3)

ನಾನು ವಿಧೇಯತೆಯನ್ನು ತೋರಿಸುತ್ತೇನೆ ಯಾಕಂದರೆ ದೇವರು ಆಜ್ಞಾಪಿಸಿದ ಕೆಲಸ.

## ಕಂಠಪಾಠ ವಾಕ್ಯ (ಪಾಠ 3)

"ಆತನು - ಹಾಗನ್ನಬೇಡ, ದೇವರ ವಾಕ್ಯವನ್ನು ಕೇಳಿ ಅದಕ್ಕೆ ಸರಿಯಾಗಿ ನಡಕೊಳ್ಳುವವರೇ ಧನ್ಯರು ಅಂದನು." = ಲೂಕ.11:28.

## ಮನೆಗೆಲಸ (ಪಾಠ 3)

ನಮಗೆ ಕೊಡಲ್ಪಟ್ಟ ದೇವರ ಆಜ್ಞೆಗಳು ನಾವು ಯುದ್ಧದಲ್ಲಿ ಜಯಿಸುವುದಕ್ಕೂ ಉಪಯೋಗ ವಾಗುತ್ತವೆ. "ನಿಮ್ಮ ತಂದೆತಾಯಿಗಳಿಗೆ ವಿಧೇಯರಾಗಿರಿ" ಎಂದು ಆತನು ಹೇಳಿದನು. ಈ ವಾರದಲ್ಲಿ ನೀವು ನಿಮ್ಮ ತಂದೆತಾಯಿಗಳ ಮಾತುಗಳಿಗೆ ಕಿವಿಗೊಡಿರಿ, ಪ್ರತಿಯೊಂದು

ಮಾತಿಗೂ ಆಲಸ್ಯ ಮಾಡದೆ, ತಕ್ಷಣವೇ ವಿಧೇಯತೆಯನ್ನು ತೋರಿಸಿರಿ, ಬಹುಶ ಅದು ಯೆಹೋಶುವ ಹಾಗೆ ನಿಮಗೂ ಅಷ್ಟು ಸುಲಭವಲ್ಲವೆಂದು ಅನಿಸಬಹುದು, ಆದರೆ ವಿಧೇಯತೆ ತೋರಿಸುವಷ್ಟು ಬೆಲೆಯುಳ್ಳದ್ದು.

### ದೇವರ ಡಿ.ಏನ್.ಎ (ಪಾಠ 3)




ವಿಶ್ವಾಸಿಗಳು ದೇವರಿಗೆ ವಿಧೇಯತೆ ತೋರಿಸಿ ಜೀವಿಸಿದಾಗ, ದೇವರು ತನ್ನ ಜನರ ಪಕ್ಷವಾಗಿ ಯುದ್ಧ ಮಾಡುವವರಾಗಿದ್ದಾರೆ.



## ವಿನೋದ ಸಮಯ! (ಪಾಠ 3)

### ಆಟ (ಪಾಠ 3)

ಬೇಯಿಸಿದ ಆಲೂಗಡ್ಡೆ

ಮಕ್ಕಳೆಲ್ಲರೂ ವೃತ್ತಾಕಾರದಲ್ಲಿ ನಿಂತುಕೊಳ್ಳುವುದಕ್ಕೆ/ಕೂಡುವುದಕ್ಕೆ ಹೇಳಿರಿ. ಅವರು ಕುಳಿತಿರುವ ವೃತ್ತಾಕಾರದ ಸುತ್ತಲೂ ನೀವು ಸಂಗೀತದ ಕ್ಯಾಸೆಟ್ ಹಾಕಿ, ಒಂದು ಲೈಟ್ ಬರುವಂತೆ ಮಾಡಬಹುದು. ಆ ಸಂಗೀತವು ನಿಲ್ಲಿಸಿದಾಗ, ಆ ಲೈಟ್ ಯಾರ ಮೇಲೆ ನಿಂತುಹೋಗುತ್ತದೋ ಅವರು ಆಟದಿಂದ ಹೊರಬರುತ್ತಾರೆ.

### ಚರ್ಚೆ (ಪಾಠ 3)

(ದೊಡ್ಡ ಮಕ್ಕಳಿಗಾಗಿ)




1. ನಾನು ತುಂಬಾ ಕೆಟ್ಟು ಹೋಗಿದ್ದರೆ ಏನಾಗುತ್ತದೆ? ಇತ್ತೀಚೆಗೆ ನೀವು ಕೇಳಿದ ಅಥವಾ ನೋಡಿದ ದೊಡ್ಡ ದೊಡ್ಡ ಪಾಪಗಳು, ತಪ್ಪುಗಳೇನು? ನಿಮ್ಮ ಸ್ವಂತ ಜೀವನದಲ್ಲಿ ಅಂಥಹ ತಪ್ಪುಗಳನ್ನು ಅಥವಾ ಪಾಪಗಳನ್ನು ಮಾಡಿದರೆ ಏನು ನಡೆಯುತ್ತದೆ? ಪಾಪಕ್ಕೆ ವಿರುದ್ಧವಾಗಿರುವ ತೀರ್ಪುಗಾಗಿ ದೇವರ ಬೇಕಾದ ಅಗತ್ಯತೆ ಯೇಸು ಮರಣ ಹೊಂದಿದನಂತರ ಆತನು ತೃಪ್ತಿಗೊಂಡನು, 1 ಯೋಹಾನ.1:7-9 ವಚನ ಭಾಗವು ನಮ್ಮ ಪಾಪಗಳನ್ನು ಬಚ್ಚಿಡದೆ, ಅವುಗಳನ್ನು ಒಪ್ಪಿಕೊಂಡರೆ, ನಾವು ಕ್ಷಮಿಸಲ್ಪಡುತ್ತೇವೆ ಎಂದು ನಮ್ಮನ್ನು ಎಚ್ಚರಗೊಳಿಸುತ್ತಿದೆ.
2. ನಾನು ಯಾವಾಗ ಯಜಮಾನನಾಗಿರುತ್ತೇನೆ? ದೇವರು ಯಾವರೀತಿ ನಾಯಕರನ್ನು ತಯಾರು ಮಾಡುತ್ತಾನೆ?


   ನಿಮ್ಮ ಮಕ್ಕಳು ಅನೇಕಮಂದಿ ಯಜಮಾನರ ಕುರಿತಾಗಿ ಮಾತನಾಡಲು ಹೇಳಿರಿ... ಅವರು ತಂದೆತಾಯಿಗಳಿಂದ ಉಪಾಧ್ಯಾಯರವರೆಗೆ, ಉಪಾಧ್ಯಾಯರಿಂದ ಕೋಚ್.ಗಳವರೆಗೆ ಮತ್ತು ಪಾಸ್ಟರ್.ಗಳ ವರೆಗೆ ಮಾತನಾಡಬಹುದು. ಯಜಮಾನರಾಗಬೇಕೆಂದರೆ ಎಲ್ಲಾದರೊಂದು ಸ್ಥಳವನ್ನು ಹುಡುಕಿ, ಅಲ್ಲಿ ನಂಬಿಗಸ್ಥರಾಗಿ ಸೇವೆ ಮಾಡಿರಿ.
3. ಸುಳ್ಳು ಹೇಳುವುದು ಏನು ತಪ್ಪೇ ಇಲ್ಲ ಎಂದು ಯಾವಾಗ ನಾವು ತಿಳಿಯುತ್ತೇವೆ? ಚಿಕ್ಕ ಚಿಕ್ಕ ಸುಳ್ಳುಗಳು ಹೇಳುವುದು ಪರವಾಗಿಲ್ಲವೋ, ದೊಡ್ಡ ಸುಳ್ಳುಗಳೇ ಪ್ರಾಮುಖ್ಯವೋ?

   ಯಾರ್ಯಾರು ವಿಶ್ವಾಸದಿಂದ ನಡೆದುಕೊಳ್ಳುತ್ತಾರೋ ಅವರೆಲ್ಲರಿಗೆ ದೇವರು ಬಹುಮಾನಗಳನ್ನು ಕೊಡುತ್ತಾರೆ. ರಾಹಾಬಳ ವಿಷಯದಲ್ಲಿ ತನ್ನ ದೇಶದ ಜನರಿಗೆ ಹೇಳಿದ ತನ್ನ ಸಾಕ್ಷಿ ದೊಡ್ಡ ಸುಳ್ಳು, ಅತೀ ದೊಡ್ಡ ಸುಳ್ಳು, ಆದರೆ ಅದು ದೇವರಲ್ಲಿ ತನ್ನ ನಂಬಿಕೆಯಿಂದ ಬಂದ ಮೊದಲ ಕ್ರಿಯೆಯಾಗಿತ್ತು. ತನ್ನ ಸ್ವಂತ ಜನರನ್ನು ಮತ್ತು ತನ್ನ ಸ್ವಂತ ಮತವನ್ನು ತನ್ನ ಬದಿಗೆ ತಿರುಗಿಸಿಕೊಂಡ ಕ್ಷಣವದು. ತುಂಬಾ

ಹೆಚ್ಚಾಗಿ ಪ್ರೀತಿ ಮಾಡುವ ವಿಷಯವನ್ನು ಕಂಡುಕೊಳ್ಳಿರಿ, ಮೊದಲು ದೇವರು, ಎರಡನೇಯದಾಗಿ ನಮ್ಮ ಸುತ್ತಮುತ್ತಲಿರುವ ಜನರು, ಅವಾಗ ನೀವು ಒಳ್ಳೆಯ ಕಾರ್ಯಗಳನ್ನು ಮಾಡಿರಿ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 3)






## ಲೂಕಾಸ್ ರವರ ಪ್ರಯೋಗ (ಪಾಠ 3)

ಎಂ ಮತ್ತು ಎಮ್ಸ್ ತೇಲುವಿಕೆ

ಒಂದು ಆಳವಾದ ಪಾತ್ರೆಯಲ್ಲಿ ನೀರನ್ನು ಹಾಕಿ ಎಂ ಮತ್ತು ಎಮ್ಸ್.ಗಳನ್ನು ಹಾಕಿರಿ. ಎಮ್ಸ್.ಗಳೆಲ್ಲವೂ ಕೆಳಗಡೆಯಿಂದ ಮೇಲಕ್ಕೆ ತೇಲುತ್ತವೆ. ಅವು ಜಲನಿರೋಧಕದೊಂದಿಗೆ ಮಾಡಿದ ಕ್ಯಾಂಡಿ ಮೇಲೆ ಮುದ್ರಿತವಾದವುಗಳು, ಆದರೆ ಕ್ಯಾಂಡಿಗೆ ಹಾಕಿದ ಕೋಟಿಂಗ್ ಮಾತ್ರ ಜಲನಿರೋಧಕವಲ್ಲ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 4 ]--

## ಸೂಚನೆಗಳು! (ಕ್ಲೂಸ್) (ಪಾಠ 4)

### 1 ಸೂಚನೆ #1 ಅಂಶ (ಪಾಠ 4)

ಅತಿಯಾದ ಖರ್ಚು ಮಾಡುವ ವ್ಯಕ್ತಿಯ ಕೇಸ್

### 2 ಸೂಚನೆ #2 ನಾಟಕ (ಪಾಠ 4)

ಖಾಸಗಿ ಪರಿಶೋಧಕರು : ಹಲೋ ಹಂದಿ ರೈತನೇ. ನೀವು ಕರೆದಿದ್ದೀರಿ, ನಾನು ಬಂದಿದ್ದೇನೆ, ನನ್ನ ಕಾರ್ಡ್ ಮೇಲೆ ಈ ರೀತಿ ಬರೆಯಲ್ಪಟ್ಟಿರುತ್ತದೆ. ನಾನು ಯಾವರೀತಿ ನಿಮಗೆ ಸೇವೆ ಮಾಡಬಲ್ಲೆ?

ಹಂದಿ ರೈತ : ನನ್ನ ಆಳು ಕಾಣೆಯಾಗಿದ್ದಾನೆ, ಮತ್ತು ಅವನು ಕಾಣಿಸದೆ ಹೋದದ್ದೇ ನನಗೆ ತುಂಬಾ ಅಚ್ಚರಿಯಾಗಿದೆ.

ಖಾಸಗಿ ಪರಿಶೋಧಕರು : ಅವನು ಕಾಣೆಯಾಗದೆ ಇರುವದಕ್ಕೆ ಮುಂಚಿತವಾಗಿ ಅವನು ಹೇಗೆ ಕಾಣಿಸಿಕೊಂಡಿದ್ದನು?

ಹಂದಿ ರೈತ : ಮುನ ಮುರಿದವನಾಗಿ ಮತ್ತು ಹಸಿವೆಯಿಂದ ನರಳುತ್ತಿರುವವನಾಗಿ ಕಾಣಿಸಿಕೊಂಡಿದ್ದನು.

ಖಾಸಗಿ ಪರಿಶೋಧಕರು : ಅವರು ನಿಮಗಾಗಿ ಏನು ಮಾಡುತ್ತಿದ್ದರು?

ಹಂದಿ ರೈತ : ಅವನು ಹಂದಿಗಳನ್ನು ಮೇಯಿಸುತ್ತಿದ್ದನು.

ಖಾಸಗಿ ಪರಿಶೋಧಕರು : ಅವನು ನಿಮ್ಮ ಹಂದಿಗಳನ್ನು ಮೇಯಿಸುತ್ತಿದ್ದನಾ?

ಹಂದಿ ರೈತ : ಹೌದು, ಅವನು ಹಿಂದಕ್ಕೆ ಬರಬೇಕೆಂದು ಬಯಸುತ್ತಿದ್ದೇನೆ, ಅವನು ತುಂಬಾ ಒಳ್ಳೇಯ ಕೆಲಸಗಾರ. ಅವನು ಬೇರೆ ಕೆಲಸಗಾರರ ಹಾಗೆ ಹಂದಿಗಳ ಆಹಾರವನ್ನು ಕದಿಯುತ್ತಿದ್ದಿಲ್ಲ.

ಖಾಸಗಿ ಪರಿಶೋಧಕರು : ನೀವು ತುಂಬಾ ಜಿಪುಣರಂತೆ ಕಾಣಿಸುತ್ತಿದೆ. ಸರಿ, ನೋಡಿ ನಾನು ಇನ್ನೊಂದು ಪರಿಶೋಧನೆಯನ್ನು ಮಾಡುತ್ತಿದ್ದೇನೆ, ಆದರೆ ನಿಮ್ಮ ಆಳನ್ನು ಕಂಡುಹಿಡಿಯಲು ನನಗೆ ಅಷ್ಟೊಂದು ಸಮಯವಿಲ್ಲ.

ಹಂದಿ ರೈತ : ನಿಮ್ಮ ಬೇರೊಂದು ಪರಿಶೋಧನೆ ಏನಾಗಿತ್ತೋ ತಿಳಿದುಕೊಳ್ಳಬಹುದೇ?

ಖಾಸಗಿ ಪರಿಶೋಧಕರು : ಒಬ್ಬ ಶ್ರೀಮಂತ ಹುಡುಗ ಹಣವಿರುವ ದೊಡ್ಡ ದೊಡ್ಡ ಚೀಲಗಳಿಂದ ಮನೆ ಬಿಟ್ಟು ಪಟ್ಟಣದೊಳಗೆ ಬಂದಿದ್ದಾನೆ, ಆದರೆ ಇದು ನಡೆದು ಹೆಚ್ಚು ದಿನಗಳಾಗಳಿಲ್ಲ.

ಹಂದಿ ರೈತ : ಅವರು ಶ್ರೀಮಂತರಾಗಿದ್ದರೋ?

ಖಾಸಗಿ ಪರಿಶೋಧಕರು : ಹೌದು, ಅವರು ಇಲ್ಲಿದ್ದಾಗ ಶ್ರೀಮಂತರೇ. ಆದರೆ ಅವನು ಇಲ್ಲಿದ್ದಾನೋ ಇಲ್ಲವೋ ಎಂದು ನನಗೆ ಖಂಡಿತವಾಗಿ ಗೊತ್ತಿಲ್ಲ. ಅವನು ದೊಡ್ಡ ದೊಡ್ಡವರನ್ನು ಮೋಸ ಮಾಡಿರಬಹುದು.

ಹಂದಿ ರೈತ : ಸರಿ, ನಾನು ಒಂದು ಕಣ್ಣು ಇವನ ಮೇಲೆ ಹಾಕಿರುತ್ತೇನೆ, ಒಂದುವೇಳೆ ನಾನು ನೋಡಿದರೆ ನಿಮಗೆ ತಿಳಿಸುತ್ತೇನೆ.

ಖಾಸಗಿ ಪರಿಶೋಧಕರು : ಈ ಹಂದಿ ಮೇಯಿಸುವ ಸ್ಥಳದಲ್ಲಿ, ನೀವು ಈ ಶ್ರೀಮಂತ ವಾರಸುದಾರನ ಮೇಲೆ ನಿನ್ನ ಕಣ್ಣನ್ನು ಹಾಕುತ್ತೀಯ?

ಇದಪ್ಪಾ ತಮಾಷೆ! ಇವನು ಯಾಕೆ ನಿನ್ನ ಹಂದಿಗಳ ಸ್ಥಾನಕ್ಕೆ ಬರಬೇಕು?

ಹಂದಿ ರೈತ : ಅದು ನನಗೆ ಗೊತ್ತಿಲ್ಲ. ನೀವು ನನ್ನ ಹಂದಿಗಳನ್ನು ಮೇಯಿಸುವ ಆಳನ್ನು ಕಂಡುಹಿಡಿಯುತ್ತೀರೋ ಇಲ್ಲವೋ?

ಖಾಸಗಿ ಪರಿಶೋಧಕರು : ನಾನು ನಿಮಗೆ ಹೇಳುತ್ತೇನೆ, ನನ್ನನ್ನು ಕಣ್ಣನ್ನು ಕೂಡ ಅವನ ಮೇಲೆ ಹಾಕಿರುತ್ತೇನೆ ಮತ್ತು ಅವನನ್ನು ಕಂಡುಕೊಂಡರೆ ನಾನು ನಿಮಗೆ ಹೇಳುತ್ತೇನೆ. ಇದು ಹೇಗಿತ್ತಂದರೆ ಅವನು ಇನ್ನೊಂದು ಕೆಲಸವನ್ನು ಪಡೆದುಕೊಂಡಂತೆ ಇದ್ದಿತ್ತು.


## 3 ಸೂಚನೆ #3 ವಸ್ತು (ಪಾಠ 4)

ತರಗತಿಗೆ ತೆಗೆದುಕೊಂಡು ಬನ್ನಿರಿ : ನಿಮ್ಮ ತುಂಬಿದ ಪರ್ಸ್ ಅಥವಾ ನಾಣ್ಯಗಳಿಂದ ತುಂಬಿದ ಪರ್ಸ್




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 4)

ಹಂದಿಗಳನ್ನು ಮೇಯಿಸುವುದೆಂದರೆ ಅನೇಕಸಲ ಇದು ತುಂಬಾ ಕೀಳಾದ ಉದ್ಯೋಗವಾಗಿ ಎಣಿಸಲ್ಪಡುತ್ತದೆ, ಕೆಲವೊಂದು ಈ ಕೆಲಸವನ್ನು ಮಕ್ಕಳಿಗೆ ಕೊಡುತ್ತಾರೆ. ಈ ಮಗುವು ಮನೆಗಳ ಎಲ್ಲಾ ಅಡುಗೆ ಕಸವನ್ನು ತೆಗೆದುಕೊಂಡು ಬಂದು ದಿಬ್ಬೆಗಳಿಗೆ ಹಾಕುತ್ತಾರೆ.



## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 4)

ರಹಸ್ಯ: ಬೇಲಿ ಹಾಕಿದ ಸ್ಥಳದೊಳಗದೆ ಆಹಾರವನ್ನಿಟ್ಟಿರುವ ತೊಟ್ಟಿಯ ಬಳಿ ಹಂದಿ ಇರುತ್ತದೆ.

ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 4)



## ಬೈಬಲ್ ಕಥೆ (ಪಾಠ 4)

**ತಪ್ಪಿ ಹೋದ ಮಗ**

**ಬೈಬಲ್ ವಾಕ್ಯಭಾಗ : ಲೂಕ.15:11-32**

ಇಬ್ಬರು ಮಕ್ಕಳಿರುವ ಒಬ್ಬ ವ್ಯಕ್ತಿಯ ಕುರಿತಾಗಿ ಯೇಸು ಕ್ರಿಸ್ತರವರು ಒಂದು ಕಥೆಯನ್ನು ಹೇಳಿದರು. ಒಂದು ದಿನ

ಆ ಇಬ್ಬರು ಮಕ್ಕಳಲ್ಲಿ ಚಿಕ್ಕವನು ತನ್ನ ತಂದೆಯ ಬಳಿಗೆ ಹೋಗಿ, ನನಗೆ ಬರುವ ನನ್ನ ಆಸ್ತಿಯನ್ನು ನನಗೆ ಕೊಡು ಎಂದು ಕೇಳಿದನು. ಅವನ ತಂದೆಯು ಅದನ್ನು ಅವನಿಗೆ ಕೊಟ್ಟನು ಮತ್ತು ಆ ಚಿಕ್ಕವನು ಬೇರೊಂದು ಪಟ್ಟಣಕ್ಕೆ ಹೋಗಿ, ತನಗೆ ಇಷ್ಟಕ್ಕೆ ಬಂದಂತೆ ಆ ಆಸ್ತಿಯನ್ನು ಖರ್ಚು ಮಾಡಿದನು, ಅದರಲ್ಲಿ ಅನೈತಿಕ ವಿಷಯಗಳು ಒಳಗೊಂಡಿದ್ದವು. ತನ್ನ ಬಳಿ ಇರುವ ಆಸ್ತಿಯನ್ನೆಲ್ಲಾ ಖರ್ಚು ಮಾಡಿದನಂತರ, ಅವನಿಗೆ ತಿನ್ನುವುದಕ್ಕೆ ಅನ್ನವಿದ್ದಿರಲಿಲ್ಲ, ಆಗ ಅವನಿಗೆ ಒಂದು ಕೆಲಸ ಬೇಕಾಗಿದ್ದಿತ್ತು. ಕೊನೆಗೆ, ಆ ಊರಲ್ಲಿ ಒಬ್ಬನು ತನ್ನ ಹಂದಿಗಳನ್ನು ಮೇಯಿಸುವ ಉದ್ಯೋಗವನ್ನು ಅವನಿಗೆ ಕೊಟ್ಟನು. ಆ ಮನುಷ್ಯನು ಆ ಉದ್ಯೋಗವನ್ನು ಅಸಹ್ಯಿಸಿಕೊಂಡನು. ಹಂದಿಗಳು ತುಂಬಾ ಹೊಲಸಾದ ಪ್ರಾಣಿಗಳು. ಒಬ್ಬ ಯಹೂದಿಯನಾಗಿ ಅವನು ಆ ಹಂದಿಗಳ ಸುತ್ತಮುತ್ತ ಇರಬಾರದು. ಆದರೆ ಅವನಿಗೆ ತುಂಬಾ ಹಸಿವಿನಿಂದ ಇದ್ದಿದ್ದನ್ನು, ಆದರೆ ಅವನಿಗೆ ಯಾರೂ ಊಟ ಕೊಡುವುದಕ್ಕೆ ಮುಂದಕ್ಕೆ ಬಂದಿಲ್ಲ. ಅವನು ಹಂದಿ ತಿನ್ನುವ ಆಹಾರವನ್ನು ತಿನ್ನಬೇಕಾದ ಪರಿಸ್ಥಿತಿಗೆ ಬಂದಿದ್ದನು. ಅವನು ಹಿಂದಿರುಗಿ ತನ್ನ ತಂದೆಯ ಬಳಿಗೆ ಹೋಗಲೇ ಬೇಕೆಂದು ಅಥವಾ ಹಸಿವಿನಿಂದ ಇಲ್ಲಿ ಸಾಯುತ್ತೇನೆಂದು ತನಗೆ ಗೊತ್ತಿತ್ತು. ಆದ್ದರಿಂದ, ಅವನು ತನ್ನ ಮನೆಗೆ ಹೊರಟನು. ಎಷ್ಟೋ ವರ್ಷಗಳಾದನಂತರ ತನ್ನ ತಂದೆಯು ಅವನನ್ನು ನೋಡಿ, ತನ್ನ ಆಳುಗಳಿಗೆ ಕೊಬ್ಬಿಸಿದ ಒಂದು ಕರುವನ್ನು ತಂದು ಕೊಯ್ಯಿರಿ; ಹಬ್ಬ ಮಾಡೋಣ, ಉಲ್ಲಾಸ ಪಡೋಣ, ನನ್ನ ಮಗನು ತಿರುಗಿ ಬಂದನು ಎಂದು ಹೇಳಿದನು. ಆ ಯೌವನಸ್ಥನು ತುಂಬಾ ಹತ್ತಿರಕ್ಕೆ ಬಂದಾಗ, ತನ್ನ ತಂದೆಯನ್ನು ಅಪ್ಪಿಕೊಂಡು, ತಂದೆಯೇ ನನ್ನನ್ನು ಕ್ಷಮಿಸು ಎಂದು ಅತ್ತನು. ಅವನು ತಪ್ಪು ಮಾಡಿದ್ದಾನೆಂದು ಅವನಿಗೆ ಚೆನ್ನಾಗಿ ಗೊತ್ತು. ಇದಾದನಂತರ ಶ್ರೇಷ್ಠವಾದ ನಿಲುವಂಗಿಯನ್ನು ಮತ್ತು ಕೈಗೆ ತೊಡಗಲು ಉಂಗುರವನ್ನು ತೆಗೆದುಕೊಂಡು ಬರುವುದಕ್ಕೆ ಹೇಳಿದನು.

ಈಗ ತಪ್ಪಿಹೋದ ಮಗನು ಮನೆಯಲ್ಲಿದ್ದಾನೆ ಮತ್ತು ಅವರು ತಪ್ಪದೆ ಹಬ್ಬ ಮಾಡಿಕೊಳ್ಳಬೇಕು ಯಾಕಂದರೆ ಅವನು ಸತ್ತಿರುತ್ತಾನೆಂದು ಎಲ್ಲರು ತಿಳಿದುಕೊಂಡಿದ್ದರು, ಆದರೆ ಅವನು ಹಿಂದಿರುಗಿ ಬಂದಿದ್ದಾನೆ ಮತ್ತು ಈಗ ಜೀವಂತವಾಗಿದ್ದಾನೆ. ಅವನು ಕಾಣೆಯಾಗಿದ್ದನು, ಈಗ ತಿರುಗಿ ಬಂದಿದ್ದಾನೆ.

## ಅನ್ವಯ (ಪಾಠ 4)

ನಾನು ಯಾವಾಗಲೂ ತಂದೆಯ ಬಳಿಗೆ ಬರುವುದಕ್ಕೆ ಸ್ವಾಗತಿಸಲ್ಪಟ್ಟಿರುತ್ತೇನೆ.

## ಕಂಠಪಾಠ ವಾಕ್ಯ (ಪಾಠ 4)

"...ಇವನು ಪಾಪಿಗಳನ್ನು ಸೇರಿಸಿಕೊಂಡು ಅವರ ಜೊತೆಯಲ್ಲಿ ಊಟ ಮಾಡುತ್ತಾನೆ ಎಂದು ಹೇಳಿಕೊಂಡು ಗುಣುಗುಟ್ಟುತ್ತಿದ್ದರು." - ಲೂಕ.15:2ಬಿ

## ಮನೆಗೆಲಸ (ಪಾಠ 4)

ಕೆಲವೊಮ್ಮೆ ಸಭೆಗೆ ಬಂದಿರುವ ವಿದ್ಯಾರ್ಥಿಗಳಿದ್ದಾರೆ, ಬಹುಶಃ ತುಂಬಾ ಕಾಲವಾದನಂತರ ಬಂದಿರುವವರು. ಅಂಥವರು ಯಾರೂ ಇಲ್ಲದಿದ್ದರೆ ವಿದ್ಯಾರ್ಥಿಗಳಿಗೋಸ್ಕರ ಕೆಲವು ಸಲಹೆಗಳಿಗಾಗಿ ನಿಮ್ಮ ಬೈಬಲ್ ಉಪಾದ್ಯಾಯರನ್ನು ಕೇಳಿರಿ. ಅಂಥವರನ್ನು ಮತ್ತೊಮ್ಮೆ ಸಭೆಗೆ ಆಹ್ವಾನಿಸಿರಿ ಮತ್ತು ಅವರು ಸಭೆಗೆ ಹಿಂದಿರುಗಿ ಬರುವಂತೆ ನೋಡಿಕೊಳ್ಳಿರಿ.

ದೇವರ ಡಿ.ಎನ್.ಎ.

## ದೇವರ ಡಿ.ಎನ್.ಎ (ಪಾಠ 4)

ದೇವರ ಬಳಿಗೆ ತಪ್ಪಿಹೋದ ತನ್ನ ಮಕ್ಕಳು ಹಿಂದಿರುಗಿ ಬಂದರೆ ಆತನು ಸಂತೋಷವಾಗಿ ದೊಡ್ಡ ಹಬ್ಬವನ್ನೇ ಮಾಡುತ್ತಾರೆ.



# ವಿನೋದ ಸಮಯ! (ಪಾಠ 4)

## ಆಟ (ಪಾಠ 4)

ಪಾಸ್ ವರ್ಡ್

"ಪಾಸ್ ವರ್ಡ್ ಕಂಡು ಹಿಡಿಯುವುದಕ್ಕೆ" ಆಟದ ಸ್ಪರ್ದಿಗಳಾಗಿರುವುದಕ್ಕೆ ತರಗತಿಯ ಮುಂದಕ್ಕೆ ಬರಲು ಆಸಕ್ತಿ ಇರುವ ಇಬ್ಬರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿರಿ. ಅವರು ಹಿಂದಿರುಗಿ ನಿಂತುಕೊಂಡಿರುತ್ತಾರೆ, ಉಪಾಧ್ಯಾಯರು ಉಳಿದ ತರಗತಿ ಮಕ್ಕಳಿಗೆ ಒಂದು ಕಾರ್ಡಿನ ಮೇಲೆ ಬರೆದಿರುವ ಒಂದು  ಪಾಸ್ ವರ್ಡ್ ತೋರಿಸುತ್ತಾರೆ.  ಆಗ ಆ ಇಬ್ಬರು ಸ್ಪರ್ದಿಗಳು ವಿದ್ಯಾರ್ಥಿಗಳ ಕಡೆಗೆ ತಿರುಗಿ, ಪಾಸ್ ವರ್ಡ್ ಕಂಡು ಹಿಡಿಯಲು ಸೂಚನೆಯನ್ನು ಕೊಡುವುದಕ್ಕೆ ಕೈಗಳನ್ನು ಎತ್ತಿರುವ ಮಕ್ಕಳಲ್ಲಿ ಯಾರಾದರೊಬ್ಬರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. (ಆ ಪದವನ್ನು ಹೇಳಬಾರದೆಂದು ಮತ್ತು ಕೇವಲ ಆ ಪದವನ್ನು ಕಂಡುಹಿಡಿಯುವುದಕ್ಕೆ ಒಂದು ಪದದ ಸೂಚನೆಯನ್ನು ಮಾತ್ರ ಕೇಳಬೇಕೆಂದು ಮಕ್ಕಳಿಗೆ ಹೇಳಬೇಕು.) ಪಾಸ್ ವರ್ಡ್ ಆಲೋಚನೆಗಳು : ತಂದೆ, ಹಣ, ಆಸ್ತಿ, ಹಬ್ಬ, ಹಂದಿಗಳು, ಸಹೋದರ, ಕರು, ಇತ್ಯಾದಿ...

## ಚರ್ಚೆ (ಪಾಠ 4)

(ದೊಡ್ಡ ಮಕ್ಕಳಿಗಾಗಿ)

1. ಒಬ್ಬ ನಿಜವಾದ ಸ್ನೇಹಿತನನ್ನು ನಾನು ಹೇಗೆ ಕಂಡುಹಿಡಿಯಬೇಕು? ನಿಮಗೆ ಯಾರಾದರೊಬ್ಬರು ಸ್ನೇಹಿತರಾಗಿ, ಅವರು ಕೇವಲ ಏನೋ ಒಂದು ಪ್ರಯೋಜನಕ್ಕಾಗಿ ಮಾತ್ರವೇ ನಿಮ್ಮೊಂದಿಗೆ ಸ್ನೇಹ ಮಾಡುತ್ತಿದ್ದಾರೆಂದು ನಿಮಗೆ ಎಂದಾದರೂ ಆಲೋಚನೆ ಬಂದಿತ್ತಾ?



   ಚಿಕ್ಕ ಸಹೋದರ ಹತ್ತಿರ ಹಣವೆಲ್ಲಾ ಹೊರಟು ಹೋದಾಗ, ಹಂದಿಗಳನ್ನು ಮೇಯಿಸುವ ಸ್ಥಳದಲ್ಲಿ ಕೆಲಸಕ್ಕೆ ಹೋಗಬೇಕಾಯಿತು, ತನ್ನ ಸ್ನೇಹಿತರನ್ನು ಇಲ್ಲಿ ನಾವು ನೋಡಬಹುದು ಅಥವಾ ಕಂಡುಹಿಡಿಯಬಹುದು. ಜ್ಞಾನೋ.18:24.


2. ನನ್ನ ತಂದೆತಾಯಿಗಳೇ ಚೆನ್ನಾಗಿ ನಡೆದುಕೊಳ್ಳದಿದ್ದರೆ ಏನು ಮಾಡಬೇಕು?


   ನಾನು ನನ್ನ ತಂದೆತಾಯಿಗಳಿಗೆ ವಿಧೇಯನಾಗಿ ಅವರನ್ನು ಗೌರವಿಸಿದಾಗ, ದೇವರು ನನಗೆ ಬಹುಕಾಲ ಜೀವನ ಮಾಡುವುದಕ್ಕೆ ಅವಕಾಶ ಕೊಡುತ್ತಾರೆಂದು ವಾಗ್ದಾನ ಮಾಡಿದ್ದಾರೆ. ದೇವರು 10 ಆಜ್ಞೆಗಳಲ್ಲಿ ನಮ್ಮ ತಂದೆತಾಯಿಗಳನ್ನು ಗೌರವಿಸಬೇಕೆಂದು ಆತನು ನಮಗೆ ಆಜ್ಞಾಪಿಸಿದ್ದಾನೆ (ವಿಮೋಚನೆ ಕಾಂಡ 20). ಆದನಂತರ, ಯೋಹಾನ.12:49ರಲ್ಲಿ ಯೇಸು ಈ ಆಜ್ಞೆಗೆ ವಿಧೇಯತೆಯನ್ನು ತೋರಿಸಿದ್ದನ್ನು ನಾವು ನೋಡುತ್ತೇವೆ.


3. ತಂದೆತಾಯಿಗಳು ಏನಾದರೊಂದು ತಪ್ಪು ಕೆಲಸವನ್ನು ಮಾಡಬೇಕೆಂದು ಕೇಳಿದರೆ, ಅವಾಗ ಏನು ಮಾಡಬೇಕು?

   ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವಾಗ ವಿದ್ರೋಹದಿಂದ ಇರುವವರನ್ನು ನೋಡಿರಿ. ಯಾಕಂದರೆ ತಂದೆತಾಯಿಗಳು ವಿದ್ರೋಹ ಮಾಡಬೇಕೆಂದು ಕಳುಹಿಸಿ ಕೊಡುವುದು ಎಲ್ಲಾ ಪಾಪಗಳಿಗಿಂತಲೂ ವಿದ್ರೋಹ ಮಾಡುವುದು ತುಂಬಾ ದೊಡ್ಡ ಪಾಪ. ಇದು ಪೂರ್ತಿಯಾಗಿ ತಪ್ಪು ಎಂದು ನಾವು ಬೈಬಿಲನ್ನು ಪರಿಶೀಲನೆ ಮಾಡಬೇಕು. ನಾವು ವಿದ್ರೋಹಿಗಳಲ್ಲವೆಂದು ನಾವು ನಮ್ಮ ಹೃದಯಗಳನ್ನು ಪರೀಕ್ಷೆ ಮಾಡಿಕೊಳ್ಳಬೇಕು. ಆದರೆ ಅವರು ನಿಜವಾಗಿ ತಪ್ಪು ಮಾಡುತ್ತಿದ್ದಾರೆ, ನಾವು ತಪ್ಪದೇ ನಮ್ಮ ತಂದೆತಾಯಿಗಳನ್ನು ತಮ್ಮ ಪ್ರಯೋಜನಕ್ಕಾಗಿ ಒಳ್ಳೆಯ ಅಥವಾ ಸರಿಯಾದ ಕಾರ್ಯಗಳನ್ನೇ ಮಾಡಬೇಕೆಂದು ವಿನಂತಿಸಿಕೊಳ್ಳಬೇಕು. ಆದರೆ ಅವರು ಆ ಮಾತುಗಳನ್ನು ಕೇಳದೆ, ನಮ್ಮನ್ನು ತಪ್ಪು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ, ಆಗ ನಾವು ತಪ್ಪದೇ ಮೊಟ್ಟ ಮೊದಲು ದೇವರಿಗೆ ವಿಧೇಯರಾಗಬೇಕು. ಇದನ್ನೇ ಅಪೊಸ್ತಲರು ಅಪೊ.ಕೃತ್ಯ.5:25-29 ವಚನ ಭಾಗದಲ್ಲಿ ನಮಗೆ ಮಾಡಿ ತೋರಿಸಿದ್ದಾರೆ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 4)



## ಲೂಕಾಸ್ ರವರ ಪ್ರಯೋಗ (ಪಾಠ 4)

ಜೆಲ್ಲಿಫಿಷ್

2 ಲೀಟರ್ ಪಾಪ್ ಬಾಟಿಲ್.ನಲ್ಲಿ 1.5 ಲೀಟರ್ ನೀರನ್ನು ಹಾಕಿರಿ. ಚೆನ್ನಾಗಿ ಕಾಣಿಸಿಕೊಳ್ಳುವುದಕ್ಕೆ ನೀರನ್ನು ಪುಡ್ ದೈದೊಂದಿಗೆ ನೀಲಿ ಬಣ್ಣದ ನೀರಾಗಿ ಮಾರ್ಪಡಿಸಿರಿ. 6 ಇಂಚ್ ಚೌಕ ಆಕಾರದಲ್ಲಿ ಬರುವಂತೆ ಪ್ಲಾಸ್ಟಿಕ್ ಚೀಲವನ್ನು ಜೆಲ್ಲಿಫಿಷ್ ಆಕಾರದಲ್ಲಿ ಕತ್ತರಿಸಿ ತಯಾರು ಮಾಡಿರಿ. ಪ್ಲಾಸ್ಟಿಕ್ ಚೌಕದಿಂದ ತಯಾರು ಮಾಡಿರುವ ಜೆಲ್ಲಿಫಿಷ್ ತಲೆಗೆ ಕಟ್ಟುವುದಕ್ಕೆ ಒಂದು ತಂತಿಯನ್ನಾಗಲಿ ಅಥವಾ ರಬ್ಬರ್ ಆಗಲಿ ಉಪಯೋಗಿಸಿರಿ. ಉಳಿದ ಪ್ಲಾಸ್ಟಿಕ್ ಚೌಕವನ್ನು ಜೆಲ್ಲಿಫಿಷ್ ನಿಂದ ಇಳಿಯಾಕಲ್ಪಟ್ಟ ತಂತಿಗಳಿಗೆ ಸೇರುವುದಕ್ಕೆ ಪಟ್ಟಿಗಳಾಗಿ ಕತ್ತರಿಸಿ. ಇದಾದನಂತರ ಜೆಲ್ಲಿಫಿಷ್.ನ್ನು ಬಾಟಿಲ್.ನೊಳಗಡೆ ಕಳುಹಿಸಿ, ಚೆನ್ನಾಗಿ ಮುಚ್ಚಳ ಇಡಿರಿ. ಆ ಜೆಲ್ಲಿಫಿಷ್ ಈಜುತ್ತಿರುವಂತೆ ಮಾಡಲು ಆ ಬಾಟಿಲ್ ಅನ್ನು ಚೆನ್ನಾಗಿ ಮೆಲ್ಲಕೆ ಅಲುಗಾಡಿಸಿ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 5 ]--

## ಸೂಚನೆಗಳು! (ಕ್ಲೂಸ್) (ಪಾಠ 5)

### 1 ಸೂಚನೆ #1 ಅಂಶ (ಪಾಠ 5)

ಹೊಲಗದ್ದೆಗಳಲ್ಲಿ ಒಬ್ಬ ವಿದೇಶಿಯನ ಕಥೆ

### 2 ಸೂಚನೆ #2 ನಾಟಕ (ಪಾಠ 5)

ಕೇಸ್ ನೋಡುವಾತನು : ಹಲೋ, ನಿನ್ನ ನೆರೆಯವನಿಗಾಗಿ ನಾನು ನೋಡುತ್ತಿದ್ದೇನೆ. ಎಲ್ಲಾದರೂ ಇದ್ದಾನೋ?

ನೆರೆಯವನು : ಒಂದು ವಾರದಿಂದ ನಾನು ನೋಡಲೇ ಇಲ್ಲ.

ಕೇಸ್ ನೋಡುವಾತನು : ಹೌದಾ, ಧನ್ಯವಾದಗಳು. ನೀವು ಒಂದುವೇಳೆ ಆಕೆಯನ್ನು ನೋಡಿದರೆ, ದಯೆವಿಟ್ಟು ಆಕೆಗೆ ಏನಾದರೂ ಪ್ರಯೋಜನಗಳನ್ನು ಹೊಂದಿಕೊಳ್ಳಬೇಕೆಂದು ಇಷ್ಟವಿದ್ದರೆ, ಆಕೆ ನನ್ನನ್ನು ಭೇಟಿಯಾಗಬೇಕಾದ ಅವಶ್ಯಕತೆಯಿದೆಯೆಂದು ನೀವು ಆಕೆಗೆ ಹೇಳಿರಿ.

ನೆರೆಯವನು : ಅದನ್ನೀಗ ನಾನು ಆಲೋಚನೆ ಮಾಡಬೇಕು , ನಿಮ್ಮ ಯಾವುದೇ ಸೇವೆಗಳು ಆಕೆಗೆ ಬೇಕಾಗಿಲ್ಲವೆಂದು ನನಗೆ ಅನಿಸುತ್ತಿದೆ.

ಕೇಸ್ ನೋಡುವಾತನು : ಯಾಕೆ?

ನೆರೆಯವನು : ಸರಿ, ಕಳೆದ ದಿನಗಳಲ್ಲಿ ನಾನು ಆಕೆಯನ್ನು ನೋಡಿದಾಗ, ಆಕೆ ಚೆನ್ನಾಗಿ ಕಾಣಿಸಿಕೊಂಡಿದ್ದಳು ಮತ್ತು ಆಕೆಯ ಜೊತೆಯಲ್ಲಿ ಇಬ್ಬರು ಸೊಸೆಯಂದಿಯರು ಇದ್ದರು. ಆದರೆ ವಿಚಿತ್ರವಾದ ವಿಷಯ ಏನೆಂದರೆ, ಆಕೆ ಅಳುತ್ತಾ ಪಟ್ಟಣದ ಆಚೆಗೆ ಹೋಗಿ, ಗುಡ್ ಬೈ ಹೇಳುತ್ತಿದ್ದಳು.

ಕೇಸ್ ನೋಡುವಾತನು : ಸಹಜವಾಗಿ ಅದು ನಡೆಯುತ್ತದಲ್ಲವೋ?

ನೆರೆಯವನು : ಇಲ್ಲ, ವಾಸ್ತವಿಕವಾಗಿ ಹೇಳಬೇಕೆಂದರೆ, ಆಕೆ ತನ್ನ ಮನೆಯ ಬಾಗಿಲನ್ನು ಹಾಕುವುದಕ್ಕೆ ಕೂಡ ಆಲೋಚನೆ ಮಾಡಲಿಲ್ಲ.

ಕೇಸ್ ನೋಡುವಾತನು : ಅದೇ ನನಗೆ ವಿಚಿತ್ರವಾಗಿ ಕಾಣಿಸಿಕೊಂಡಿತು. ಆಕೆಯ ಮನೆಯ ಬಾಗಿಲು ಇನ್ನೂ ತೆರೆದಂತೆ ನಾನು ನೋಡಿದ್ದೇನೆ. ಆಕೆ ಇಲ್ಲೇ ಎಲ್ಲಿಗೋ ಹೋಗಿ ಬರುತ್ತಾಳೆಂದು ಆಲೋಚನೆ ಮಾಡಿದ್ದೆ. ಆದರೆ ಆಕೆ ಎಲ್ಲಿಗೆ ಹೋಗಿದ್ದಾಳೋ ಗೊತ್ತಾಗಲಿಲ್ಲ?

ನೆರೆಯವನು : ಆಕೆ ಇಶ್ರಾಯೇಲ್.ಗೆ ಹಿಂದಿರುಗಿ ಹೋಗಿರಬಹುದು.

ಕೇಸ್ ನೋಡುವಾತನು : ಸರಿ, ಆಕೆ ಇಶ್ರಾಯೇಲ್.ನಲ್ಲಿ ತನ್ನ ಸಮಯವನ್ನು ಶೇಕಡಾ 50ಕ್ಕಿಂತ ಹೆಚ್ಚಾಗಿ ಜೀವಿಸುವುದಾದರೆ, ಆಕೆ ಮೊವಾಬ್ ದೇಶದಿಂದ ಯಾವುದೇ ಸಾಮಾಜಿಕ ಸೇವೆಗಳನ್ನು ಪಡೆದುಕೊಳ್ಳುವುದಕ್ಕಾಗುವುದಿಲ್ಲ.

ನೆರೆಯವನು : ಸೇವೆಗಳಿಗಾಗಿ ಆಕೆ ಏನಾದರೂ ಅರ್ಜಿ ಸಲ್ಲಿಸಿದ್ದಾಳೋ?

ಕೇಸ್ ನೋಡುವಾತನು : ಆ.. ಇಲ್ಲ. ನಾನು ಸಾಮಾಜಿಕ ಸಂರಕ್ಷಣೆ ಇದೆಯೋ ಇಲ್ಲವೋ ಎಂದು ಪರೀಕ್ಷಕರಾಗಿ ನೋಡುವುದಕ್ಕೆ ಬಂದಿದ್ದೇನೆ, ಯಾಕಂದರೆ ಆಕೆ ತನ್ನಷ್ಟಕ್ಕೆ ತಾನೇ ತನ್ನನ್ನು "ಕಹಿ" ಎಂದು ಕರೆದುಕೊಳ್ಳುವುದಕ್ಕೆ ಆರಂಭ ಮಾಡಿದ್ದಳಂತೆ.

ನೆರೆಯವನು : ಸರಿ ಪ್ರಾಮಾಣಿಕವಾಗಿ, ಕಳೆದ ವಾರದಿಂದ ಆಕೆಯನ್ನಾಗಲಿ ಅಥವಾ ಆಕೆಯ ಇಬ್ಬರ ಸೊಸೆಗಳನ್ನಾಗಲಿ ನಾನು ನೋಡಲೇ ಇಲ್ಲ.

ಕೇಸ್ ನೋಡುವಾತನು : ಇನ್ನೊಬ್ಬಳ ಕುರಿತಾದ ವಿಷಯವೇನು? ಬಹುಶಃ ಆಕೆ ನನಗೆ ಸಹಾಯ ಮಾಡಬಹುದು.

ನೆರೆಯವನು : ಒರ್ಫಾ ಎಂದು ಆಕೆ ಹೆಸರು, ಆಕೆ ತನ್ನ ತಂದೆತಾಯಿಗಳ ಮನೆಗೆ ಹೋಗಿರಬೇಕು.

ಕೇಸ್ ನೋಡುವಾತನು : ಹೇಗೆ ಹೋಗಬೇಕೆಂದು ನನಗೆ ಹೇಳುತ್ತೀರಾ?

ನೆರೆಯವನು : ಖಂಡಿತ, ಹೀಗೆ ಕೆಳಗೆ ಹೋಗಿ... ಮುಂದಕ್ಕೆ ಬಲಬದಿಗೆ ಹೋಗಿರಿ ಮತ್ತು ಅದೇ ದಾರಿಯಲಿ ಹೋಗುತ್ತಾ ಇದ್ದರೆ ನೀವು ಮನೆಯನ್ನು ಕಂಡುಕೊಳ್ಳುವಿರಿ.

ಕೇಸ್ ನೋಡುವಾತನು : ಅವರ ಹೆಸರು ಒರ್ಫಾ ಎಂದು ಹೇಳಿದರಲ್ಲಾ? ನಿಮ್ಮ ಸಮಯಕ್ಕಾಗಿ ವಂದನೆಗಳು.

## 3 ಸೂಚನೆ #3 ವಸ್ತು (ಪಾಠ 5)


ತರಗತಿಗೆ ತೆಗೆದುಕೊಂಡು ಬನ್ನಿರಿ: ಶೂಗಳು, ವಾಕಿಂಗ್ ಸ್ಟಿಕ್, ಅಥವಾ ಖಾಲಿ ಸುತ್ತು ಕಾಗದಗಳು

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 5)




ಇದು ಉತ್ತರ ಮೋವಾಬಿನಿಂದ ಇಶ್ರಾಯೇಲ್ ಮತ್ತು ಬೆತ್ಲೆಹೆಮ್ ಊರುಗಳಿಗೆ ಹೋಗುವ ಮಾರ್ಗವಾಗಿರುತ್ತದೆ. ಬಹುಶಃ ಇದೇ ದಾರಿಯಲ್ಲಿ ಒರ್ಫಾ ಹಿಂದುರಿಗೆ, ರೂತಳು ತನ್ನ ಅತ್ತೆಯೊಂದಿಗೆ ಹೋಗಿರಬಹುದು.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 5)




ರಹಸ್ಯ : ಕಲ್ಲುಗಳ ಭೂ ಪ್ರದೇಶದ ಮಧ್ಯೆ ಒಂದು ರಸ್ತೆ. ಆ ರಸ್ತೆಯ ಮೇಲೆ ಮೋವಾಬ್ ಇಂದ ಯೆರೂಷಲೇಮಿಗೆ ಹೋಗುವ ಮಾರ್ಗ ಎಂದು ತೋರಿಸುವ ಒಂದು ರಸ್ತೆಯ ಚಿಹ್ನೆಯ ಫಲಕ.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 5)

## ಬೈಬಲ್ ಕಥೆ (ಪಾಠ 5)

**ರೂತಳು ಮತ್ತು ನೊವೊಮಿ**

**ಬೈಬಲ್ ವಾಕ್ಯಭಾಗದಿಂದ : ರೂತಳು 1-3**



ನೊವೊಮಿ ಮತ್ತು ತನ್ನ ಗಂಡ ಎಲಿಮೇಲಕ ಅವರ ಇಬ್ಬರ ಗಂಡು ಮಕ್ಕಳು ಬರಗಾಲವನ್ನು ತಪ್ಪಿಸಿಕೊಳ್ಳುವುದಕ್ಕೆ ಬೆತ್ಲೆಹೆಮ್ ಊರಿನಿಂದ ಮೋವಾಬ್ ದೇಶಕ್ಕೆ ಹೊರಟು ಹೋದರು. ಸ್ವಲ್ಪ ಕಾಲವಾದನಂತರ ಎಲಿಮೇಲಕ ಸತ್ತನು. ಆಗ ನೊವೊಮಿ ಮತ್ತು ತನ್ನ ಇಬ್ಬರು ಮಕ್ಕಳು ಮಾತ್ರವೇ ತನ್ನ ಕುಟುಂಬದಲ್ಲಿ ಉಳುಕೊಂಡರು. ಆ ಸ್ಥಳದಲ್ಲೇ ಇಬ್ಬರು ಮಕ್ಕಳು ಮೋವಾಬ್ ಹುಡುಗಿಯರನ್ನು ಮದುವೆ ಮಾಡಿಕೊಂಡರು. ಮದುವೆಯಾದ ಹತ್ತು ವರ್ಷಗಳಿಗೆ ತನ್ನ ಇಬ್ಬರ ಮಕ್ಕಳು ಕೂಡ ಸತ್ತುಹೋದರು. ಈ ಸಂಘಟನೆಯಿಂದ ನೊವೊಮಿ ಮತ್ತು ತನ್ನ ಇಬ್ಬರು ಸೊಸೆಗಳಾದ ಒರ್ಫಾ ಮತ್ತು ರೂತಳು ಮಾತ್ರ ಆ ಮನೆಯಲ್ಲಿ ಇರುವಂತೆ ಮಾಡಿತು. ದೇವರು ಬೆತ್ಲೆಹೆಮ್ ಊರಲ್ಲಿ ಒಳ್ಳೇಯ ಬೆಳೆಗಳಿಂದ ಆಶೀರ್ವಾದ ಮಾಡುತ್ತಿದ್ದಾರೆಂದು ಕೇಳಿಸಿಕೊಂಡಳು, ಆಗ ತನ್ನ ಸ್ವಂತ ಊರಾಗಿರುವ ಬೆತ್ಲೆಹೆಮ್.ಗೆ ಹೊರಡಬೇಕೆಂದು ನೊವೊಮಿ ನಿರ್ಣಯಿಸಿಕೊಂಡಳು. ಆ ಮೂವರು ಹೆಣ್ಣು ಮಕ್ಕಳು ತಮ್ಮ ಎಲ್ಲಾ ವಸ್ತುಗಳನ್ನು ಕಟ್ಟಿಕೊಂಡು, ಪ್ರಯಾಣಕ್ಕೆ ಸಿದ್ಧರಾದರು. ಅವರು ಮೋವಾಬ್ ಸರಿಹದ್ದುಗೆ ಬಂದಾಗ, ನೊವೊಮಿ ನಿಂತುಕೊಂಡಳು. ಆಗ ಆಕೆ ತನ್ನ ಸೊಸೆಗಳಿಗೆ ನೀವು ಹಿಂದಕ್ಕೆ ಹೋಗಿ ನಿಮ್ಮ ತಂದೆತಾಯಿಗಳ ಹತ್ತಿರಕ್ಕೆ ಹೋಗಿರಿ ಎಂದು ಹೇಳಿದಳು. ಯಾಕಂದರೆ ಆಕೆ ಅವರನ್ನು ನೋಡಿಕೊಳ್ಳುವುದಕ್ಕಿಂತ ಚೆನ್ನಾಗಿ ಅವರ ತಂದೆತಾಯಿಗಳು ನೋಡಿಕೊಳ್ಳುತ್ತಾರಲ್ಲಾ ಎನ್ನುವ ಆಲೋಚನೆ ಆಕೆಯಲ್ಲಿತ್ತು. ಆಕೆ ವಿಧವೆಯಾಗಿದ್ದಳೆಂದು ಆಕೆಗೆ ಚೆನ್ನಾಗಿ ಗೊತ್ತಿತ್ತು. ಅವರನ್ನು ಮದುವೆ ಮಾಡಿಕೊಳ್ಳುವುದಕ್ಕೆ ಅವಳಿಗೆ ಇನ್ನಾರು ಮಕ್ಕಳಿದ್ದಿಲ್ಲ, ಈ ಕಾರಣದಿಂದ ಅವಳೊಂದಿಗೆ ಅವರ ಭವಿಷ್ಯತ್ತು ಅಸ್ಥಿರವಾಗಿದ್ದಿತ್ತು. ಆ ಇಬ್ಬರು ಸೊಸೆಗಳು ಅತ್ತು, ನಾವು ನಿಮ್ಮೊಂದಿಗೆ ಇರುತ್ತೇವೆ ಎಂದು ಹೇಳಿಕೊಂಡರು. ಆಕೆ ಕೊನೆಗೆ ಒರ್ಫಾಳು ಹಿಂದಿರುಗಿ ಮನೆಗೆ ಹೋಗುವುದಕ್ಕೆ ಒಪ್ಪಿಸಿದಳು, ಆದರೆ ರೂತಳು ಮಾತ್ರ ಆಕೆ ನೊವೊಮಿಯೊಂದಿಗೆ ಇರುವುದಕ್ಕೆ ನಿರ್ಣಯಿಸಿಕೊಂಡಳು. ನೊವೊಮಿ ಎಲ್ಲಿಗೆ ಹೋಗುತ್ತಾರೋ, ಅಲ್ಲಿಗೆ ನಾನೂ ಹೋಗುತ್ತೇನೆ, ನೊವೊಮಿ ಜನರೇ ನನ್ನ ಜನರು ಮತ್ತು ನೊವೊಮಿ ದೇವರೇ ನನ್ನ ದೇವರಾಗಿರುತ್ತಾರೆ, ಅಷ್ಟೇಅಲ್ಲದೆ ಎಲ್ಲಿ ನೊವೊಮಿಗೆ ಸಮಾಧಿ ಕಟ್ಟುತ್ತಾರೋ ಅಲ್ಲೇ ಆಕೆಯನ್ನು ಸಮಾಧಿ ಮಾಡಬೇಕೆಂದು ಹೇಳಿದಳು. ಆಕೆ ನೊವೊಮಿನೊಂದಿಗೆ ಇರುವದಕ್ಕೆ ತುಂಬಾ ಆಸಕ್ತಿಯನ್ನು ತೋರಿಸಿದಳು, ಹೇಗೆಂದರೆ ಅವರನ್ನು ಮರಣ ಬಿಟ್ಟು ಬೇರೆ ಇನ್ನಾವುದು ಬೇರ್ಪಡಿಸುವುದಕ್ಕೆ ಆಗುವುದಿಲ್ಲವನ್ನುವಷ್ಟು ಮತ್ತು ದೇವರು ಆಕೆಯೊಂದಿಗೆ ತುಂಬಾ ತೀವ್ರವಾಗಿ ಮಾತನಾಡಿದ್ದಾರನ್ನುವಷ್ಟು ಅವಳು ಹೇಳಿಕೊಂಡಿದ್ದಳು. ರೂತಳು ತನ್ನ ಅತ್ತೆಯೊಂದಿಗೆ ಇದ್ದುಕೊಂಡಳು ಮತ್ತು ದೇವರು ಆಕೆಯನ್ನು ಆಶೀರ್ವಾದ ಮಾಡಿದನು, ಆಕೆಗೆ ಒಬ್ಬ ಉತ್ತಮ ಗಂಡನನ್ನು ಕೊಟ್ಟನು, ಆಕೆಯ ಎಲ್ಲಾ ಅಗತ್ಯತೆಗಳನ್ನು ಪೂರೈಸಿದನು. ಕೊನೆಗೆ ಆಕೆಯ ಹೆಸರನ್ನು ಯೇಸುವಿನ ವಂಶಾವಳಿಯಲ್ಲಿ ಬರೆಯುವಷ್ಟು ಆಶೀರ್ವಾದವನ್ನು ಕೊಟ್ಟನು.

## ಅನ್ವಯ (ಪಾಠ 5)

ದೇವರು ನನ್ನ ಸಂಕಷ್ಟಗಳಿಂದ ಒಳ್ಳೇಯ ಕಾರ್ಯವನ್ನು ಮಾಡುವವನಾಗಿದ್ದಾನೆ.

### ಕಂಠಪಾಠ ವಾಕ್ಯ (ಪಾಠ 5)

"ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ." - ರೋಮಾ.8:28.

### ಮನೆಗೆಲಸ (ಪಾಠ 5)

ನಿಮಗೆ ಗೊತ್ತಿರುವ ಯಾರಾದರೊಬ್ಬರೊಂದಿಗೆ ನಿಮ್ಮ ಸ್ನೇಹವನ್ನು ಆಳವಾಗಿ ಬೆಳೆಸಿಕೊಳ್ಳುವುದಕ್ಕೆ ಖಚಿತಪಡಿಸಿಕೊಳ್ಳಿರಿ. ಸಂಕಷ್ಟಗಳ ಪರಿಸ್ಥಿತಿಗಳಲ್ಲಿ  ಅವರ ಕಡೆಗೆ ನೀವು ನಿಂತುಕೊಳ್ಳಬೇಕೆಂದರೆ, ನೀವು ಅವರಿಗೆ ಸಹಾಯ ಮಾಡಬೇಕಾದ ಅವಶ್ಯಕತೆಯಿದೆ. ಉದಾಹರಣೆಗೆ, ಅವರ ಪರೀಕ್ಷೆಗಳಿಗೆ, ಮಾಡುವ ಕೆಲಸವನ್ನು ಶೀಘ್ರವಾಗಿ ಮುಗಿಸುವುದಕ್ಕೆ ಅಥವಾ ಆಟವನ್ನು ಅಭ್ಯಾಸ ಮಾಡುವುದಕ್ಕೆ (ಬೇಸ್ ಬಾಲ್.ಗಳನ್ನು ಹಿಡಿದುಕೊಳ್ಳುವುದಕ್ಕೆ, ಸಾಕ್ಸರ್ ಬಾಲ್.ಗಳನ್ನು ಮತ್ತು ಬಾಸ್ಕೆಟ್ ಬಾಲ್.ಗಳನ್ನು, ಇನ್ನೂ ಇತ್ಯಾದಿ..) ನೀವು ಸಹಾಯ ಮಾಡಬಹುದು, ಅವರು "ಇಲ್ಲ, ನಾನು ಒಬ್ಬನೇ/ಒಬ್ಬಳೇ ಎಲ್ಲಾ ಮಾಡಿಕೊಳ್ಳುತ್ತೇನೆ" ಎಂದು ಹೇಳಿದಾಗ್ಯೂ ರೂತಳಂತೆ ನೀವು ಅವರ ಕಡೆಗೆ ನಿಂತುಕೊಂಡು, ಅವರ ಒಳ್ಳೇಯ ಅಥವಾ ಉತ್ತಮ ಸ್ನೇಹಿತರಾಗಿ ಅವರಿಗೆ ಸಹಾಯ ಮಾಡಬಹುದು.

### ದೇವರ ಡಿ.ಎನ್.ಎ (ಪಾಠ 5)




ಜನರು ಎಲ್ಲಿಗೆ ಹೋಗಬೇಕೋ ಮತ್ತು ಅವರು ಯಾರನ್ನು ಅನುಸರಿಸಬೇಕೋ ಎಂದು ನಿರ್ಣಯ ಮಾಡಿಕೊಳ್ಳುವುದಕ್ಕೆ ದೇವರೇ ಜನರಿಗೆ ಭಾಗ ಮಾಡಿಕೊಡುತ್ತಾರೆ.



## ವಿನೋದ ಸಮಯ! (ಪಾಠ 5)

### ಆಟ (ಪಾಠ 5)

ನೀವು ಏನನ್ನು ತೆಗೆದುಕೊಂಡು ಬರುತ್ತೀರಿ? (ಕಂಠಪಾಠ ಆಟ)

ವಿದ್ಯಾರ್ಥಿಗಳೆಲ್ಲರು ಒಂದು ವೃತ್ತಾಕಾರದಲ್ಲಿ ನಿಲ್ಲುತ್ತಾರೆ. ಅವರಲ್ಲಿ ಒಬ್ಬರು "ನಾನು ರೂತಳೊಂದಿಗೆ ಹೋಗುತ್ತೇನೆ ಮತ್ತು ನಾನು .....................ತೆಗೆದುಕೊಂಡು ಬರುತ್ತೇನೆ" ಎಂದು ಹೇಳುತ್ತಾನೆ, ಇನ್ನೊಬ್ಬ ವಿದ್ಯಾರ್ಥಿ, (ವಿದ್ಯಾರ್ಥಿಯ ಹೆಸರು ಸಮುವೇಲ) ರೂತಳೊಂದಿಗೆ ಹೋಗುತ್ತಾನೆ ಮತ್ತು ................ತೆಗೆದುಕೊಂಡು ಬರುತ್ತಾನೆ ಎಂದು ಹೇಳುತ್ತಾನೆ, "ಸಮುವೇಲ ರೂತಳೊಂದಿಗೆ ಹೋಗುತ್ತಾನೆ ಮತ್ತು ................ ತೆಗೆದುಕೊಂಡು ಬರುತ್ತಾನೆ ಎಂದು ಮೂರನೇ ವಿದ್ಯಾರ್ಥಿ ಕೂಡ ಅದೇ ರೀತಿ ಹೇಳುತ್ತಾನೆ. ಮಾರಿಯಾ ರೂತಳೊಂದಿಗೆ ಹೋಗುತ್ತಾಳೆ ಮತ್ತು ..................ತೆಗೆದುಕೊಂಡು ಬರುತ್ತಾಳೆ, ಮತ್ತು ನಾನೂ ........................ ತೆಗೆದುಕೊಂಡು ಬರುತ್ತೇನೆ." ಹೀಗೆ ಆಟ ಯಾರಾದರೊಬ್ಬರು ನೆನಪು ಮಾಡಿಕೊಳ್ಳದೇ ಇರುವವರೆಗೆ ಮುಂದೆವರಿಯುತ್ತಾಯಿದೆ, ಆಗ ಅವರು ತಪ್ಪದೇ "ಮೋವಾಬ್.ಗೆ ಹಿಂದಿರುಗಿ ಹೋಗಬೇಕು". ಹಾಗೆ ಆಟದಲ್ಲಿ ಒಬ್ಬರು ಉಳಿಯುವವರೆಗೂ ಮುಂದೆವರಿಯುತ್ತದೆ

### ಚರ್ಚೆ (ಪಾಠ 5)

(ದೊಡ್ಡ ಮಕ್ಕಳಿಗಾಗಿ)

1. ನೀವು ಸಮಸ್ಯೆಗಳಿಂದ ದೂರ ಹೋದಾಗ ನಿಮಗೆ ಏನಾಗುತ್ತದೆ? ಯಾವ ಯಾವ ಪರಿಸ್ಥಿತಿಗಳಲ್ಲಿ ಜನರು ತಮ್ಮ ಸಮಸ್ಯೆಗಳಿಂದ ಓಡಿ ಹೋಗಿದ್ದನು ನೀವು ನೋಡಿದ್ದೀರಾ? ಆಗ ಅವರಿಗೆ ಏನಾಗಿತ್ತು?



ಎಲೀಮೆಲೆಕು ಮತ್ತು ನೊವೊಮಿಯವರು ಮೋವಾಬಿಗೆ ಹೊರಟು ಹೋಗಿದ್ದರು, ಅವರು ಕೆಲವು ಸಮಸ್ಯೆಗಳನ್ನು ತಪ್ಪಿಸಿಕೊಂಡಿದ್ದರು ಆದರೆ ಅವರು ಬೇರೆ ಸಮಸ್ಯೆಗಳೊಳಗೆ ತೆರಳಿದ್ದರು. ಮೋವಾಬಿನ ಗಡಿಯಲ್ಲಿ, ನೊವೊಮಿ ರೂತಳಿಗೆ ಮತ್ತು ಒರ್ಫಾಳಿಗೆ ನನ್ನನ್ನು ಮತ್ತು ನನ್ನ ಸಮಸ್ಯೆಗಳನ್ನು ಬಿಟ್ಟು, ನಿಮ್ಮ ಮನೆಗಳಿಗೆ ಹೋಗಿರಿ ಎಂದು ಹೇಳಿಕೊಂಡಿದ್ದಳು. ಯಾರ್ಯಾರು ತಮ್ಮ ಸಮಸ್ಯೆಗಳನ್ನು  ಎದುರುಗೊಳ್ಳುತ್ತಿದ್ದಾರೋ ಅವರು ತುಂಬಾ ನಂಬಿಗಸ್ಥರಾಗಿದ್ದಾರೆ ಎನ್ನುವುದೇ ಈ ಕಥೆಯ ಆಶೀರ್ವಾದವಾಗಿದ್ದಿತ್ತು. ಅನೇಕಸಲ ಜನರು ತಮ್ಮ ಸಮಸ್ಯೆಗಳಿಂದ ಓಡಿ ಹೋಗುವಾಗ, ಅವರು ಬೇರೊಂದು ದೊಡ್ಡ ಸಮಸ್ಯೆಗಳಲ್ಲಿ ಬೀಳುತ್ತಿದ್ದಾರೆ.

2. ಸ್ತ್ರೀ ಪುರುಷರ ಸಂಬಂಧಗಳ ವಿಷಯಗಳಲ್ಲಿ ದೇವರ ಪ್ರಣಾಳಿಕೆ ಏನು?

ದೇವರು ನಮಗೆ ಗಂಡನನ್ನಾಗಲಿ ಅಥವಾ ಹೆಂಡತಿಯನ್ನಾಗಲಿ ಕೊಡುವವರೆಗೂ ನಾವು ನಂಬಿಗಸ್ತರಾಗಿರಲು ಮತ್ತು ನಿರೀಕ್ಷಿಸಲು ನಮಗಾಗಿ ದೇವರಿಟ್ಟುಕೊಂಡ ಪ್ರಣಾಳಿಕೆಯಾಗಿದೆ. ಆದನಂತರ ನಾವು ನಮ್ಮ ಜೀವಮಾನವೆಲ್ಲ ಆತನಿಗೆ ನಂಬಿಗಸ್ತರಾಗಿರಬೇಕು. ಪವಿತ್ರವಾದ, ಯಾವ ಷರತ್ತುಗಳಿಲ್ಲದ ಪ್ರೀತಿಯಿಂದ ಮೊದಲು ದೇವರು ನಮ್ಮನ್ನು ಪ್ರೀತಿ ಮಾಡಿದ್ದಾರೆ (ಕೀರ್ತನೆ.36:5-9). ಆದನಂತರವೇ ನಾವು ಆತನನ್ನು ಪ್ರೀತಿ ಮಾದಿದ್ದೇವೆ ಮತ್ತು ಆತನಿಗೆ ಭಕ್ತಿ ಮಾಡುತ್ತಿದ್ದೇವೆ. 1 ಯೋಹಾನ.4:19; ಎಫೆಸ.5:1,2. ನಾವು ಮದುವೆ ಮಾಡಿಕೊಂಡಾಗ ಕ್ರಿಸ್ತನು ತನ್ನ ಸಭೆಯನ್ನು ಪ್ರೀತಿಸುತ್ತಿರುವ ಮಾದರಿಯನ್ನು ತೆಗೆದುಕೊಂಡು ನಾವು ನಮ್ಮ ಗಂಡಂದಿಯರನ್ನು/ಹೆಂಡಂದಿಯರನ್ನು ಪ್ರೀತಿ ಮಾಡಬೇಕು ಮತ್ತು ಒಬ್ಬರಿಗೊಬ್ಬರು ಒಳಗಾಗಬೇಕು. ಎಫೆಸ.5:21-23.

3. ಯಾವ ವಿಧಾನದಲ್ಲಿ ನನ್ನ ನಂಬಿಕೆಯು ನನ್ನ ಸ್ನೇಹಿತರಿಗೆ ವ್ಯತ್ಯಾಸವನ್ನು ತೋರಿಸುತ್ತದೆ?

ಈ ಕೆಳಗೆ ಕೊಟ್ಟಿರುವ ವಾಕ್ಯಭಾಗಗಳಲ್ಲಿ ದೇವರು ಸ್ನೇಹಿತರನ್ನು ಮತ್ತು ಕುಟುಂಬ ನಂಬಿಕೆಯನ್ನು ಗೌರವಿಸುತ್ತಾರೆನ್ನುವುದಕ್ಕೆ ಬೇಕಾದ ಆಧಾರವುಂಟು. ಮತ್ತಾಯ.9:2 (ಮಾರ್ಕ.2:5; ಲೂಕ.5:20) ವಾಕ್ಯಭಾಗದಲ್ಲಿ ಕೆಲವರು ಸ್ನೇಹಿತರು ಪಾರ್ಶ್ವವಾಯು ರೋಗದಿಂದ ನರಳುತ್ತಿರುವ ಒಬ್ಬ ಮನುಷ್ಯನನ್ನು ತೆಗೆದುಕೊಂಡು ಬಂದರು. ಯೇಸು ಅವರ ನಂಬಿಕೆಯನ್ನು ನೋಡಿ, ಪಾರ್ಶ್ವ ರೋಗಿಯನ್ನು ಕ್ಷಮಿಸಿ, ಆತನು ಅವನನ್ನು ಗುಣಪಡಿಸಿದನು. ರೂತಳು ನೊವೊಮಿ ದೇವರಲ್ಲಿ ನಂಬಿಕೆ ಇಟ್ಟಳು (ರೂತಳು.1:16). ಅದೇ ಸಮಯದಲ್ಲಿ ಶಿಷ್ಯರುಗಳಲ್ಲಿ ಒಬ್ಬನು ಯೇಸುವನ್ನು ಬಿಟ್ಟು ಹೋಗುತ್ತಾನೆ, ಯೂದನು ಯೇಸುವಿನ ನಂಬಿಕೆ ಅಥವಾ ಪರಿಪೂರ್ಣತೆಯ ಕಾರಣದಿಂದ ರಕ್ಷಣೆ ಹೊಂದಲಿಲ್ಲ .ನಮ್ಮ ಸ್ನೇಹಿತರ ಮಧ್ಯೆದಲ್ಲಿ ದೇವರ ಪ್ರತಿನಿಧಿಯಾಗಿರಬೇಕೋ ಇಲ್ಲವೋ ಎನ್ನುವುದು ನಮಗೆ ಬಿಟ್ಟಿದ್ದು. ದೇವರ ಬಳಿಗೆ ನಿಮ್ಮ ಸ್ನೇಹಿತರನ್ನು ಕರೆದುಕೊಂಡು ಬರುವುದಕ್ಕೆ ಮತ್ತು ದೇವರನ್ನು ಅವರಿಗೆ ಪರಿಚಯ ಮಾಡಿಕೊಡುವುದಕ್ಕೆ ನಿಮಗೆ ಸಿಗುವ ಪ್ರತಿಯೊಂದು ಅವಕಾಶವನ್ನು ಪಡೆದುಕೊಳ್ಳಿರಿ.

## ವಿದ್ಯಾರ್ಥಿಗಳ ಪುಟಗಳಿಗೆ ಉತ್ತರಗಳು (ಪಾಠ 5)









## ಲೂಕಾಸ್ ರವರ ಪ್ರಯೋಗ (ಪಾಠ 5)

ವಿರೂಪಗೊಂಡ ದರ್ಶನ

ಒಂದು ಜಗ್ ತೆಗೆದುಕೊಂಡು ಅದನ್ನು ನೀರಿನಿಂದ ತುಂಬಿಸಿರಿ. ಒಂದು ಕೋನದಲ್ಲಿ ಆ ನೀರನ್ನು ಕುಡಿಯುವುದಕ್ಕೆ ಒಂದು ಕೊಳವೆ (ಸ್ಟ್ರಾ)ಯನ್ನು ಅದರಲ್ಲಿ ಹಾಕಿರಿ. ಮೇಲ್ಭಾಗದಿಂದ ನೋಡಿದರೆ, ಆ ಕೊಳವೆಯು (ಸ್ಟ್ರಾ) ಬಾಗಿದಂತೆ ಕಾಣಿಸಿಕೊಳ್ಳುತ್ತದೆ. ಈ ಕಾರಣದಿಂದಲೇ ಬೆಳಕು ಗಾಳಿಯಲ್ಲಿ ವೇಗವಾಗಿ ಪ್ರಯಾಣಿಸುವದಕ್ಕಿಂತಲೂ ಹೆಚ್ಚಾದ ವೇಗ ನೀರಿನಲ್ಲೇ ಪ್ರಯಾಣಿಸುತ್ತದೆ.ಬೆಳಕು ವಿಭಿನ್ನವಾಗಿ ಬಾಗಿ ಹೋಗಿರುತ್ತದೆ. ಇದರಿಂದ ವಿವಿಧವಾದ ಪರಿಸ್ಥಿತಿಗಳಲ್ಲಿ ಯಾವುದೇಯಾಗಲಿ ಎಷ್ಟು ವಿಭಿನ್ನವಾಗಿ ಕಾಣಿಸಿಕೊಳ್ಳುತ್ತದೆಯಲ್ಲಾ ಎಂದು ನಮಗೆ ಚೆನ್ನಾಗಿ ವಿವರಿಸುತ್ತದೆ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 6 ]--

## ಸೂಚನೆಗಳು! (ಕ್ಲೂಸ್) (ಪಾಠ ೬)

### 1 ಸೂಚನೆ #1 ಅಂಶ (ಪಾಠ 6)

ಖ್ಯಾತಿ ಸೋದರ ಸಂಬಂಧಿಯ ಕೇಸ್

### 2 ಸೂಚನೆ #2 ನಾಟಕ (ಪಾಠ 6)

ಜನಸಮೂಹದಲ್ಲಿ ಒಬ್ಬ #1: ಓ... ಅಲ್ಲಿ ತುಂಬಾ ಜನರಿದ್ದಾರೆ, ನೀರಿನಲ್ಲಿ ಅವನು ತಪ್ಪದೇ ಇರಬಹುದು.

ಜನಸಮೂಹದಲ್ಲಿ ಒಬ್ಬ #2: ಅವನ ಸ್ವರವು ಇಲ್ಲಿಯವರೆಗೆ ಕೇಳಿಸುತ್ತಿದೆ. ಅವನ ಸ್ವರವನ್ನು ನಾವು ಇಲ್ಲೇ ಇದ್ದು ಕೇಳೋಣ.

ಜನಸಮೂಹದಲ್ಲಿ ಒಬ್ಬ #1: ಯೆಶಾಯ, ಇದು ಒಳ್ಳೇಯ ವಾಕ್ಯಭಾಗ. ಇವರಲ್ಲಿ ಅನೇಕರು ಯೆಶಾಯನ ಪ್ರಸಂಗವನ್ನು ಕಳೆದ ಭಾನುವಾರ ಸಭೆಗಳಲ್ಲಿ ಕೇಳಿದವರೆಂದು ಆತನಿಗೆ ಗೊತ್ತಿರಬಹುದೆಂದು ನನಗೆ ತಿಳಿಯುತ್ತಿದೆ.

ಜನಸಮೂಹದಲ್ಲಿ ಒಬ್ಬ #2: ಇವರು ಒಳ್ಳೇಯ ಪ್ರಸಂಗೀಕರು. ಇವರಿಗೆ ಒಳ್ಳೇಯ ಭಾರವುಂಟು.

ಜನಸಮೂಹದಲ್ಲಿ ಒಬ್ಬ #1: ನಿಮಗೆ ಗೊತ್ತಾ, ಅವರು ನನ್ನ ಹಾಗೆ ಉಡುಪುಗಳನ್ನು ಧರಿಸಿಕೊಂಡರೆ ಆತನಿಗೆ ಇನ್ನು ಅನೇಕ ಜನರ ಸಮೂಹವು ಬರುವುದು ಖಂಡಿತ. ಇವರು ಆ ರೀತಿ ಉಡುಪುಗಳನ್ನು ಧರಿಸಿಕೊಂಡರೆ ಪ್ರಸಂಗ ಮಾಡುವುದಕ್ಕೆ ದೊಡ್ಡ ದೊಡ್ಡ ಸಭೆಗಳೊಳಗೆ ಇದನ್ನು ಪ್ರಸಿದ್ಧಿ ಮಾಡುವುದಿಲ್ಲ.

ಜನಸಮೂಹದಲ್ಲಿ ಒಬ್ಬ #2: ಹೌದು, ನೀವು ಹೇಳಿದ್ದು ಸರಿನೇ! ಅವರ ಬಟ್ಟೆಗಳನ್ನು ನೋಡು, ಎಲ್ಲಾ ಒರಟಾಗಿ ಮತ್ತು ಅಡ್ಡದಿಡ್ಡಾಗಿ ಎಷ್ಟು ಗೀಚುಗಳಿವೆ. ಅವರು ಕೂದಲನ್ನು ಚೆನ್ನಾಗಿ ಕತ್ತರಿಸಿಕೊಂಡು, ಒಳ್ಳೇಯ ಶೈಲಿಯನ್ನು ಇಟ್ಟುಕೊಳ್ಳಬಹುದು.

ಜನಸಮೂಹದಲ್ಲಿ ಒಬ್ಬ #1: ಅವರು ಈ ಎಲ್ಲಾ ಪ್ರಾರ್ಥನೆಯನ್ನು ಮುಗಿಸಿದನಂತರ ಅವರಿಗೆ ನಾನು ಕೆಲವೊಂದು ಸಲಹೆಗಳನ್ನು ಕೊಡುತ್ತೇನೆ. ಜನರ ಮುಂದೆ ಈ ರೀತಿ ಚೆನ್ನಾಗಿರುವುದಕ್ಕೆ ನಾನು ಅವರಿಗೆ ಕೆಲವೊಂದಿಗೆ ವಿಷಯಗಳನ್ನು ಹೇಳುತ್ತೇನೆ.

ಜನಸಮೂಹದಲ್ಲಿ ಒಬ್ಬ #2: [ಸುತ್ತಮುತ್ತಲಿರುವ ಜನರನ್ನು ನೋಡುತ್ತಾ] ಒಳ್ಳೇದು, ಇಲ್ಲಿ ಆತನಿಗೆ ತುಂಬಾ ಜನರಿದ್ದಾರೆ.

ಜನಸಮೂಹದಲ್ಲಿ ಒಬ್ಬ #1: ಅಲ್ಲಿರುವವರನ್ನು, ನಾನು ಎಂದಿಗೂ ಕಳೆದ ತಿಂಗಳುಗಳಲ್ಲಿ ಆರಾಧನೆಗಳಲ್ಲಿ ನೋಡಲಿಲ್ಲ. ಇದು ಒಳ್ಳೇದು ಕೂಡ, ಅವರು ಮಾಡುವುದನ್ನು ಮಾಡಿದಾದ ಮೇಲೆ, ಇವರು ಯಾವುದೇ ಸಭೆಯ ಭವನದ ಬಾಗಿಲನ್ನು ಕತ್ತಲು ಮಾಡುವುದಕ್ಕೆ ನಾಚಿಕೆಪಡಬೇಕು.

ಜನಸಮೂಹದಲ್ಲಿ ಒಬ್ಬ #2: [ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆಯುವುದಕ್ಕೆ ಆರಂಭಿಸುತ್ತಾ] ಆಕೆ ನನಗೆ ಗೊತ್ತು, ಆಕೆ ಇಲ್ಲೇನು ಮಾಡುತ್ತಿದ್ದಾಳೆ? ಆಕೆ ಅಷ್ಟು ಒಳ್ಳೇಯವಳಲ್ಲ. ಆಕೆ ಇವರ ಪ್ರಸಂಗವನ್ನು ಕೇಳಲೇ ಬೇಕು.

ಜನಸಮೂಹದಲ್ಲಿ ಒಬ್ಬ #1: ಓ..ನನ್ನ ಸಭೆಯ ಗುಂಪಿನಿಂದ ಕೆಲವರು ಅಲ್ಲಿದ್ದಾರೆ. ಅವರು ಈ ಮನುಷ್ಯನನ್ನು ಪರೀಕ್ಷೆ ಮಾಡಬಹುದೇನೋ. ಅಯ್ಯೋ,.. ಅವರು ನನ್ನನ್ನು ನೋಡಿದರಲ್ಲಾ, ಇರು, ಯಾಕೆ ಅವರು ಅಷ್ಟು ಸಮೀಪಕ್ಕೆ ಹೋಗುತ್ತಿದ್ದಾರೆ?

ಜನಸಮೂಹದಲ್ಲಿ ಒಬ್ಬ #2: ಅವರು ಪ್ರತಿಸ್ಪಂದಿಸುವುದಕ್ಕೆ ಹೋಗುತ್ತಿದ್ದಾರೆ! ಏಯ್, ಇರು! ನಾವು ಅದರಿಂದ ನಿಮಗೆ ಸಹಾಯ ಮಾಡಬಹುದು, ಹೆದರುವ ಈ ಮನುಷ್ಯನ ಬಳಿಗೆ ನೀವು ಹೋಗಬಾರದು. ಅಯ್ಯೋ, ನಾವು ಸಿಕ್ಕಿಕೊಂಡೆವು. ಗಾಳಿಯಲ್ಲಿ ಆಕಡೆ ಈಕಡೆ ಅಲುಗಾಡುತ್ತಿರುವ ಈ ಹುಲ್ಲು ಕಡೆಗೆ ನಾನು ನೋಡುತ್ತೇನೆ, ನಾನು ಇಲ್ಲಿ ಇದ್ದಿಲ್ಲ ಎನ್ನುವ ಹಾಗೆ ನಟನೆ ಮಾಡುತ್ತೇನೆ.

ಜನಸಮೂಹದಲ್ಲಿ ಒಬ್ಬ #1: ಅಯ್ಯೋ, ಬ್ಯಾಡ, ಅವರು ಇಲ್ಲಿಗೆ ಬರುತ್ತಿದ್ದಾರೆ. ಅವರೊಂದಿಗೆ ಮಾತನಾಡುವುದರ ಕುರಿತಾಗಿ ಅವನು ಅವರೊಂದಿಗೆ ಹೇಳುವವರೆಗು ನಾನು ಇಲ್ಲೇ ಇದ್ದು ಕಾಯುತ್ತೇನೆ, ಆದರೆ ಇದು ಒಳ್ಳೇಯ ಸಮಯವೆಂದು ನಾನು ಊಹಿಸಿಕೊಳ್ಳಬಹುದು. [ಮಾತನಾಡುವುದಕ್ಕೆ ಸಮಯಕ್ಕಾಗಿ ಎದುರುನೋಡುವುದು]

ಜನಸಮೂಹದಲ್ಲಿ ಒಬ್ಬ #2: [ಇದ್ದಕ್ಕಿದ್ದಂತೆ ಆವೇಶಪೂರಿತವಾಗಿ] ಸರ್ಪ ಜಾತಿಯವರೇ! ಅವರು ನಮ್ಮನ್ನು ಸರ್ಪ ಜಾತಿಯವರೇ ಎಂದು ಕರೆಯುವುದಕ್ಕೆ ಎಷ್ಟು ಧೈರ್ಯ? ಆ ಮನುಷ್ಯನಿಗೆ ಯಾವ ಹಕ್ಕು ಇಲ್ಲ. ನಾನು ಇಲ್ಲಿ ಪಶ್ಚಾತ್ತಾಪ ಹೊಂದುವುದಕ್ಕೆ ಬಂದಿಲ್ಲ. ನಾನು ಪಾಶ್ಚಾತ್ತಾಪ ಹೊಂದುವ ಅವಕಾಶವಿಲ್ಲ. ಬರುವಂತಹ ಕ್ರೋಧದಿಂದ ನಾನು ಯಾಕೆ ಹೆದರಿ ಹೋಗಬೇಕು? ಕರ್ತನ ದಿನವು ಪಾಪಿಗಳಿಗಾಗಿ ಮಾತ್ರವೇ. ನಾನು ಧರಿಸಿಕೊಂಡ ಉಡುಪುಗಳು ಇವನಿಗೆ ಕಾಣಿಸುತ್ತಿಲ್ಲವೋ, ನಾನು ನೀತಿವಂತನು? ನಾನು ಅಬ್ರಹಾಮ ಮಗನು; ಅವನು ಆ ರೀತಿ ನನ್ನೊಂದಿಗೆ ಮಾತನಾಡಬಾರದು! ಆತನು ಯಾರೆಂದು ಅವರು ಹೇಳಿಕೊಳ್ಳುತ್ತಿದ್ದಾರೆ?

## ಸೂಚನೆ #3 ವಸ್ತು (ಪಾಠ 6)

ತರಗತಿಗೆ ತೆಗೆದುಕೊಂಡು ಬನ್ನಿರಿ: ಜೇನು ತುಪ್ಪ





## ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 6)

ದೀಕ್ಷಾಸ್ನಾನ ಕೊಡುವ ಯೋಹಾನನಿಂದ ಯೇಸು ಕ್ರಿಸ್ತ ರವರು ದೀಕ್ಷಾಸ್ನಾನ ಪಡೆದ ಯೋರ್ದಾನ್ ನದಿ ಈ ಚಿತ್ರದಲ್ಲಿ ಕಾಣಿಸುತ್ತಿದೆ.

## ಸೂಚನೆ #5 ಬೈಬಲ್ ಸನ್ನಿವೇಶ  (ಪಾಠ 6)

ರಹಸ್ಯ: ಮಿಡತೆಗಳು ಮತ್ತು ಕಾಡ ಜೇನು



# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 6)

## ಬೈಬಲ್ ಕಥೆ (ಪಾಠ 6)

**ದೀಕ್ಷಾಸ್ನಾನ ಕೊಡುವ ಯೋಹಾನ**

**ಬೈಬಲ್ ವಾಕ್ಯಭಾಗ : ಮತ್ತಾಯ.3:1-6, ಮಾರ್ಕ.1:1-8**



ದೀಕ್ಷಾಸ್ನಾನ ಕೊಡುವ ಯೋಹಾನನು ಪಾಪಗಳ ಪಶ್ಚಾತ್ತಾಪದ ಕುರಿತಾಗಿ ಯೂದಯ ಅರಣ್ಯದಲ್ಲಿ ಪ್ರಸಂಗ ಮಾಡುತ್ತಿದ್ದನು. ಆತನು ಕಾಡಿನಲ್ಲಿ ಜೀವನ ಮಾಡುತ್ತಿದ್ದನು ಮತ್ತು ಮಿಡತೆಗಳನ್ನು, ಕಾಡು ಜೇನನ್ನು ಆಹಾರವನ್ನಾಗಿ ತೆಗೆದುಕೊಳ್ಳುತ್ತಿದ್ದನು. ಆತನ ಉಡುಪುಗಳು ಒಂಟೆ ಚರ್ಮದ ಕೂದಲುಗಳಿಂದ ಮಾಡಿದವುಗಳಾಗಿದ್ದವು, ಸೊಂಟಕ್ಕೆ ತೊಗಲಿನ ನಡುಕಟ್ಟನ್ನು ಧರಿಸಿಕೊಂಡಿದ್ದನು. ಆತನು ಇತರ ಎಲ್ಲಾ ಮನುಷ್ಯರಗಿಂತಲೂ ಒಂದು ವಿಚಿತ್ರವಾಗಿ ಕಾಣಿಸಿಕೊಳ್ಳುತ್ತಿದ್ದನು. ಆತನು ಒಂದು ವಿಭಿನ್ನವಾದ ಸಂದೇಶವನ್ನು ಕೊಡುತ್ತಿದ್ದನು. ಎಷ್ಟೋ ಕಾಲದಿಂದ ಜನರು ಧರ್ಮಶಾಸ್ತ್ರದ ಮೂಲಕ ಜೀವನ ಮಾಡುತ್ತಿದ್ದನು. ಅವರೆಲ್ಲರು ಧರ್ಮಶಾಸ್ತ್ರದಲ್ಲಿರುವ ಎಲ್ಲಾ ಆಜ್ಞೆಗಳನ್ನು ಅನುಸರಿಸುವದಕ್ಕೆ ಆಗುತ್ತಿದ್ದಿಲ್ಲ. ದೀಕ್ಷಾಸ್ನಾನ ಕೊಡುವ ಯೋಹಾನನು ಜನರಿಗೆಲ್ಲಾ ತಮ್ಮ ಪಾಪಗಳಿಂದ ಬಿಡುಗಡೆ ಹೊಂದಲು ಪಶ್ಚಾತ್ತಾಪಪಡಬೇಕೆಂದು ಪ್ರಕಟನೆ ಮಾಡುತ್ತಿದ್ದನು. ನನಗಿಂತ ಇನ್ನೂ ಹೆಚ್ಚಾದ ಶಕ್ತಿಯುಳ್ಳವರು ನನ್ನ ಹಿಂದೆ ಬರುತ್ತಿದ್ದಾರೆಂದು ಆತನು ಹೇಳುತ್ತಿದ್ದನು. ಆತನು ಅವರಿಗೆ ನೀರಿನಲ್ಲಿ ದೀಕ್ಷಾಸ್ನಾನ ಕೊಡುತ್ತಿದ್ದನು, ಆದರೆ ನನ್ನ ಹಿಂದೆ ಬರುವಾತನು ನಿಮ್ಮನ್ನು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸುತ್ತಾನೆಂದು ಹೇಳುತ್ತಿದ್ದನು. ಆತನು ಯೇಸುವಿನ ಕುರಿತಾಗಿಯೇ ಮಾತನಾಡುತ್ತಿದ್ದನು. ಇದು ಯೂದಾ ಮತ್ತು ಯೆರೂಷಲೇಮಿನಿಂದ ಜನರು ಆತನ ಸಂದೇಶವನ್ನು ಕೇಳಿ, ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕೆ ಬರುವಷ್ಟು ಪ್ರಭಾವವು ಜನರ ಮೇಲೆ ಬೀರಿತು.

## ಅನ್ವಯ (ಪಾಠ 6)

ನಾನು ಎಲ್ಲರಿಗಿಂತ ವಿಭಿನ್ನವಾಗಿ ಇರಬೇಕೆಂದು ದೇವರು ಬಯಸುತ್ತಿದ್ದಾರೆ.

## ಕಂಠಪಾಠ ವಾಕ್ಯ (ಪಾಠ 6)

"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ." - ರೋಮಾ.12:2.

## ಮನೆಗೆಲಸ (ಪಾಠ 6)

ನಿಮ್ಮ ಈ ಕಾಲದಲ್ಲಿ ಎಲ್ಲರಿಗಿಂತಲೂ ನೀವು ವಿಭಿನ್ನವಾಗಿರಬೇಕೆಂದು ದೇವರು ನಿಮ್ಮನ್ನು ಕೇಳಬಹುದು. ಬಹುಶಃ ನೀವು ನಿಮ್ಮ ಇತರ ಸ್ನೇಹಿತರ ಹಾಗೆ ಒಂದೇ ರೀತಿಯಾದ ಸಿನಿಮಾಗಳನ್ನು ಅಥವಾ ಟಿವಿ ಕಾರ್ಯಕ್ರಮಗಳನ್ನು ನೋಡುವುದಕ್ಕೆ ಅಥವಾ ಒಂದೇ ರೀತಿಯಾದ ಸಂಗೀತವನ್ನು ಕೇಳುವುದಕ್ಕೆ ಅಥವಾ ಒಂದೇ ರೀತಿಯಾದ ಉಡುಪುಗಳನ್ನು ಹಾಕಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ನಿಮ್ಮ ಮನೆಗೆಲಸ ಏನಂದರೆ ನೀವು ಗುಣುಗುಟ್ಟು ಮಾಡುವುದನ್ನು ನಿಲ್ಲಿಸಿ, ನೀವು ವಿಭಿನ್ನವಾಗಿರುವುದಕ್ಕೆ ನಿಮ್ಮ ತಂದೆತಾಯಿಗಳಿಗೆ ಧನ್ಯವಾದಗಳು ತಿಳಿಸಿರಿ. ಬಹುಶಃ ವಿಭಿನ್ನವಾಗಿರಬೇಕೆಂದು ಹೇಳುವ ತಂದೆತಾಯಿಗಳ ಮಕ್ಕಳು ನಿಮಗೆ ಗೊತ್ತಿರಬಹುದು, ಅಂತವರು ತಮ್ಮ ತಂದೆತಾಯಿಗಳನ್ನು ಅನುಸರಿಸುತ್ತಿದ್ದಕ್ಕಾಗಿ ಅವರಿಗೆ ಗೌರವವನ್ನು ಕೊಡಿರಿ ಮತ್ತು ಅವರು ಹಾಗೆ ಇರುತ್ತಿರುವಾಗ ಯಾರಾದರೂ ಅವರನ್ನು ಹಿಯಾಳಿಸುತ್ತಿದ್ದರೆ ಅವರ ಪಕ್ಷದಲ್ಲಿ ನಿಂತುಕೊಳ್ಳಿರಿ.

## ದೇವರ ಡಿ.ಎನ್.ಎ.  (ಪಾಠ ೬)

ಜನರು ತಮ್ಮ ಅಗತ್ಯವನ್ನು ತಿಳಿದುಕೊಳ್ಳಬೇಕೆಂದು  ಮತ್ತು ಆತನು ತನ್ನ ಒಬ್ಬನೇ ಮಗನಾದ ಯೇಸುವನ್ನು ಪ್ರತ್ಯಕ್ಷಪಡಿಸುವುದಕ್ಕೆ ಮುಂಚಿತವಾಗಿ ಪಶ್ಚಾತ್ತಾಪಪಡಬೇಕೆಂದು ಬಯಸಿದ್ದಾರೆ.






# ವಿನೋದ ಸಮಯ! (ಪಾಠ ೬)

## ಆಟ  (ಪಾಠ ೬)

ಪಕ್ಕಕ್ಕಿಡು

ಮಕ್ಕಳೆಲ್ಲರೂ ಒಂದು ವೃತ್ತದ ಆಕಾರದಲ್ಲಿ ನಿಂತುಕೊಳ್ಳುವುದಕ್ಕೆ ಹೇಳಿರಿ. ಆ ವೃತ್ತದ ಮಧ್ಯೆದಲ್ಲಿರುವುದಕ್ಕೆ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಿರಿ ಅಥವಾ ಒಂದು ಚಿಕ್ಕ ಗುಂಪನ್ನು ಆಯ್ಕೆ ಮಾಡಿಕೊಳ್ಳಿರಿ. ವೃತ್ತದ ಹೊರಗಡೆ ಇರುವ ಮಕ್ಕಳು ಒಳಗಡೆ ಇರುವ ಮಕ್ಕಳಿಗೆ ಒಂದು ಚೆಂಡನ್ನು ಎಸೆಯುತ್ತಾರೆ, ಆಗ ಎಸೆದಾಗ ವೃತ್ತಾಕಾರದಲ್ಲಿ ನಿಂತಿರುವ ಮಕ್ಕಳು ಅದನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಒಂದುವೇಳೆ ಮಧ್ಯೆದಲ್ಲಿರುವವರು ಯಾರಾದರೂ ಚೆಂಡನ್ನು ಹಿಡಿದುಕೊಂಡರೆ, ಚೆಂಡನ್ನು ಎಸೆದವರೊಂದಿಗೆ ಅವರು ಸ್ಥಳಗಳ ವ್ಯಾಪಾರ ಮಾಡುತ್ತಾರೆ.

## ಚರ್ಚೆ  (ಪಾಠ ೬)

(ದೊಡ್ಡ ವಿದ್ಯಾರ್ಥಿಗಳಿಗಾಗಿ)



1. ನಾನು ನಿಜವಾಗಿ ಪಾಪಿಯಾಗಿದ್ದೇನೋ? ನನ್ನ ದೈನಂದಿನ ಜೀವನದಲ್ಲಿ ಮಾಡುವ ಕೃತ್ಯಗಳಲ್ಲಿ ಯಾವುವು ಪಾಪಗಳೆಂದು ಹೇಳಲ್ಪಡುತ್ತವೆ? ಪಾಪಗಳಲ್ಲಿ ಮೂರು ವಿಧಗಳಿವೆ. ಮೊದಲನೇಯದು, ಕೆಲವೊಂದು ಪಾಪಗಳನ್ನು ನಾನು ತಕ್ಷಣವೇ ತಿಳಿದುಕೊಂಡು, ಅವುಗಳನ್ನು ತಪ್ಪಿಸಿಕೊಳ್ಳಬಹುದು (ಹತ್ಯೆ ಮಾಡುವುದು, ಕೆಟ್ಟ ಮಾತುಗಳನ್ನಾಡುವುದು). ಕೆಲವೊಂದು ಪಾಪಗಳನ್ನು ನಾನು ನೋಡಿದಾಗ, ನಾನು ಅವುಗಳನ್ನು ಮಾಡುತ್ತೇನೆ, ನಾನು ಅವುಗಳನ್ನು ಸಮರ್ಥಿಸಿಕೊಳ್ಳಬಹುದು, ಅವುಗಳನ್ನು ನಿರ್ಲಕ್ಷೆ ಮಾಡಬಹುದು, ಅಥವಾ ಅವುಗಳನ್ನು ಬಚ್ಚಿಡಬಹುದು (ಸುಳ್ಳು ಹೇಳುವುದು, ಮೋಸ ಮಾಡುವುದು). ಇನ್ನೂ ಕೆಲವೊಂದು ಪಾಪಗಳಿವೆ, ನಾನು ಅವುಗಳನ್ನು ಪಾಪಗಳೆಂದು ಗುರುತಿಸದಿದ್ದರೂ, ನಾನು ಅವುಗಳನ್ನು ಮಾಡುತ್ತಿರುತ್ತೇನೆ (ಎಷ್ಟು ಚಟುವಟಿಕೆಗಳು ಎಂದರೆ ಸಬ್ಬಾತ್.ಗಾಗಿ ಹೆಚ್ಚಾದ ಚಟುವಟಿಕೆಗಳನ್ನು ಕೊಟ್ಟಿದ್ದಾರೆ? ಅವುಗಳನ್ನು ಗೌರವಿಸದಿದ್ದರೆ ನಿಮ್ಮ ತಂದೆತಾಯಿಗಳೊಂದಿಗೆ ಒಪ್ಪುತ್ತಿಲ್ಲವೆಂದರ್ಥವೊ?). ಪ್ರತಿಯೊಂದು ಪಾಪದ ಕುರಿತಾದ ಉದಾಹರಣೆಯ ಕುರಿತಾಗಿ ಮಾತನಾಡಿರಿ. ಎಲ್ಲರು ಪಾಪ ಮಾಡಿದ್ದಾರೆ. (ಲೂಕ.1:5-6, 18-20; ರೋಮಾ.3:10-13,23; ರೋಮಾ.5:6-11; ರೋಮಾ.6:1-4; ಇಬ್ರಿ.4:14-16).

2. ಪಾಪ ಎಂದು ನಿಮಗೆ ತಿಳಿಯದಿದ್ದರೆ, ಅದು ನಿಜವಾಗಿ ಪಾಪವಾಗುತ್ತದೋ?


   ಅದನ್ನು ನೀವು ನಿಜವಾಗಿ ಒಪ್ಪಿಕೊಂಡರೆ, ನೀವು ತಪ್ಪದೆ ತಿಳಿದುಕೊಳ್ಳುವಿರಿ. ನಮ್ಮೆಲ್ಲರಿಗೆ ಕ್ರೈಸ್ತರಲ್ಲದ ಸ್ನೇಹಿತರಿದ್ದಾರೆ, ಅವರಿಗೆ ದೇವರೆಂದರೆ ನಂಬಿಕೆ ಇಲ್ಲ. ಆದರೂ ಅವರು ಏನು ಮಾಡಬೇಕು ಏನು ಮಾಡಬಾರದು ಎಂದು ಅಂತಹ ಜನರಿಗೆ ಕೂಡ ಗೊತ್ತು


ಯಾಕಂದರೆ ದೇವರು ತನ್ನ ಕಟ್ಟಲೆಗಳನ್ನು ಅವರ ಹೃದಯಗಳ ಮೇಲೆ ಬರೆದಿಟ್ಟಿದ್ದಾರೆ. (ರೋಮಾ.2:15) ಇದಕ್ಕೆ ಜೊತೆಯಾಗಿ, ನಮ್ಮ ರಕ್ಷಣೆ ವಿಷಯಕ್ಕಾಗಿ ಯೇಸುವಿನಲ್ಲಿ ನಾವು ನಂಬಿಕೆಯನ್ನಿಟ್ಟಾಗ, ನಾವು ಪವಿತ್ರಾತ್ಮನಿಂದ ನಡೆಸಲ್ಪಡುವ ಹೊಸ ಮನಸಾಕ್ಷಿಯ ವಿಷಯಕ್ಕೆ ಬರುತ್ತೇವೆ. ಆದಿ.3:1-19; ಜ್ಞಾನೋ.24:12; ಯೋಹಾನ.15:22-24; ಯೋಹಾನ.16:5-15; ಯಾಕೋಬ.4:17.

3. ಉತ್ತಮವಾಗಿರುವುದೇ ತುಂಬಾ ಪ್ರಾಮುಖ್ಯವೆಂದು ಕೆಲವರು ಹೇಳುತ್ತಾರೆ, ನೀವೇನು ಆಲೋಚನೆ ಮಾಡುತ್ತೀರಿ?

ದೀಕ್ಷಾಸ್ನಾನ ಕೊಡುವ ಯೋಹಾನರು ಒಂದು ಕಾಲದಲ್ಲಿ ಅವರೇ ಉತ್ತಮವಾಗಿದ್ದರು, ಆದರೆ ಆ ಕಾಲದಲ್ಲಿಯೇ ಅವರು ಯೇಸುಕ್ರಿಸ್ತನು ಹೆಚ್ಚಲ್ಪಡುತ್ತಾ ಬರುತ್ತಿರುವಾಗ ಅವರು ತಗ್ಗಿಸಲ್ಪಟ್ಟರು. (ಯೋಹಾನ.3:33) ಈ ರೀತಿಯಾದ ಪರಿವರ್ತನೆ ಯೋಹಾನನ ಶಿಷ್ಯರಿಗೆ ತುಂಬಾ ಕಷ್ಟವಾಗಿರಬಹುದು. ಪರಿವರ್ತನೆಗಳ ಮೂಲಕ ಹೋಗುವುದು ಎಷ್ಟು ಕಷ್ಟವೆನ್ನುವುದರ ಕುರಿತಾಗಿ ಮಾತನಾಡಿರಿ. ಪರಿವರ್ತನೆಗಳನ್ನು ಕಾಪಾಡುವ ಒಂದು ವಿಧಾನವೇನಂದರೆ ಸ್ಥಾನ ಮಾನಗಳ ಮೇಲೆ ಕೇಂದ್ರೀಕರಿಸುವುದರಬದಲಾಗಿ ದೇವರು ನೀವೇನಾಗಿರಬೇಕೆಂದು ಬಯಸುತ್ತೀರೋ ಅದರ ಮೇಲೆ ಕೇಂದ್ರೀಕರಿಸುವುದಾಗಿರುತ್ತದೆ. ದೇವರು ಯಾವರೀತಿ ಇರಬೇಕೆಂದು ನಮ್ಮನ್ನು ಬಯಸುತ್ತಾರೋ ಆ ರೀತಿ ನಾವು ಇರುವುದರಲ್ಲಿ ನಂಬಿಗಸ್ತರಾಗಿದ್ದಾರೆ, ಆತನು ಖಂಡಿತವಾಗಿ ಆತನ ಪ್ರಣಾಳಿಕೆಯಲ್ಲಿ ನೀವು ತಪ್ಪದೇ ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. (1 ಸಮು.16:1-13; ಫಿಲಿಪ್ಪಿ.3:12-14; 1 ತಿಮೊಥೆ.4:6-12; ಇಬ್ರಿ.11)

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ ೬)





## ಲೂಕಾಸ್ ರವರ ಪ್ರಯೋಗ (ಪಾಠ ೬)

ಆನೆಯ ಹಲ್ಲು ತಿಕ್ಕುವ ಅಂಟು (ಟೂತ್ ಪೇಸ್ಟ್)

ಒಂದು ಸ್ವಚ್ಛವಾದ 2-ಲೀಟರ್ ಬಾಟಿಲ್ ಉಪಯೋಗಿಸಿ, ಅದರೊಳಗೆ ಒಂದು ಕಪ್ ಹೈಡ್ರೋಜನ್ ಪೆರಾಕ್ಸೈಡನ್ನು ಹಾಕಿರಿ. ನಿಮಗೆ ಇಷ್ಟವಿರುವ ಬಣ್ಣವನ್ನು ಬೆರೆತುಗೊಳಿಸಿರಿ. ಅದರಲ್ಲಿ ಸಾಮಾನುಗಳನ್ನು ತೊಳೆಯುವ ಲಿಕ್ವಿಡ್ (ಅಂಟು) ಸ್ವಲ್ಪ ಹಾಕಿರಿ. ಮಿಶ್ರಣಕ್ಕಾಗಿ ಬಿಸಿ ನೀರಿನಲ್ಲಿ ಹಾಕಿದ ಯಿಸ್ಟ್ ಮಿಶ್ರಣವನ್ನು ಅದರೊಳಗೆ ಹಾಕಿರಿ. ಈಗ ಆ ಬಾಟಿಲನ್ನು ತೆಗೆದುಕೊಂಡು ಚೆನ್ನಾಗಿ ಅಲುಗಾಡಿಸಿರಿ. ಈಗ ಮುಚ್ಚಳ ತೆಗೆದು ನೋಡಿರಿ, ಅದರೊಳಗೆ ಇರುವ ಎಲ್ಲಾ ಪೇಸ್ಟ್ ಹೊರಗಡೆ ಹುಕ್ಕುತ್ತಾ ಬರುತ್ತದೆ. ಅದು ಆನೆಯ ಹಲ್ಲುಗಳಿಗೆ ಸುಮಾರು ಎರಡು ದಿನಗಳ ವರೆಗೆ ಉಪಯೋಗಿಸಬಹುದು.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 7 ]--



## ಸೂಚನೆಗಳು! (ಕ್ಲೂಸ್) (ಪಾಠ 7)

### 1 ಸೂಚನೆ #1 ಅಂಶ (ಪಾಠ 7)

ಗೊಂದಲಮಯ ಪ್ರವಾಸಿಗನ ಕೇಸ್

### 2 ಸೂಚನೆ #2 ನಾಟಕ (ಪಾಠ 7)

ಐಥಿಯೋಪ್ಯದವನು : ಅಧಿಕಾರಿಗಳೇ ದಯವಿಟ್ಟು ಇಲ್ಲಿ ನೋಡಿ, ಇಷ್ಟು ಎತ್ತರವಿರುವ ಮತ್ತು ತೊಯ್ದ ಈ ಮನುಷ್ಯನನ್ನು ನೀವು ಕಂಡಿದ್ದೀರಾ?

ಅಧಿಕಾರಿ : ಒಂದು ನಿಮಿಷದ ಮುಂಚಿತ ಅವರು ನಿಮ್ಮ ಹತ್ತಿರವೇ ಇದ್ದಿದ್ದರಲ್ಲಾ?



ಐಥಿಯೋಪ್ಯದವನು : ಹೌದು, ಅದು ಸರಿನೇ, ಅವರು ನನಗೆ ಈ ಯೆಶಾಯ ಗ್ರಂಥದ ಅಧ್ಯಾಯವನ್ನು ಓದುವುದಕ್ಕೆ ಸಹಾಯ ಮಾಡುತ್ತಿದ್ದರು, ಮತ್ತು ನನಗೆ ಇನ್ನೂ ಹೆಚ್ಚಾಗಿ ಸಹಾಯ ಬೇಕಾಗಿದೆ.

ಅಧಿಕಾರಿ : ಸರಿ, ನೀವು ಯಾವಾಗ ಅವರನ್ನು ಕೊನೆಯಸಲ ನೋಡಿದ್ದೀರಿ?

ಐಥಿಯೋಪ್ಯದವನು : ನಾವು ಆ ನೀರಿನಲ್ಲಿ ಇದ್ದಿದ್ದೆವು, ಅವರು ನನಗೆ ದೀಕ್ಷಾಸ್ನಾನ ಕೊಟ್ಟರು. ನಾನು ನೀರಿನೊಳಗಿನಿಂದ ಹೊರ ಬರುವುದರೊಳಗೆ ಅವರು ಹೋಗಿದ್ದರು.

ಅಧಿಕಾರಿ : ಹೌದಾ, ನೀವು ವಿದ್ಯಾವಂತ ವ್ಯಕ್ತಿಯಾಗಿ ತೋರುತ್ತೀರಿ.

ಐಥಿಯೋಪ್ಯದವನು : ಹೌದು, ನಾನು ಐಥಿಯೋಪ್ಯ ರಾಣಿಯ ಕೆಳಗೆ ದೊಡ್ಡ ಅಧಿಕಾರಿ ಮತ್ತು ಆಕೆಯ ಎಲ್ಲಾ ಖಜಾನೆಯ ಮೇಲ್ವಿಚಾರಕನೂ ಆಗಿದ್ದೇನೆ.

ಅಧಿಕಾರಿ : ಒಳ್ಳೇದು ಸರ್, ನೀವು ನೀರಿನೊಳಗಡೆಯಿಂದ ಬರುತ್ತಿರುವಾಗ ಬೇರೊಂದು ಕಾಲಿನ ಹೆಜ್ಜೆಗಳು ಕಾಣಿಸಿದವೋ?

ಐಥಿಯೋಪ್ಯದವನು : ಇಲ್ಲ, ಆ ರೀತಿ ಕಾಣಿಸಿಕೊಂಡಿಲ್ಲ.

ಅಧಿಕಾರಿ : ನೀವೇನಾದರೂ ಈ ನೀರಿನ ಆಚೆಗೆ ಅಥವಾ ನೀರಿನೊಳಗೆ ನೋಡಿ ಹುಡುಕಿದ್ದೀರೋ?

ಐಥಿಯೋಪ್ಯದವನು : ಸ್ವಲ್ಪ ಹೊತ್ತೇ, ನಾನು ಯಾವ ಕಡೆಗೂ ನೋಡಲಿಲ್ಲ ಯಾಕಂದರೆ ಕೆಲವು ಕ್ಷಣಗಳು ಮಾತ್ರವೇ ನಾನು ನೀರಿನೊಳಗೆ ಇದ್ದಿದ್ದೆನು. ಅಷ್ಟರೊಳಗೆ ಅವರು ಎಷ್ಟು ದೂರ ಹೋಗಿರಬಹುದು?

ಅಧಿಕಾರಿ : ಅವರು ಎಲ್ಲಿಗೆ ಹೋಗಿದ್ದಾರೆಂದು ನೀವು ತುಂಬಾ ಗೊಂದಲದಲ್ಲಿದ್ದೀರೆಂದು ನನಗೆ ಅರ್ಥವಾಗುತ್ತಿದೆ, ಆದರೆ ನೀವು ಯಾಕೆ ತುಂಬಾ ಸಂತೋಷದಿಂದ ಕಾಣಿಸಿಕೊಳ್ಳುತ್ತಿದ್ದೀರಿ ಅದು ನನಗೆ ಆಶ್ಚರ್ಯವೆನಿಸುತ್ತದೆ.

ಐಥಿಯೋಪ್ಯದವನು : ಯಾಕಂದರೆ, ನಾನು ನೀರಿನೊಳಗಿನಿಂದ ಬಂದ ಕೂಡಲೇ, ಅವರು ನನ್ನಿಂದ ಹೊರಟು ಹೋದರೂ, ನಾನು ಇದಕ್ಕೆ ಮುಂಚಿತ ಎಂದಿಗೂ ನೋಡದ, ಅನುಭವಿಸದ ಹೊಸ ಸ್ವಾತಂತ್ರ್ಯವು ನನಗೆ ಸಿಕ್ಕಿದೆ.

ಅಧಿಕಾರಿ : ನನಗೆ ಅದನ್ನು ವಿವರಿಸಿರಿ.

ಐಥಿಯೋಪ್ಯದವನು : ಸರಿ, ನಾವು ಯೆಶಾಯ ಗ್ರಂಥವನ್ನು ಓದುತ್ತಿದ್ದೆವು ಮತ್ತು ಈ ಗ್ರಂಥದಲ್ಲಿರುವ ಪ್ರವಾದನೆಗಳು ಯಾವರೀತಿ ಯೇಸು ಕ್ರಿಸ್ತನು ನೆರವೇರಿಸಿದ್ದನೋ ಅವರು ನನಗೆ ಚೆನ್ನಾಗಿ ವಿವರಿಸಿ ತೋರಿಸಿದ್ದರು ಮತ್ತು ಯೇಸು ನನಗಾಗಿ ಪರಿಪೂರ್ಣವಾದ ಬಲಿಯಾಗಿ ಮಾಡಲ್ಪಟ್ಟರು. ಇದರಿಂದ ನಾನು ಎಂದಿಗೂ ಇನ್ನುಮೇಲೆ ನನ್ನ ಪಾಪಗಳಿಗೆ ದಾಸನಾಗಿರುವ ಅವಶ್ಯಕತೆಯಿಲ್ಲ. ಆದ್ದರಿಂದ, ನಾನು ನನ್ನ ಪಾಪಗಳಿಗೆ ಪಶ್ಚಾತ್ತಾಪ ಪಟ್ಟಿದ್ದೇನೆ, ಮತ್ತು ಅವುಗಳಿಂದ ನಾನು ತಿರುಗಿಕೊಂಡಿದ್ದೇನೆ. ಇದಾದನಂತರ ನಾನು ಪಶ್ಚಾತ್ತಾಪಪಟ್ಟಿದ್ದೇನೆ ಎಂದು ಹೇಳುವುದಕ್ಕೆ ಗುರುತಾಗಿ ಅವರು ನನಗೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದರು. ಈಗ ನಾನು ನನ್ನ ಅಂತರಂಗವನ್ನು ಕೂಡ ತೊಳೆದುಕೊಂಡ ಅನುಭೂತಿ ಹೊಂದುತ್ತಿದ್ದೇನೆ. ಈಗ ನಾನು ಹೊಸ ಜೀವನದೊಂದಿಗೆ ನೂತನ ವ್ಯಕ್ತಿಯಾಗಿದ್ದೇನೆ. ನಾನು ಎಂದಿಗೂ ನನ್ನ ಪಾಪಗಳ ಭಾರವನ್ನು ಹೋರುವವನಾಗಿರುವುದಿಲ್ಲ.

ಅಧಿಕಾರಿ : ಅದು ಯಾವ ಸುರುಳಿ?

ಐಥಿಯೋಪ್ಯದವನು : ಯೆಶಾಯ 53.

ಅಧಿಕಾರಿ : ಅದನ್ನು ನಾನು ಓದುವುದಕ್ಕೆ ಇಷ್ಟಪಡುತ್ತಿದ್ದೇನೆ.

ಐಥಿಯೋಪ್ಯದವನು : ಒಳ್ಳೇಯದು, ನಾನು ಹೊರಡುತ್ತೇನೆ, ವಂದನೆಗಳು ಸಾರ್.

ಅಧಿಕಾರಿ : ಕಾಣೆಯಾಗಿರುವ ಆ ವ್ಯಕ್ತಿಯ ಕುರಿತು ಏನು?

ಐಥಿಯೋಪ್ಯದವನು : ಅಜೋಟಸ್ ಹಾಗೆ ಅವರು ಎಲ್ಲೋ ಒಂದು ಕಡೆಗೆ ನನಗೆ ಸಿಕ್ಕುತ್ತಾರೆ. ಬರ್ತೀನಿ ಸಾರ್!

## ಸೂಚನೆ #3 ವಸ್ತು (ಪಾಠ 7)

ತರಗತಿಗೆ ತೆಗೆದುಕೊಂಡು ಬನ್ನಿರಿ: ಚಿತ್ರ ಪಟ, ಪುಸ್ತಕ ಅಥವಾ ಸುರುಳಿ




## ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 7)

“ನಪುಂಸಕನ ದೀಕ್ಷಾಸ್ನಾನ” ಎನ್ನುವ ಈ ಚಿತ್ರ ಪಟವು ಸುಮಾರು 1626ರಲ್ಲಿ ಡಚ್ ಚಿತ್ರಕಾರನಾದ ರೆಂಬ್ರವದಂತ್ ವ್ಯಾನ್ ರಿನ್ ಅವರಿಂದ ಬಿಡಿಸಲಾಗಿದೆ. ಇದನ್ನು ಸುಮಾರು 1976 ಇಸ್ವಿಯಿಂದ ಉಟ್ರೇಚ್.ನಲ್ಲಿ ಕ್ಯಾಥರ್ಜೀನೇ ಕವನೆಂಟ್ ಮ್ಯೂಜಿಯಂ ಅವರಿಂದ ಸ್ವಂತ ಮಾಡಿಕೊಳ್ಳಲಾಗಿದೆ. ಈ ಚಿತ್ರದಲ್ಲಿ ಯೆರೂಷಲೇಮಿನಿಂದ ಗಾಜಾಗೆ ಹೋಗುವ ದಾರಿಯಲ್ಲಿ ಸುವಾರ್ತಿಕನಾದ ಫಿಲಿಪ್ಪನು ನಪುಂಸಕನಾದ ಐಥಿಯೋಪ್ಯದವನಿಗೆ ದೀಕ್ಷಾಸ್ನಾನ ಕೊಡುವುದನ್ನು ತೋರಿಸುತ್ತಿದೆ.



## ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 7)

ರಹಸ್ಯ : ದೀಕ್ಷಾಸ್ನಾನ ಕೊಡುವುದಕ್ಕೆ ಉಪಯೋಗಿಸುವ ನೀರಿನ ಪಕ್ಕದಲ್ಲಿ ಖಾಲಿ ರಥ ಮತ್ತು ಅದರಲ್ಲಿ ಓದುವುದಕ್ಕೆ ಉಪಯೋಗಿಸಿದ ಸುರುಳಿ.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 7)

## ಬೈಬಲ್ ಕಥೆ (ಪಾಠ 7)

**ಫಿಲಿಪ್ಪನು ಮತ್ತು ಐಥಿಯೋಪ್ಯದವನು**

**ಬೈಬಲ್ ವಾಕ್ಯಭಾಗದಿಂದ : ಅಪೊ.ಕೃತ್ಯ.8:26-40**



ಕರ್ತನ ದೂತನು ಫಿಲಿಪ್ಪನಿಗೆ ಹೊರಡು ಎಂದು ಹೇಳಿದಾಗ, ಅವನು ವಿಧೇಯನಾಡನು. ಅವನು ನಡೆದು ಹೋಗುತ್ತಿರುವಾಗ, ಒಂದು ಸ್ಥಳದಲ್ಲಿ ರಥದ ಮೇಲೆ ಒಬ್ಬ ಮನುಷ್ಯನು ಕುಳಿತುಕೊಂಡಿದ್ದನ್ನು ಕಂಡನು. ಈ ಮನುಷ್ಯನು ಐಥಿಯೋಪ್ಯ ದೇಶದ ರಾಣಿಯ ಕೆಳಗೆ ದೊಡ್ಡ ಅಧಿಕಾರಿಯು ಮತ್ತು ಆಕೆಯ ಎಲ್ಲಾ ಖಜಾನದ ಮೇಲೆ ಮೇಲ್ವಿಚಾರಕನೂ ಆಗಿದ್ದನು. ಇವನು ರಾಣಿಯ ಆಸ್ಥಾನದಲ್ಲಿ ತುಂಬಾ ಪ್ರಾಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿದ್ದನು. ಇವನು ದೇವರನ್ನು ಆರಾಧನೆ ಮಾಡಿ ಈಗತಾನೇ ಯೆರೂಷಲೇಮಿನಿಂದ ಬಂದಿದ್ದನು. ಪ್ರಯಾಣದಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳಲು, ರಥವನ್ನು ನಿಲ್ಲಿಸಿಕೊಂಡು, ಬೈಬಲ್ ಓದುತ್ತಿದ್ದನು. ಫಿಲಿಪ್ಪನು ಈ ಮನುಷ್ಯನ ಹತ್ತಿರಕ್ಕೆ ಹೋಗಿ, ಯೆಶಾಯನ ಗ್ರಂಥದಿಂದ ಓದುತ್ತಿರುವನ್ನು ಕೇಳಿಸಿಕೊಂಡನು. ಆಗ ಫಿಲಿಪ್ಪನು ಆ ಮನುಷ್ಯನಿಗೆ, ನೀವು ಓದುತ್ತಿರುವುದು ನಿಮಗೆ ಅರ್ಥವಾಗುತ್ತಿದಿಯೋ ಎಂದು ಕೇಳಿದನು. ಆಗ ಐಥಿಯೋಪ್ಯದವನು, ಇಲ್ಲ ಅರ್ಥವಾಗುತ್ತಾಯಿಲ್ಲ ಎಂದು ಹೇಳಿದನು. ರಥದಲ್ಲಿ ಕುಳಿತುಕೊಂಡು ಹೋಗುತ್ತಾ ಅವರು ಓದುತ್ತಿರುವ ಪ್ರತಿಯೊಂದು ಯೇಸುವಿನ ಕುರಿತಾಗಿರುವ ಸಮಾಚಾರವನ್ನು ಆ ಮನುಷ್ಯನಿಗೆ ಹೇಳಬೇಕೆನ್ನುವ ಅವಕಾಶವನ್ನು ಹೊಂದಬೇಕೆಂದು ತುಂಬಾ ಕುತೂಹಲದಿಂದ ಇದ್ದನು. ಐಥಿಯೋಪ್ಯದವನು ಯೇಸುವಿನ ಕುರಿತಾಗಿ ಎಲ್ಲವನ್ನು ಕೇಳಿಸಿಕೊಂಡನಂತರ, ಯೇಸುವಿನಲ್ಲಿ ಭರವಸೆ ಇಟ್ಟನು. ಅವರು ನೀರಿರುವ ಸ್ಥಳಕ್ಕೆ ಬಂದಾಗ, "ನಾನು ಯಾಕೆ ದೀಕ್ಷಾಸ್ನಾನ ಹೊಂದಿಕೊಳ್ಳಬಾರದು?" ಎಂದು ಐಥಿಯೋಪ್ಯದವನು ಕೇಳಿದನು. ಫಿಲಿಪ್ಪನು ರಥದಿಂದ ಇಳಿದು, ಅವನಿಗೆ ದೀಕ್ಷಾಸ್ನಾನ ಕೊಟ್ಟನು. ಅವರು ನೀರಿನಿಂದ ಹೊರಗಡೆ ಬಂದಾಗ, ದೇವರು ಫಿಲಿಪ್ಪನನ್ನು ಆಚೆಗೆ ಕರೆದುಕೊಂಡು ಹೋದರು. ಐಥಿಯೋಪ್ಯದವನು ಕರ್ತನಲ್ಲಿ ಆನಂದಿಸುತ್ತಾ ತನ್ನ ರಥದಲ್ಲಿ ಪ್ರಯಾಣವನ್ನು ಮುಂದೆವರಿಸಿದನು. ಇದಾದನಂತರ ಫಿಲಿಪ್ಪನು ಇನ್ನೊಂದು ಪಟ್ಟಣದಲ್ಲಿ ಸುವಾರ್ತೆಯನ್ನು ಸಾರುತ್ತಾ ಕಾಣಿಸಿಕೊಂಡನು.

## ಅನ್ವಯ (ಪಾಠ 7)

ಯೇಸುವಿನ ಕುರಿತಾಗಿ ಹೇಳುವುದಕ್ಕೆ ಒಳ್ಳೆಯ ಅವಕಾಶಗಳಿಗಾಗಿ ನಾನು ಎದುರುನೋಡುತ್ತೇನೆ.

## ಕಂಠಪಾಠ ವಾಕ್ಯ (ಪಾಠ 7)

"ನೀವು ನಮಗೆ ಅತಿ ಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನೇ ಕೊಡುವುದಕ್ಕೆ ಸಂತೋಷಿಸುವವರಾದೆವು." - 1 ಥೆಸ್ಸ.2:8.

## ಮನೆಗೆಲಸ (ಪಾಠ 7)

ನಿಮ್ಮ ಸುತ್ತಮುತ್ತ ಇರುವ ಜನರೊಂದಿಗೆ ಯೇಸು ಕುರಿತಾಗಿ ಮಾತನಾಡುವುದಕ್ಕೆ ಒಂದು ಕ್ಲಿಕ್ ಮಾಡಿ. ಕೆಲವೊಂದು ದೊಡ್ಡ ದೊಡ್ಡ ಆರಂಭಕರು ಅನ್ಯರು ಕೇಳುವುದಕ್ಕೆ ಕ್ರೈಸ್ತ ಸಂಗೀತವನ್ನು ಹಾಕುತ್ತಾರೆ, ಬೈಬಲನ್ನು ಹಿಡಿದುಕೊಂಡು ಹೋಗುತ್ತಾರೆ, ಅದನ್ನು ಬಹಿರಂಗ ಸ್ಥಳಗಳಲ್ಲಿ ಓದುತ್ತಾರೆ. ತಮ್ಮ ಸಾಕ್ಷಿಗಳ ಕರಪತ್ರಗಳನ್ನು ಅನೇಕರಿಗೆ ಹಂಚುತ್ತಾರೆ.

## ದೇವರ ಡಿ.ಎನ್.ಎ. (ಪಾಠ ೭)

ಯೇಸುವಿನ ಕುರಿತಾಗಿ ಮತ್ತು ದೇವರ ಮಾರ್ಗಗಳ ಕುರಿತಾಗಿ ಇತರರಿಗೆ ಹೇಳುವುದಕ್ಕೆ ದೇವರು ತನ್ನ ಜನರನ್ನು ಕಳುಹಿಸುತ್ತಾರೆ.



# ವಿನೋದ ಸಮಯ! (ಪಾಠ ೭)

## ಆಟ (ಪಾಠ ೭)

ಓಟದ ಪಂದ್ಯ ಮತ್ತು ರಿಲೇ

ಸಮಾನ ಎತ್ತರವಿರುವ ಮಕ್ಕಳನ್ನು ಆಯ್ಕೆ ಮಾಡಿ, ಅವರಲ್ಲಿ ಇಬ್ಬರಿಬ್ಬರನ್ನು ಬೇರ್ಪಡಿಸಿರಿ. ಅವರು ಓಟದಲ್ಲಿ ಕೊನೆಯ ಗೆರೆಯ ವರೆಗು ಹೋಗಿ, ಹಿಂದಿರುಗಿ ಬರುತ್ತಾರೆ. ಅವರ ತಲೆಗಳ ಮಧ್ಯದಲ್ಲಿ ಒಂದು ಬಲೂನ್ ಕಟ್ಟಿಕೊಂಡು ಓಡುತ್ತಾರೆ. ಒಂದುವೇಳೆ ಆ ಬಲೂನ್ ಕೆಳಗೆ ಬಿದ್ದರೆ, ಅವರು ತಪ್ಪದೇ ಹಿಂದಕ್ಕೆ ಬಂದು ಆರಂಭಿಸಿದ ಗೆರೆಯಿಂದ ಮತ್ತೊಮ್ಮೆ ಪ್ರಯತ್ನಿಸುತ್ತಾರೆ.

## ಚರ್ಚೆ (ಪಾಠ ೭)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ಇತರ ಪುಸ್ತಕಗಳಲ್ಲಿ ಬೈಬಲ್ ಅಷ್ಟು ವಿಶೇಷವಾದ ಗ್ರಂಥ ಹೇಗಾಗುತ್ತದೆ?

   ಬೈಬಲ್ ಎನ್ನುವುದು ದೇವರಿಂದ ಬಂದಿರುವ ಸಂದೇಶವಾಗಿರುತ್ತದೆ. ನೀವು ಎಂದಾದರೂ ಒಂದೇ ಕಥೆಯನ್ನು ಅನೇಕಸಲ ಓದಿ, ನೀವು ಅದನ್ನು ಕಂಠಪಾಠ ಮಾಡಿಕೊಳ್ಳುವಷ್ಟು ಓದಿದ್ದೀರಾ? ಆ ರೀತಿ ನಾನು ಅನೇಕ ಪುಸ್ತಕಗಳನ್ನು ಕಲಿತುಕೊಂಡಿದ್ದೇನೆ. ಒಂದಾನೊಂದು ಸಮಯದಲ್ಲಿ, ನಾನು ರಚನಾಕಾರರ ಉದ್ದೇಶವನ್ನೂ ಅರ್ಥಮಾಡಿಕೊಳ್ಳುತ್ತಿದ್ದೆ. ನಾನು ಎಲ್ಲಿದ್ದೇನೆ, ನಾನು ಯಾವರೀತಿ ಆಲೋಚನೆ ಮಾಡುತ್ತಿದ್ದೇನೆ ಎನ್ನುವುದರ ಮೇಲೆ ಆಧಾರಪಟ್ಟು ಆಕಾರವಾನ್ನು ಮಾರ್ಪಡಿಸುವ ದೇವರಿಂದ ಬಂದ ಸಂದೇಶವೇ ಬೈಬಲ್. ನಾನು ಬೈಬಲ್ ಓದುವ ಪ್ರತಿಯೊಂದುಬಾರಿ ನನಗೆ ಒಂದು ಹೊಸ ಸಂದೇಶವನ್ನು ಕೊಡುತ್ತಾ ಇರುತ್ತದೆ. ಇದು ದೇವರಿಂದ ಬಂದ ಸಂದೇಶ, ಸಂಪೂರ್ಣ ಜೀವವುಳ್ಳದ್ದು ಮತ್ತು ನನಗೆ ಸಹಾಯ ಮಾಡುವುದಕ್ಕೆ ಸಿದ್ಧವಾದದ್ದು. (ಕೀರ್ತನೆ.19:7-11; ಯೋಹಾನ.20:30-31; ರೋಮಾ.1:16,17)

2. ಯಾಕೆ ನನಗೆ ಬೈಬಲ್ ಅಂದರೆ ಅಷ್ಟು ವಿಶೇಷ?


   ಬೈಬಲ್ ಎನ್ನುವುದು ನಿಮ್ಮ ಜೀವನಗಳಿಗೆ ರಹದಾರಿಯಂತೆ. ನೀವು ಹಾದು ಹೋಗುವ ಪ್ರತಿಯೊಂದು ಪರಿಸ್ಥಿತಿಯನ್ನು ಬೈಬಲ್.ನಲ್ಲಿ ಮುಂಚಿತವಾಗಿ ಹಾದು ಹೋಗಿರುವ ಕಥೆಯು ಬೈಬಲ್.ನಲ್ಲಿ ಇರುತ್ತದೆ. ಆ ಪರಿಸ್ಥಿತಿಯಲ್ಲಿ ಅವರು ಏನು ಮಾಡಿದರು ಮತ್ತು ದೇವರು ಯಾವರೀತಿ ಅವರಿಗೆ ಕೆಲಸ ಮಾಡಿದ್ದಾರೆ ಎನ್ನುವುದನ್ನು ಬೈಬಲ್.ನಲ್ಲಿ ಕಾಣಬಹುದು. ಯಾವುದಾದರೊಂದರ ವಿಷಯವು ಹೇಗೆ ಮುಕ್ತಾಯಗೊಳ್ಳುತ್ತದೆಯೆಂದು ನಮಗೆ ತಿಳಿಯದಿದ್ದರೆ, ಅವು ಹೇಗೆ ಕೆಲಸ ಮಾಡುತ್ತವೆ ಮತ್ತು ಅವು ಹೇಗೆ ಮುಕ್ತಾಯ ಹೊಂದುತ್ತವೆಯೆಂದು ಬೈಬಲ್ ನಮಗೆ ಬೋಧಿಸುತ್ತದೆ. ನನಗೆ ಭವಿಷ್ಯತ್ತು ಗೊತ್ತಾದರೆ ನಾನು ಮಾಡುತ್ತಿರುವುದನ್ನು ನಾನು ಮಾರ್ಪಡಿಸಿಕೊಳ್ಳಬಹುದಲ್ಲವೇ ಎನ್ನುವದರ ಕುರಿತಾಗಿ ನಾನು ಅನೇಕಸಲ ಆಲೋಚನೆ ಮಾಡುವುದರಲ್ಲಿ ಒಂದಾಗಿರುತ್ತದೆ. ಆದರೆ ಬೈಬಲ್ ನಮಗೆ ನಮ್ಮ ಭವಿಷ್ಯತ್ತು ವಿಷಯದಲ್ಲಿ ಕೆಲವೊಂದನ್ನು ತಿಳಿಯಪಡಿಸುತ್ತಾ ಇರುತ್ತದೆ, ಯಾಕಂದರೆ ದೇವರು ಯಾವಾಗಲೂ

ಕೆಲಸ ಮಾಡುವ ಹಾಗೆ, ಆತನು ಒಂದೇ ವಿಧಾನದಲ್ಲಿ ಜನರೊಂದಿಗೆ ಕೆಲಸ ಮಾಡುತ್ತಿದ್ದಾನೆ. ಕೀರ್ತನೆ.119:33-40, ಕೀರ್ತನೆ.119:65-68, ಕೀರ್ತನೆ.119:97-105.

3. ನಾನು ಯಾಕೆ ದೀಕ್ಷಾಸ್ನಾನ ತೆಗೆದುಕೊಳ್ಳಬೇಕು? ದೀಕ್ಷಾಸ್ನಾನ ತೆಗೆದುಕೊಳ್ಳುವ ಸಮಯವು ಯಾವಾಗ ಸರಿಯಾದದ್ದೆಂದು ನೀವು ಯೋಚನೆ ಮಾಡುತ್ತೀರಿ?


   ಅನೇಕ ಸಭೆಗಳು ಕೆಲವರಿಗೆ ವಿಭಿನ್ನವಾದ ಸಮಯಗಳಲ್ಲಿ ಮತ್ತು ವಿಭಿನ್ನವಾದ ವಿಧಾನಗಳಲ್ಲಿ ದೀಕ್ಷಾಸ್ನಾನ ಕೊಡುತ್ತಿರುತ್ತಾರೆ. ನಿಮ್ಮ ಸಭೆಯು ದೀಕ್ಷಾಸ್ನಾನ ಕೊಡುವುದಕ್ಕೆ ಎಂಥಹ ವಿಧಾನವನ್ನು ಅನುಸರಿಸುತ್ತಿದೆ? ನೀವು ಇನ್ನು ದೀಕ್ಷಾಸ್ನಾನ ತೆಗೆದುಕೊಂಡಿಲ್ಲವೆಂದರೆ: ಯಾವ ವಿಧಾನಗಳಲ್ಲಿ ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕೆ ನೀವು ಸಿದ್ಧರಾಗಿದ್ದೀರಿ? ನೀವು ಯಾವ ವಿಧಾನಗಳಲ್ಲಿ ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕೆ ನೀವು ಸಿದ್ಧರಾಗಿಲ್ಲ? ನೀವು ಒಂದುವೇಳೆ ದೀಕ್ಷಾಸ್ನಾನ ಪಡೆದುಕೊಂಡಿದ್ದರೆ: ಈ ದೀಕ್ಷಾಸ್ನಾನದ ಕುರಿತಾಗಿ ನೀವು ಮಾರ್ಪಾಟು ಮಾಡಿಕೊಳ್ಳಬೇಕೆಂದಿದ್ದರೆ, ನಿಮ್ಮ ದೀಕ್ಷಾಸ್ನಾನಕ್ಕೆ ನೀವು ಹಿಂದಿರುಗಿ ಬರುವುದಕ್ಕೆ ನೀವು ಯಾವಾಗ ಆಲೋಚನೆ ಮಾಡುವಿರಿ? ನೀವು ದೀಕ್ಷಾಸ್ನಾನ ತೆಗೆದುಕೊಳ್ಳುವಾಗ ಸಂತೋಷವಾಗಿದ್ದೀರೋ ಅಥವಾ ನೀವು ತುಂಬಾ ಹೆಚ್ಚಿನ ಕಾಲದಿಂದ ಎದುರು ನೋಡುತ್ತಿರುವವರಾಗಿದ್ದೀರೋ  ಅಥವಾ ತುಂಬಾ ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ನಟನೆ ಮಾಡಿದ್ದೀರೋ?

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು  (ಪಾಠ 7)









## ಲೂಕರವರ ಪ್ರಯೋಗ (ಪಾಠ 7)

ಕುದುರೆ ಕಾಲಿನ ಲಾಳಗಳು

ಒಂದು ಊರಲ್ಲಿ ಒಬ್ಬ ಮನುಷ್ಯನಿದ್ದನು. ಅವನು ಅವನ ಕುದುರೆ ಕಾಲುಗಳಿಗೆ ಲಾಳಗಳನ್ನು ಕೊಂಡುಕೊಳ್ಳುವುದಕ್ಕೆ ಐವತ್ತು ರೂಪಾಯಿಗಳನ್ನು ವೆಚ್ಚಗೊಳಿಸಲು ಇಷ್ಟಪಡುತ್ತಿರಲಿಲ್ಲ, ಆದರೆ ಅವನು ಹಣವನ್ನು ಉಳಿತಾಯ ಮಾಡುತ್ತಿದ್ದನು. ಅವನು ಒಂದು ಕುದುರೆ ಕಾಲಿನ ಲಾಳವನ್ನು ಕೊಂಡುಕೊಳ್ಳುವುದಕ್ಕೆ ಒಂದು ರೂಪಾಯಿಯನ್ನು ಖರ್ಚುಮಾಡುತ್ತಿದ್ದ ಮತ್ತು ಇನ್ನೊಂದನ್ನು ತೆಗೆದುಕೊಳ್ಳುವದಕ್ಕೆ 2 ರೂಪಾಯಿ ಕೊಡುತ್ತಿದ್ದ. ಮತ್ತೇ ಇನ್ನೊಂದನ್ನು ತೆಗೆದುಕೊಳ್ಳುವುದಕ್ಕೆ 4 ರೂಪಾಯಿ ಕೊಡುತ್ತಿದ್ದ, ಈ ರೀತಿ 20 ಲಾಳಗಳಗೋಸ್ಕರ ಒಂದು ಲಾಳದ ಹಣವನ್ನು ಎರಡರಷ್ಟು ಜಾಸ್ತಿ ಮಾಡುತ್ತಿದ್ದ.  ಮಿಠಾಯಿಗಳನ್ನು ಮತ್ತು ತಿಂಡಿ ತಿನಿಸುಗಳನ್ನು ಉಪಯೋಗಿಸುತ್ತಾ, ಆ ಮನುಷ್ಯನು ಇಪ್ಪತ್ತು ಲಾಳಗಳಿಗೆ ಎಷ್ಟು ಹಣವನ್ನು ಕೊಡಬೇಕಾಗಿತ್ತು. ಕೊನೆಯ ಉತ್ತರವೇನೆಂದರೆ 524,288 ನಾಣ್ಯಗಳು! ಅಂದರೆ 5,242,88 ರೂಪಾಯಿಗಳು (ಅಥವಾ ಡಾಲರ್.ಗಳು)!

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 8 ]--



## ಸೂಚನೆಗಳು! (ಕ್ಲೂಸ್) (ಪಾಠ 8)

### 1 ಸೂಚನೆ #1 ಅಂಶ (ಪಾಠ 8)

ಅವಿಧೇಯ ತಂದೆತಾಯಿಗಳ ಕೇಸ್

### 2 ಸೂಚನೆ #2 ನಾಟಕ (ಪಾಠ 8)

ಲೆಫ್ಟಿನೆಂಟ್ : ನಿನಲ್ಲಿದ್ದೀಯಾ, ನಾನು ಅನೇಕ ಸ್ಥಳಗಳಲ್ಲಿ ಹುಡುಕಾಡುತ್ತಿದ್ದೇನೆ....

ಕಮಾಂಡರ್ : ಷ್.... ನಿಶಬ್ದವಾಗಿರು.



ಲೆಫ್ಟಿನೆಂಟ್ : ಸರ್?

ಕಮಾಂಡರ್ : ಷ್... ಕೇಳು. ನೀನು ಅದನ್ನು ಕೇಳಿಸಿಕೊಳ್ಳುತ್ತಿದ್ದೀಯಾ?

ಲೆಫ್ಟಿನೆಂಟ್ : ಏನು?

ಕಮಾಂಡರ್ : [ಬೆರಳನ್ನು ಹಿಡಿದುಕೊಳ್ಳುತ್ತಾ] ಅಲ್ಲೇ, ಶಿಶುವು ಅಳುತ್ತಾ ಇದೆ. ಸುಮಾರು 3 ತಿಂಗಳಿನಿಂದ ಈ ಗಂಡು ಶಿಶುವುಗಾಗಿ ನಾನು ನೋಡುತ್ತಿದ್ದೇನೆ.

ಲೆಫ್ಟಿನೆಂಟ್ : ನೀವು ಗಂಡು ಶಿಶುವುಗಾಗಿ ನೋಡುತ್ತಿದ್ದೀರಾ? ಇದು ಹೆಣ್ಣು ಶಿಶು ಅಲ್ಲವೆಂದು ನಿಮಗೆ ಹೇಗೆ ಗೊತ್ತು?

ಕಮಾಂಡರ್ : ಇವನು ನನ್ನ ಚಿಕ್ಕವನಂತೆಯೇ ಕಿರುಚಿದ್ದಾನೆ.

ಲೆಫ್ಟಿನೆಂಟ್ : ಅವನು ಎಲ್ಲಿದ್ದಾನೆಂದು ನೀವು ಆಲೋಚನೆ ಮಾಡುತ್ತಿದ್ದೀರಿ?

ಕಮಾಂಡರ್ : ಮುಂಚೆ ನಾನು ಅವನ ಸ್ವರವನ್ನು ಕೇಳಿಸಿಕೊಂಡಿದ್ದೇನೆ, ಆದರೆ ಸಹಜವಾಗಿ ಪೊದೆಗಳ ಮಧ್ಯೆದಲ್ಲಿ ನದಿಯ ಮೇಲೆ ಇರಬಹುದು.

ಲೆಫ್ಟಿನೆಂಟ್ : ಅವನಿಗಾಗಿ ನೀವೇನಾದರೂ ಹುಡುಕಿದ್ದೀರೋ?

ಕಮಾಂಡರ್ : ಹೌದು, ಆದರೆ ಪ್ರತಿಯೊಂದುಬಾರಿ ನಾನು ಹತ್ತಿರಕ್ಕೆ ಹೋಗುತ್ತೇನೆ, ಆದರೆ ಅವನ ಸ್ವರವನ್ನು ಮತ್ತೇ ಕೇಳಿಸುವುದೇ ಇಲ್ಲ. ಆದರೆ ಅವನನ್ನು ಯಾರೋ ಬಚ್ಚಿಡುತ್ತಿದ್ದಾರೆಂದು ಕಾಣಿಸುತ್ತಿದೆ.

ಲೆಫ್ಟಿನೆಂಟ್ : ಸರಿ, ಈ ಬಾರಿ ನಾವು ಆ ಶಿಶುವನ್ನು ತಪ್ಪದೇ ಹಿಡಿದುಕೊಳ್ಳುತ್ತೇನೆ.

ಕಮಾಂಡರ್ : ನಾವು ನದಿಯ ಸಮೀಪಕ್ಕೆ ಹೋಗೋಣ, ಮತ್ತು ಒಂದುವೇಳೆ ಈ ಪೊದೆಗಳಲ್ಲಿ ಅವನನ್ನು ಕಂಡುಕೊಂಡರೆ ನಾವು ಹಿಡಿದುಕೊಳ್ಳಬಹುದು.

ಲೆಫ್ಟಿನೆಂಟ್ ಮತ್ತು ಕಮಾಂಡರ್ : [ಅವರೇ ಒಂದು ನದಿಯಂತೆ ಮಕ್ಕಳ ಬಳಿಗೆ ತುಂಬಾ ಹತ್ತಿರವಾಗಿ ಹೋದರು]

ಕಮಾಂಡರ್ : ಓಕೇ, ನಾನೀಗ ಅವನ ಸ್ವರವನ್ನು ಚೆನ್ನಾಗಿ ಕೇಳಿಸಿಕೊಳ್ಳುತ್ತಿದ್ದೇನೆ.

ಲೆಫ್ಟಿನೆಂಟ್ : ಅಲ್ಲಿ, ಪೊದೆಗಳ ಮಧ್ಯೆದಲ್ಲಿ.

ಕಮಾಂಡರ್ : ಓಕೇ, ನೀನು ಆ ಮಾರ್ಗದಲ್ಲಿ ಹೋಗು, ನಾನು ಈ ಮಾರ್ಗದಲ್ಲಿ ಹೋಗುತ್ತೇನೆ ಮತ್ತು ನಾವು ಆ ಕಳ್ಳಸಾಗಾಣಗಾರ ಶಿಶುವನ್ನು ಹಿಡಿದುಕೊಂಡು, ನಮಗೆ ಆಜ್ಞಾಪಿಸಿದಂತೆ ನೈಲ್ ನದಿಯಲ್ಲಿ ಆ ಶಿಶುವನ್ನು ಎಸೆದು ಬಿಡೋಣ.

ಲೆಫ್ಟಿನೆಂಟ್ ಮತ್ತು ಕಮಾಂಡರ್ : [ವಿವಿಧ ಮಾರ್ಗಗಳಲ್ಲಿ ಹುಡುಕುತ್ತಿದ್ದಾರೆ]

ಲೆಫ್ಟಿನೆಂಟ್ : ಹೂಮ್, ಸರ್, ನಾವು ಇನ್ನೊಂದು ದಿನ ಪ್ರಯತ್ನ ಮಾಡಿದ್ದರೆ ಚೆನ್ನಾಗಿರುತ್ತಿತ್ತು.

ಕಮಾಂಡರ್ : ತಮಾಷೆ ಮಾಡಬೇಡ, ನಾವೀಗ ಅವನನ್ನು ಹಿಡಿಯುತ್ತೇವೆ.

ಕಮಾಂಡರ್ : [ಜಿಗಿದು] ಅಹಹ ಹ.. ನಾವೀಗ ನಿನ್ನನ್ನು ಹಿಡಿದುಕೊಂಡಿದ್ದೇವೆ! ಶಿಶುವನ್ನು ಸಿಕ್ಕನು!

ಕಮಾಂಡರ್ : [ನಾಚು ಎಲ್ಲಾ ತನ್ನ ಕಣ್ಣುಗಳನ್ನು ಆವರಿಸಿತ್ತು, ] ನನ್ನನ್ನು ಕ್ಷಮಿಸು ಪ್ರಭು. ನೀವು ಇಲ್ಲಿ ಈ ದಿನದಂದು ಈಜುತ್ತೀರೆಂದು ನನಗೆ ಗೊತ್ತಿಲ್ಲ. ನಾನು ಇಷ್ಟು ದಿನಗಳ ವರೆಗೆ ಒಬ್ಬ ಇಬ್ರಿ ದಾಸಿ ಮಗನನ್ನು ಹಿಡಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದೆನಾ.

## 3 ಸೂಚನೆ #3 ವಸ್ತು (ಪಾಠ 8)

ತರಗತಿಗೆ ತೆಗೆದುಕೊಂಡು ಬನ್ನಿರಿ : ಬುಟ್ಟಿ




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 8)

ಈ ಕಾಲದ ಬುಟ್ಟಿಯನ್ನು ನೇಯುವ ಚಿತ್ರ ನೀವಿಲ್ಲಿ ನೋಡಬಹುದು, ಇದು ಮೋಶೆಗಾಗಿ ನೇಯ್ದಿರುವ ಬುಟ್ಟಿಯಂತೆ ಕಾಣಿಸುತ್ತದೆ.



## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 8)

ರಹಸ್ಯ : ಸುತ್ತಮುತ್ತ ಪೊದೆಗಳಿಂದ ಆವರಿಸಿರುವ ನೈಲ್ ನದಿಯು ಮತ್ತು ರಾಜಕುಮಾರನ ಸುಗಂಧ ಶಾಂಪೂ ಬಾಟೆಲ್.ಗಳು

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 8)

## ಬೈಬಲ್ ಕಥೆ (ಪಾಠ 8)

**ಮೋಶೆ ಜನನ**

**ಬೈಬಲ್ ವಾಕ್ಯಭಾಗ : ವಿಮೋ.2:1-10**



ಇಸ್ರಾಯೇಲ್ಯರ ಜನಸಂಖ್ಯೆ ತುಂಬಾ ವೇಗವಾಗಿ ಬೆಳೆಯುತ್ತಿರುವದನ್ನು ಫರೋಹನು ಗಮನಿಸುತ್ತಿದ್ದನು. ಒಂದುವೇಳೆ ಅವರು ಹೆಚ್ಚು ಜನಸಂಖ್ಯೆಯಾದರೂ, ಅವಾಗ ಅವರೊಂದಿಗೆ ಯುದ್ಧ ಮಾಡಬೇಕೆಂದಿದ್ದರೂ ನಾವು ಸೋತು ಹೋಗುತ್ತೇವೆಂದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಅದಕ್ಕಾಗಿ ಅವನು ಇಬ್ರಿಯರ ಕೂಸುಗಳು ಇನ್ನು ಮೇಲೆ ಬೆಳೆಯಬಾರದೆಂದು ನಿರ್ಣಯ ಮಾಡಿಕೊಂಡನು. ಇದರಿಂದ ಅವನು ಸೂಲಗಿತ್ತಿಯರೊಂದಿಗೆ ಮಾತನಾಡಿ ಅವರಿಗೆ - ನೀವು ಇಬ್ರಿಯ ಹೆಂಗಸರು ಹೆರಿಗೆ ಮಾಡಿಸುವಾಗ ಅವರು ಹೆರುವದು ಗಂಡು ಮಗನಾಗಿದ್ದರೆ ನೀವು ಕೊಲ್ಲಬೇಕು ಎಂದು ಆಜ್ಞಾಪಿಸಿದನು. ಆದರೆ ಆ ಸೂಲಗಿತ್ತಿಯರು ಯಾವ ಶಿಶುವಿಗೆ ಒಂದು ಚೂರು ಹಾನಿ ಮಾಡಿರಲಿಲ್ಲ. ಫರೋಹನ ಆಜ್ಞೆಯನ್ನು ಅನುಸರಿಸಿದರೆ ದೇವರ ಕೋಪವು ಅವರ ಮೇಲೆ ಬರುತ್ತದೆಯೆಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಅವರ ಸಹಾಯ ವಿಲ್ಲದೆ ಇಬ್ರಿ ಸ್ತ್ರೀಯರು ಹೆರಿಗೆ ಆಗುತ್ತಿದ್ದಾರೆಂದು ಸೂಲಗಿತ್ತಿಯರು ಫರೋಹನಿಗೆ ಸುಳ್ಳು ಹೇಳಿದರು. ಇದರಿಂದ ಫರೋಹನು ಭಯಂಕರವಾದ ನಿರ್ಣಯವನ್ನು ತೆಗೆದುಕೊಳ್ಳುವ ಪರಿಸ್ಥಿತಿ ಬಂದಿತ್ತು. ಅವನು ಗಂಡು ಮಕ್ಕಳೆಲ್ಲರನ್ನು ನೈಲ್ ನದಿಯೊಳಗೆ ಬಿಸಾಡಿರಿ ಎಂದು ಅಪ್ಪಣೆ ಕೊಟ್ಟನು. ಆ ಸಮಯದಲ್ಲೇ ಒಬ್ಬ ಸ್ತ್ರೀಯಳು ಹೆರಿಗೆಯಾದಳು ಮತ್ತು ತನ್ನ ಮಗು ಎಷ್ಟು ಸುಂದರವಾಗಿದ್ದಾನೆಂದು ನೋಡಿದಳು. ಆಕೆ ಆ ಮಗುವನ್ನು ತುಂಬಾ ಹೆಚ್ಚಾಗಿ ಪ್ರೀತಿ ಮಾಡಿದ್ದರಿಂದ, ಆಕೆ ಆ ಕೂಸನ್ನು ಆ ನದಿಯೊಳಗೆ ಬಿಸಾಡಲಿಲ್ಲ. ಸುಮಾರು ಮೂರು ತಿಂಗಳವರೆಗು ಆಕೆ ಆ ಮಗುವನ್ನು ಬಚ್ಚಿಟ್ಟಿದ್ದಳು. ಒಂದು ದಿನ ಆಕೆ ಆ ಮಗುವನ್ನು ಬಚ್ಚಿಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿದುಕೊಂಡಾಗ, ಆಕೆ ತನ್ನ ಮಗುವನ್ನು ಒಂದು ಬುಟ್ಟಿಯಲ್ಲಿ ಬಚ್ಚಿಟ್ಟು, ಆ ನದಿಯ ಮೇಲೆ ತೇಲುತ್ತಾ ಹೋಗುವಂತೆ ಮಾಡಿ ಬಿಟ್ಟಿದ್ದಳು. ಫರೋಹನ ಮಗಳು ಆ ಬುಟ್ಟಿಯನ್ನು ನೋಡಿ, ತನ್ನ ಕಡೆಗೆ ಎಳೆದುಕೊಂಡಳು. ಆಕೆ ಅದನ್ನು ತೆರೆದಾಗ, ಆಕೆ ಅಳುತ್ತಿರುವ ಇಬ್ರಿ ಶಿಶುವನ್ನು ಕಂಡಳು. ಈ ಸಮಯದಲ್ಲೇ ಆ ಶಿಶುವಿನ ಅಕ್ಕ ಆ ಬುಟ್ಟಿಯನ್ನು ಎಲ್ಲಿಗೆ ಹೋಗುತ್ತಿದೆಯೆಂದು ನೋಡುತ್ತಾ ಇದ್ದಳು. ಆ ಶಿಶುವಿನ ಅಕ್ಕ ಆ ಫರೋಹನ ಮಗಳನ್ನು ನಿಮಗೆ ಈ ಶಿಶುವನ್ನು ನೋಡಿಕೊಳ್ಳುವುದಕ್ಕೆ ಆಯಾ ಬೇಕಾ ಎಂದು ಕೇಳಿದಳು. ಆಗ ಫರೋಹನ ಮಗಳು ಹೌದು ಎಂದು ಹೇಳಿದಾಗ, ಅವಳು ಹೋಗಿ ಆ ಶಿಶುವಿನ ತಾಯಿಯನ್ನೇ ಕರೆದುಕೊಂಡು ಬಂದಳು. ಆ ಕ್ಷಣದಿಂದ ಆ ಶಿಶುವಿನ ತಾಯಿಯು ಫರೋಹನ ಮಗಳಿಗೆ ಆ ಮಗುವು ಸ್ವಂತವಾಗುವವರೆಗೂ ಆ ಕೂಸು ಬಳಿ ಇದ್ದುಕೊಂಡಿದ್ದಳು. ಫರೋಹನ ಮಗಳು ಆ ಕೂಸುಗೆ ಮೋಶೆ ಎಂದು ಹೆಸರಿಟ್ಟಳು.

## ಅನ್ವಯ (ಪಾಠ 8)

ದೇವರು ನನಗಾಗಿ ಒಂದು ಪ್ರಣಾಳಿಕೆಯನ್ನು ಇಟ್ಟುಕೊಂಡಿದ್ದಾನೆ.

## ಕಂಠಪಾಠ ವಾಕ್ಯ (ಪಾಠ 8)

"ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ." - ಯೆರೆಮೀಯಾ.29:11.

### ಮನೆಗೆಲಸ (ಪಾಠ 8)

ನಿಮ್ಮ ಕುಟುಂಬದವರು ನಿಮ್ಮ ಭವಿಷ್ಯತ್ತು ಏನಾಗಿರಬಹುದೆಂದು ಯೋಚನೆ ಮಾಡುತ್ತಿದ್ದಾರೆ ಎನ್ನುವುದನ್ನು ಅವರಿಗೆ ಕೇಳಿ ತಿಳಿದುಕೊಳ್ಳಿರಿ. ಆಗ ಈ ಎಲ್ಲಾ ಸಲಹೆಗಳನ್ನು ಪ್ರಾರ್ಥನೆಯಲ್ಲಿ ದೇವರಿಗೆ ಹೇಳಿರಿ ಮತ್ತು ಇದು ದೇವರಿಗೆ ಇಷ್ಟವೋ ಇಲ್ಲವೋ ಎಂದು ಕೇಳಿರಿ ಅಥವಾ ನಿಮಗಾಗಿ ಆತನು ದೊಡ್ಡ ಪ್ರಣಾಳಿಕೆಗಳನ್ನು ಇಟ್ಟುಕೊಂಡಿದ್ದರೆ ಆ ದಾರಿಯಲ್ಲಿ ನಡೆಸು ಎಂದು ಬೇಡಿಕೊಳ್ಳಿರಿ.

### ದೇವರ ಡಿ.ಎನ್.ಎ. (ಪಾಠ 8)




ದೇವರ ತಕ್ಕ ಸಮಯದಲ್ಲಿ ಒಬ್ಬ ವಿಮೋಚಕನನ್ನು ಕಳುಹಿಸುತ್ತಾರೆ.



## ವಿನೋದ ಸಮಯ! (ಪಾಠ 8)

### ಆಟ (ಪಾಠ 8)

ಬುಟ್ಟಿಯನ್ನು ಬಿಡಿರಿ

ವಿದ್ಯಾರ್ಥಿಗಳೆಲ್ಲರು ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತಾರೆ. ಇಲ್ಲಿ ಗುರಿಯೇನಂದರೆ ಬುಟ್ಟಿಯನ್ನು ಹಿಡಿದುಕೊಳ್ಳುವುದಲ್ಲ, ಆದರೆ ಆ ಬುಟ್ಟಿಯನ್ನು ತುಂಬಾ ಶೀಘ್ರವಾಗಿ ಒಬ್ಬರಾದ ಮೇಲೆ ಒಬ್ಬರಿಗೆ ಕೊಡಬೇಕು. ಯಾರಾದರೊಬ್ಬರು ಬುಟ್ಟಿಯೊಂದಿಗೆ ಆರಂಭಿಸುತ್ತಾರೆ, ಅಲ್ಲಿರುವ ಉಪಾಧ್ಯಾಯರು "ವಿಷಯ ಏನಂದರೆ ................ ಎಂದು ಹೇಳಿ ಆರಂಭಿಸುತ್ತಾರೆ. ಆಗ ಬುಟ್ಟಿಯನ್ನು ಇನ್ನೊಬ್ಬರಿಗೆ ಕೊಡಬೇಕು" ಒಬ್ಬ ವಿದ್ಯಾರ್ಥಿ ತನ್ನ ಬಲ ಬದಿಗೆ ಕುಂತಿರುವವರಿಗೆ ಕೊಡುತ್ತಾನೆ, ಈ ರೀತಿ ಒಬ್ಬರಾದ ಮೇಲೆ ಒಬ್ಬರಿಗೆ ಆ ಬುಟ್ಟಿಯನ್ನು ಕೊಡುತ್ತಾ ಇರಬೇಕು. ಈ ಸಮಯದಲ್ಲೇ ವಿದ್ಯಾರ್ಥಿ ತನಗೆ ಕೊಟ್ಟಿರುವ ಕೆಲಸದಲ್ಲಿ ತಪ್ಪದೇ 5 ವಿಷಯಗಳ ಹೆಸರುಗಳನ್ನು ಹೇಳಲೇಬೇಕು. ಆ ಬುಟ್ಟಿಯು ತನ್ನ ಬಳಿಗೆ ಬರುವ ಸಮಯದೊಳಗೆ ಒಂದುವೇಳೆ 5 ಹೆಸರುಗಳನ್ನು ಹೇಳದಿದ್ದರೆ, ಅವನು ಇನ್ನು ಅದನ್ನು ಆಡಬಾರದು. ಒಂದುವೇಳೆ ಅವನು 5 ಪದಗಳನ್ನು ಹೇಳಿದರೆ, ಆ ಸಮಯದಲ್ಲಿ ಯಾರ ಬಳಿ ಆ ಬುಟ್ಟಿ ಇರುತ್ತದೋ, ಅವನಿಂದ ಹೊಸ ಪ್ರಶ್ನೆ ಆರಂಭವಾಗುತ್ತದೆ. (ಒಂದುವೇಳೆ ಇದು ಕಷ್ಟವಾಗುತ್ತಿದ್ದರೆ, ವಿದ್ಯಾರ್ಥಿಗಳು 5 ಪದಗಳಿಗೆ ಬದಲಾಗಿ 3 ಪದಗಳನ್ನು ಆಯ್ಕೆ ಮಾಡಬಹುದು.) ಕೆಲವರು ಈ ಅಂಶಗಳನ್ನು ಸಲಹೆ ನೀಡಿದ್ದಾರೆ : ನೋಹನ ಕಥೆ, ಯೇಸು ಜನನದ ಕಥೆ, ಮುಂದಿನ ಪಾಠಗಳನ್ನು ಪುನಃಪರಿಶೀಲನೆ ಮಾಡಿಕೊಳ್ಳುವುದು, ರೆಸ್ಟಾರೆಂಟ್.ಗಳು, ಕ್ರೀಡಾ ತಂಡಗಳು, ತರಕಾರಿಗಳು, ಟಿವಿ ಕಾರ್ಯಕ್ರಮಗಳು, ಸಿಹಿ ತಿನಿಸುಗಳು, ಸಸಿಗಳು, ನೀರು ಪ್ರಾಣಿಗಳು, ಪಟ್ಟಣಗಳು, ಇನ್ನೂ ಇತ್ಯಾದಿ.

### ಚರ್ಚೆ (ಪಾಠ 8)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ದೇವರು ದೀರ್ಘಶಾಂತಿಯಿಂದ ಇರಲು ಕಾರಣವೇನು? ಪ್ರಾರ್ಥನೆಯಲ್ಲಿ ಸಹನೆಯಿಂದ ಇರುವುದಕ್ಕೂ ಮತ್ತು ದೇವರ ಬಳಿ ಕಿರಿಕಿರಿ ಮಾಡುವುದಕ್ಕೂ ಮಧ್ಯೆ ವ್ಯತ್ಯಾಸವೇನು?



ಕಿರಿಕಿರಿ ಎನ್ನುವುದು ಆತನನ್ನೇ ಮೋಸಗೊಳಿಸುವುದು. ಪ್ರಾರ್ಥನೆಯಲ್ಲಿ ಸಹನೆಯಿಂದ ಇರುವುದೆಂದರೆ ಅದರಲ್ಲಿ ಯಾವ ಮೋಸ ಮಾಡದೇ ಇರುವುದು. ಕೆಲವೊಂದುಸಲ ನಾವು ಪ್ರಾರ್ಥನೆಗೆ ಉತ್ತರವನ್ನು ಪಡೆದಿರುತ್ತೇವೆ ಮತ್ತು ಅದು ಆರಂಭವಾಗಿರುತ್ತದೆ, ಆದರೆ ನಾವು ಅದನ್ನು ನೋಡಿರುವುದಿಲ್ಲ. ಪ್ರಾರ್ಥನೆಯಲ್ಲಿ ನಾವು ಸಹನೆಯಿಂದ ಇರುವುದನ್ನು ಕಲಿತುಕೊಳ್ಳಬೇಕು. (ಕೀರ್ತನೆ.40:1-3, ಕೀರ್ತನೆ.69:1-13; ಜ್ಞಾನೋ.1:28-31; ದಾನಿ.10:10-13)


2. ನಾನು ಯಾಕೆ ದೇವರನ್ನು ನಂಬಬೇಕು? ನಮಗೆ ಬೇಕಾದವುಗಳೆಲ್ಲ ದೇವರು ಮಾಡುತ್ತಾರೆಂದು ನಾವು ನಂಬಬಹುದೇ?


ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ದೇವರು ನಂಬಿಗಸ್ತನಾಗಿರುತ್ತಾನೆ, ಆತನು ಹೇಳಿದ್ದನ್ನು ತಪ್ಪದೇ ಮಾಡುವವನಾಗಿದ್ದಾನೆ. ದೇವರು ಮಾಡುತ್ತಾನೆಂದು ಕೆಲವರು ನಿರೀಕ್ಷೆ ಇಟ್ಟುಕೊಂಡಿರುವವರೊಂದಿಗೆ ದೇವರು ಹೇಳಿದ್ದನ್ನು ಆತನು ಮಾಡುತ್ತಾನೆ, ಆದರೆ ಕೆಲವರು ಗೊಂದಲದಲ್ಲಿ ಇರುವವರನ್ನು ನೀವು ನೋಡಿದ್ದೀರೋ? ದೇವರು ತನ್ನ ವಾಕ್ಯದಲ್ಲಿ ಹೇಳಿರುವ ಪ್ರತಿಯೊಂದನ್ನು ಮಾಡುವುದಕ್ಕೆ ನಾನು ಆತನ ಮೇಲೆ ಆತುಕೊಳ್ಳುತ್ತೇನೆ. (1 ಅರಸರು.18:1-40).


3. ಒಂದುವೇಳೆ ಯಾರಾದರು ನನ್ನನ್ನು ದ್ವೇಷಿಸಿದರೆ?

ಕೆಲವೊಂದುಸಲ ನಾವು ತುಂಬಾ ಧೈರ್ಯದಿಂದ ಇರಬೇಕು, ದ್ವೇಷಿಸುವವರನ್ನು ನಾವು ಎದುರುಗೊಳ್ಳಬೇಕು. ಕೆಲವೊಂದುಸಲ ನಾವು ಇನ್ನೊಂದು ಕೆನ್ನೆಯನ್ನು ತೋರಿಸಿ, ಅವರಿಗೆ ಪ್ರೀತಿ ತೋರಿಸಬೇಕು. ಈ ಎರಡರ ನಡುವೆ ಇರುವ ವ್ಯತ್ಯಾಸವನ್ನು ನಿಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡಿರಿ. ಯೇಸುವನ್ನು ಜನರು ದ್ವೇಷ ಮಾಡಿದಾಗ, ಆತನು ಅವರನ್ನು ಸರ್ಪ ಜಾತಿಯವರೇ ಎಂದು ಕರೆದನು. ದೀಕ್ಷಾಸ್ನಾನ ಕೊಡುವ ಯೋಹಾನನಿಗೆ ಶತ್ರುಗಳಿದ್ದರು, ಆತನು ಅವರನ್ನು ಸರ್ಪ ಜಾತಿಯವರೇ ಎಂದು ಕರೆದನು. ಈ ರೀತಿ ಮಾಡಿದಾಗ ತನ್ನ ಶತ್ರುಗಳನ್ನು ಪ್ರೀತಿ ಮಾಡುವದಾಗುತ್ತದೋ? ನಿಮ್ಮನ್ನು ದ್ವೇಷ ಮಾಡುವವರನ್ನು ಪ್ರೀತಿ ಮಾಡುವುದಕ್ಕೆ ಸಾಧ್ಯವೋ? ನಿಮ್ಮ ಶತ್ರುಗಳನ್ನು ಪ್ರೀತಿಸುವುದೆನ್ನುವುದು ಯಾವರೀತಿ ಕಾಣಿಸಿಕೊಳ್ಳುತ್ತದೆ? (ವಿಮೋ.23:4,5; ಕೀರ್ತನೆ.18:37-40, 27:1-5; ಜ್ಞಾನೋ.24:17-18, 25:21; ಮತ್ತಾಯ.5:43-47)

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 8)





## ಲೂಕಾಸ್ ರವರ ಪ್ರಯೋಗ (ಪಾಠ 8)

### ಬಲೂನ್ ಸ್ಟ್ರಿಂಗ್ ರಾಕೆಟ್

ಕುಡಿಯುವ ಸ್ಟ್ರಾ 1 - ಇಂಚ್ ತುಂಡನ್ನು ತಯಾರಿಸಿರಿ. ಆ ಸ್ಟ್ರಾನಲ್ಲಿ ಎರಡು ಮೀಟರ್ ತಂತಿಯನ್ನು ಹಾಕಿರಿ, ಈಗ ಆ ತಂತಿಯ ಎರಡು ಕಡೆಗೆ ಗಟ್ಟಿಯಾಗಿ ಹಿಡಿದುಕೊಳ್ಳಿರಿ. ಈಗ ಬಲೂನ್ ಊದಿ ಅದಕ್ಕೆ ಗಂಟು ಹಾಕದಿರಿ. ಈಗ ಸ್ಟ್ರಾ ತುಂಡನ್ನು ತೆಗೆದುಕೊಂಡು ಒಂದು ಟೇಪ್.ನೊಂದಿಗೆ ಬಲೂನ್.ಗೆ ಅಂಟಿಸಿರಿ. ಈಗ ಬಲೂನ್. ಗಾಳಿಯಲ್ಲಿ ಹಾರಲು ಬಿಡಿರಿ, ಗಾಳಿ ಒಳಗಡೆಯಿಂದ ಬರುವಷ್ಟು, ಬಲೂನ್ ಆ ತಂತಿಯೊಂದಿಗೆ ಗಾಳಿಯಲ್ಲಿ ಹಾರುತ್ತಾ ಮುಂದೂಡುತ್ತದೆ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ ೯ ]--

## ಸೂಚನೆಗಳು! (ಕ್ಲೂಸ್) (ಪಾಠ ೯)

### ಸೂಚನೆ #1 ಅಂಶ (ಪಾಠ ೯)

ಸಿಕ್ಕಾಪಟ್ಟೆ ಅಲೆದಾಡದ ಮಾಬ್ ಕೇಸ್

### ಸೂಚನೆ #2 ನಾಟಕ (ಪಾಠ ೯)

ಪೊಲೀಸ್: ನಮಸ್ಕಾರ ಸರ್, ನನ್ನನ್ನು ಇಲ್ಲಿಗೆ ಕರೆದಿರುವೆ ಎಂದು ತಿಳಿದುಕೊಳ್ಳಬಹುದೇ?

ನಡೆಯುವವನು: ನಮಸ್ಕಾರ, ಹೌದು, ಇಲ್ಲಿಗೆ ಬಂದಿದ್ದಕ್ಕಾಗಿ ನಿಮಗೆ ವಂದನೆಗಳು. ಬೀಚಿನ ಬಳಿ ನಡೆಯುತ್ತಿರುವಾಗ ಒಂದು ಅನುಮಾನಾಸ್ಪದವಾದ ಗಂಟನ್ನು ಕಂಡೆನು.

ಪೊಲೀಸ್: ಈ ವಿಷಯವನ್ನು ನನ್ನ ಗಮನಕ್ಕೆ ತಂದದ್ದಕ್ಕಾಗಿ ವಂದನೆಗಳು. ಅನುಮಾನಾಸ್ಪದವಾದ ಗಂಟುಗಳನ್ನು ನಾವಿಲ್ಲಿ ತೀವ್ರವಾಗಿ ತೆಗೆದುಕೊಳ್ಳುತ್ತೇವೆ.

ನಡೆಯುವವನು: ಈ ತೀರವನ್ನು ಹಿಂಬಾಲಿಸುತ್ತಾ ಒಂದು ಕಿಲೋಮೀಟರ್ ದೂರ ಹೋದರೆ ನೀವು ಅವುಗಳನ್ನು ನೋಡಬಹುದು.

ಪೊಲೀಸ್: ಅವುಗಳೆಂದರೆ?

ನಡೆಯುವವನು: ಹೌದು 12 ಬುಟ್ಟಿಗಳ ರೊಟ್ಟಿ ಅಷ್ಟೇ, ಯಾವ ಜನರು ಇಲ್ಲ, ದೋಣಿಗಳು ಇಲ್ಲ.

ಪೋಲಿಸ್: ಇದು ತುಂಬ ವಿಚಿತ್ರವಾಗಿದೆಯಲ್ಲ. ಅವುಗಳನ್ನು ನನಗೆ ವಿವರಿಸಿ ಹೇಳ ಬಹುದೇ?

ನಡೆಯುವವನು: ಹೌದು, ಅವುಗಳು ಹೊರಗಡೆ ಕರಕರ ಎನ್ನುತ್ತಾ ಒಳಗಡೆ ಮೃದುವಾಗಿರುವುದು ಮತ್ತು ಬಿಲಿಯಾಗಿರುವುದು. ಒಂದು ಮಾತಿನಲ್ಲಿ ಹೇಳಬೇಕಾದರೆ ಮಹ ರುಚಿಯಾಗಿರುವವು. ಒವನ್ನಿಂದ ಹೊರಕ್ಕೆ ತೆಗೆದಾಗ ಅವುಗಳು ಎಷ್ಟು ರುಚಿಯಾಗಿದ್ದವೆಂದು ನಾಳೆ ಯೋಚಿಸುತ್ತಿರುವೆ.

ಪೋಲಿಸ್: ನಾನು ಬುಟ್ಟಿಗಳ ಕುರಿತಾಗಿ ಕೇಳಿದೆ. ಅವುಗಳನ್ನು ಕುರಿತಾಗಿ ವಿವರಿಸಿರಿ.

ನಡೆಯುವವನು: ಅವುಗಳು ಸಾಮಾನ್ಯವಾದ ಹಳೆಯ ಬುಟ್ಟಿಗಳೇ.

ಪೋಲಿಸ್: ಎಷ್ಟು ಬುಟ್ಟಿ ಗಳೆಂದು ನೀನು ಹೇಳಿದೆ?

ನಡೆಯುವವನು: ಮ್, ಹನ್ನೆರಡು ಸಾರ್.

ಪೊಲೀಸ್: ಮತ್ತೆ ನೀನು ಎಷ್ಟು ರೊಟ್ಟಿಗಳನ್ನು ತೆಗೆದುಕೊಂಡೇ?

ನಡೆಯುವವನು: ಎರಡು, ಅಲ್ಲ ನಾಲ್ಕು, ಆದರೆ ನಾನು ಎರಡು ರೊಟ್ಟಿಗಳನ್ನು ತಿಂದುಬಿಟ್ಟೆ.

ಪೊಲೀಸ್: ಆ ಎರಡು ರೊಟ್ಟಿಗಳನ್ನು ನಾನು ಆದಾರಕ್ಕಾಗಿ ತೆಗೆದುಕೊಳ್ಳುತ್ತೇನೆ.

ನಡೆಯುವವನು: ನನಗೆ ನಿಜವಾಗಲು ಬೇಕೆ? ಸ್ವಲ್ಪ ದೂರ ಹೋದರೆ 12 ಬುಟ್ಟಿಗಳು ಆಧಾರವಾಗಿ ಸಿಗುತ್ತವೆ.

ಪೊಲೀಸ್: ಸರಿ ಬಿಡು ಈಗ ಒಂದು ಕೊಡು, ಹೋಗುತ್ತಿರುವಾಗ ಬೇಕಲ್ಲವೇ.

ನಡೆಯುವವನು: ನಿಮಗೆ ಆಧಾರಕ್ಕಾಗಿ ಬೇಕೆಂದು ನಾನು ನೆನೆದೆ.

ಪೊಲೀಸ್: ಹೌದು, ಅದು ನಿಜ, ಅಧಿಕಾರವುಳ್ಳ ಪೋಲಿಸ್ ಉದ್ಯೋಗ, ರಿಪೋರ್ಟ್ ಕೊಟ್ಟದ್ದಕ್ಕಾಗಿ ವಂದನೆಗಳು ಮತ್ತು ಶುಭದಿನ (ಬುಟ್ಟಿಗಳು ಇರುವ ಸ್ಥಳಕ್ಕೆ ರೊಟ್ಟಿಯನ್ನು ತಿನ್ನುತ್ತಾ ಸಂತೋಷವಾಗಿ ಹೊರಟನು.)

## 3 ಸೂಚನೆ #3 ವಸ್ತು (ಪಾಠ ೨)

ತರಗತಿಗೆ ತರ ಬೇಕಾದವು: ರೊಟ್ಟಿ ಅಥವಾ ನಾನ್




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ ೨)

ಗಲಿಲಾಯ ಸಮುದ್ರದ ಪ್ರಾಂತವು ಈ ದಿನ ಈ ರೀತಿಯಾಗಿ ಕಾಣಿಸುತ್ತದೆ. ಹಿಂಭಾಗದಲ್ಲಿ ಕಾಣಿಸುತ್ತಿರುವ ಕೆರೆಯಲ್ಲಿ ಯೇಸು ಹಡಗಿನಲ್ಲಿ ಪ್ರಯಾಣ ಮಾಡಿ ಆಚೆ ದಡಕ್ಕೆ ಹೋದನು. ಆ ಸ್ಥಳದಲ್ಲಿ ಬಹುಶಃ ಆತನನ್ನು ಭೇಟಿಯಾದ ಜನರೆಲ್ಲರು ದಣಿದು, ಹಸಿವಿನಿಂದ ಆಹಾರಕ್ಕಾಗಿ ಕುಳಿತುಕೊಂಡಿರಬೇಕು.



## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ ೨)

ರಹಸ್ಯ : ದೊಡ್ಡ ಔತಣ ಕೂಟವಾದ ಮೇಲೆ ಹುಲ್ಲಿನಲ್ಲಿ ಮೀನಿನ ಎಲುಬುಗಳನ್ನು ಬಿಸಾಡಿದ್ದು.

ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ ೨)

### ಬೈಬಲ್ ಕಥೆ (ಪಾಠ ೨)



**ಯೇಸು 5000 ಜನರಿಗೆ ಆಹಾರವನ್ನು ಹಂಚಿದ್ದು.**

**ಬೈಬಲ್ ವಾಕ್ಯಭಾಗದಿಂದ : ಮಾರ್ಕ.6:30-44, ಮತ್ತಾಯ.14:13-21.**

ಯೇಸು ಮತ್ತು ತನ್ನ ಶಿಷ್ಯರು ಜನರಿಗೆಲ್ಲಾ ದಿನ ಪೂರ್ತಿ ಸೇವೆ ಮಾಡುತ್ತಿದ್ದರು, ಆ ದಿನದ ಅಂತ್ಯದಲ್ಲಿ ತನ್ನ ಸ್ನೇಹಿತರೆಲ್ಲರೂ ಹಸಿವಿನಿಂದ ದಣಿದು ಹೋಗಿದ್ದನ್ನು ಕಂಡನು. ದೋಣಿಯ ಮೇಲೆ ನನ್ನ ಜೊತೆಗೆ ಬನ್ನಿರಿ,

ಒಂದು ಒಳ್ಳೇಯ ಸ್ಥಳಕ್ಕೆ ಹೋಗೋಣ, ಅಲ್ಲಿ ಎಲ್ಲರು ವಿಶ್ರಾಂತಿ ತೆಗೆದುಕೊಂಡು, ಊಟ ಮಾಡಬಹುದೆಂದು ಅವರಿಗೆ ಹೇಳಿದರು. ಯೇಸು ದೋಣಿಯ ಮೇಲೆ ಪ್ರಯಾಣ ಮಾಡುತ್ತಿದ್ದಾನೆಂದು ತಿಳಿದುಕೊಂಡ ಜನರು ಆ ಕೆರೆಯ ಸುತ್ತ ನಡೆದು ಆಚೆಗೆ ಹೋದರು. ಯೇಸು ದೋಣಿಯಿಂದ ತನ್ನ ಹೆಜ್ಜೆಯನ್ನು ಹೊರಗೆ ಇಟ್ಟಾಗ, ಆತನು ದೊಡ್ಡ ಜನಸಮೂಹ ಬಂದಿರುವುದನ್ನು ನೋಡಿದನು. ಅವರು ಹಸಿವಿನಿಂದ ದಣಿದು ಇದ್ದರೂ, ಆತನು ಅವರ ಮೇಲೆ ಕರುಣೆ ತೋರಿಸಿದನು ಮತ್ತು ಜನರೆಲ್ಲರನ್ನು ಗುಣಪಡಿಸಲು ಆರಂಭಿಸಿದನು. ಯೇಸು ಮಾತುಗಳನ್ನು ಕೇಳುವುದಕ್ಕೆ ಜನರು ನಿರೀಕ್ಷಿಸಿದ್ದರು, ಆದರೆ ಈಗಾಗಲೇ ಸಮಯವೂ ಆಲಸ್ಯವಾಗಿತ್ತೆಂದು ಶಿಷ್ಯರು ತಿಳಿದುಕೊಂಡರು. ಅವರು ಯೇಸುವಿನೊಂದಿಗೆ ಮಾತನಾಡಿ, ಈಗ ಜನರೆಲ್ಲರು ಅಕ್ಕಪಕ್ಕ ಊರುಗಳಿಗೆ ಹೋಗಿ ತಮ್ಮ ಊಟವನ್ನು ಕೊಂಡುಕೊಂಡು ತಿಂದು ಹಿಂದಕ್ಕೆ ಬರುವುದು ಒಳ್ಳೇಯದು ಎಂದು ಆತನಿಗೆ ಹೇಳಿದರು. ಜನರೆಲ್ಲರಿಗೆ ಆಹಾರವನ್ನು ಹಂಚಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದರು. ಈ ಎಲ್ಲಾ ಜನರಿಗೆ ಊಟವನ್ನು ಬಡಿಸಬೇಕೆಂದರೆ ಸುಮಾರು 8 ತಿಂಗಳ ಸಂಬಳ ಬೇಕಾಗುತ್ತದೆ ಎಂದು ಶಿಷ್ಯರು ಹೇಳಿದರು. ಜನರ ಮಧ್ಯೆದಲ್ಲಿ ಆಹಾರವನ್ನು ಕಂಡುಕೊಳ್ಳಿರಿ ಎಂದು ಯೇಸು ಹೇಳಿದರು, ಆದರೆ ಶಿಷ್ಯರೆಲ್ಲರು ಸೇರಿ ಐದು ರೊಟ್ಟಿಗಳನ್ನು ಮತ್ತು ಎರಡು ಮೀನುಗಳನ್ನು ಕಂಡುಕೊಂಡರು. ಯೇಸು ಆ ಆಹಾರವನ್ನು ತೆಗೆದುಕೊಂಡು, ಎಲ್ಲಾ ಜನರು ಸಾಲುಗಳಾಗಿ ಮತ್ತು ಗುಂಪುಗಳಾಗಿ ಕೂಡಬೇಕೆಂದು ಆಜ್ಞಾಪಿಸಿದರು. ಇದಾದನಂತರ ಆತನು ವಂದನೆಗಳನ್ನು ಸಲ್ಲಿಸಿ, ರೊಟ್ಟಿಗಳನ್ನು ಮತ್ತು ಮೀನುಗಳನ್ನು ವಿಭಜನೆ ಮಾಡಿ ಬುಟ್ಟಿಗಳಲ್ಲಿ ಹಾಕಿದರು. ಆ ದಿನದಂದು ಸುಮಾರು 5,000 ಮಂದಿ ಪುರುಷರು ಮತ್ತು ಅವರ ಕುಟುಂಬಗಳು ಇದ್ದಿದ್ದರೂ ಅವರಲ್ಲಿ ಪ್ರತಿಯೊಬ್ಬರು ಹೊಟ್ಟೆ ತುಂಬ ಊಟ ಮಾಡಿದರು. ಪ್ರತಿಯೊಬ್ಬರು ಊಟ ಮಾಡಿ ಮುಗಿಸಿದ ಮೇಲೆ, ಶಿಷ್ಯರು ಜನರು ಕುಳಿತಿರುವ ಜಾಗಗಳಿಗೆ ಹೋಗಿ ಸುಮಾರು 12 ಬುಟ್ಟಿ ರೊಟ್ಟಿಗಳನ್ನು ಮತ್ತು ಮೀನುಗಳನ್ನು ಎತ್ತಿದರು.

### ಅನ್ವಯ (ಪಾಠ ೯)

ದೇವರು ನನಗೆ ಕೊಟ್ಟ ಪ್ರತಿಯೊಂದರಲ್ಲಿಯೂ ನಾನು ಕೃತಜ್ಞತೆಯಿಂದ ಇರುತ್ತೇನೆ.

### ಕಂಠಪಾಠ ವಾಕ್ಯ (ಪಾಠ ೯)

"ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ; ಆತನ ನಾಮದ ಮಹತ್ವವನ್ನು ವರ್ಣಿಸಿರಿ. ಜನಾಂಗಗಳಲ್ಲಿ ಆತನ ಕೃತ್ಯಗಳನ್ನು ಪ್ರಸಿದ್ಧಿಪಡಿಸಿರಿ."
– 1 ಪೂರ್ವ.16:8.

### ಮನೆಗೆಲಸ (ಪಾಠ ೯)

ನೀವು ಊಟ ಮಾಡುವಾಗ ನಿಮ್ಮ ತಲೆಯನ್ನು ಬಾಗಿಸಿರಿ (ನಿಮ್ಮ ಶಾಲೆಯಲ್ಲಿರುವಾಗ ಅಥವಾ ಹೋಟೆಲ್.ಗಳಲ್ಲಿ ತಿನ್ನುವಾಗ) ಮತ್ತು "ನನಗೆ ಈ ಆಹಾರವನ್ನು ಕೊಟ್ಟಿದ್ದಕ್ಕಾಗಿ ನಿಮಗೆ ವಂದನೆಗಳು" ಎಂದು ದೇವರಿಗೆ ಹೇಳಿರಿ.

### ದೇವರ ಡಿ.ಎನ್.ಎ. (ಪಾಠ ೯)

ದೇವರು ಜನರ ಎಲ್ಲಾ ಅಗತ್ಯತೆಗಳನ್ನು ಪೂರೈಸುತ್ತಾರೆ ಮತ್ತು ಚಿಕ್ಕ ಚಿಕ್ಕ ವಿಷಯಗಳ ಮೇಲೆಯೂ ಲಕ್ಷೆಯನ್ನಿಟ್ಟು ಚೆನ್ನಾಗಿ ನೋಡಿಕೊಳ್ಳುತ್ತಾರೆ.




## ವಿನೋದ ಸಮಯ! (ಪಾಠ ೯)

### ಆಟ (ಪಾಠ ೯)

ಬುಟ್ಟಿಯಲ್ಲಿ ರೊಟ್ಟಿಯನ್ನು ಮತ್ತು ಮೀನನ್ನು ಅಂಟಿಸಿರಿ

ಮುಂಚಿತವಾಗಿ, ಉಪಾಧ್ಯಾಯರು ತಮ್ಮ ತರಗತಿಯ ಕೊಠಡಿಯ ಗೋಡೆಗೆ ಅಂಟಿಸಲು ಒಂದು ದೊಡ್ಡ ಪೇಪರ್ ಬಾಸ್ಕೆಟ್ (ಬುಟ್ಟಿ) ತಯಾರು ಮಾಡಬೇಕು. ಬೇಕಾದಷ್ಟು ಮೀನಿನ ಮತ್ತು ರೊಟ್ಟಿಯ ಚಿತ್ರಗಳನ್ನು ತಯಾರು ಮಾಡಿಕೊಳ್ಳಿರಿ. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿ ಒಂದೊಂದು ಹೊಂದಿರುತ್ತಾರೆ, ಮತ್ತು ಎರಡು ಕಣ್ಣು ಮುಚ್ಚುವ ಬಟ್ಟೆಗಳು. ವಿದ್ಯಾರ್ಥಿಗಳು ಎರಡು ಗುಂಪುಗಳಾಗಿ ವಿಭಜಿಸಲ್ಪಡಬೇಕು, ಒಂದು ಗುಂಪು ಮೀನನ್ನು ಅಂಟಿಸಿಕೊಳ್ಳುತ್ತಾರೆ ಮತ್ತು ಇನ್ನೊಬ್ಬರು ರೊಟ್ಟಿಯನ್ನು ಅಂಟಿಸಿಕೊಳ್ಳುತ್ತಾರೆ. ಟೇಪ್ ತುಂಡಿನೊಂದಿಗೆ ಚಿಕ್ಕ ಚಿಕ್ಕ ಚಿತ್ರಗಳನ್ನು ಸಿದ್ಧಮಾಡಿರಿ. ಇದರಿಂದ ವಿದ್ಯಾರ್ಥಿ ಅವುಗಳನ್ನು ಅಂಟಿಸುವಾಗ ಬುಟ್ಟಿಯ ಚಿತ್ರಕ್ಕೆ ಅಂಟಿಕೊಂಡು ಇರುತ್ತವೆ. ಎರಡು ಗುಂಪುಗಳು ಸಾಲಾಗಿ ನಿಂತುಕೊಂಡು ತಮ್ಮ ತಮ್ಮ ತಿರುವುಗಳನ್ನು ತೆಗೆದುಕೊಳ್ಳುತ್ತಾರೆ. ಮೊದಲು ಬರುವ ವಿದ್ಯಾರ್ಥಿ ತನ್ನ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿಕೊಂಡು, ಗೋಡೆಯ ಬಳಿಗೆ ಹೋಗಿ, ಅವರು ತಂದಿರುವ ಚಿತ್ರವನ್ನು ಬುಟ್ಟಿಗೆ ಅಂಟಿಸಬೇಕು. ಈ ಆಟದಲ್ಲಿ ಗೆಲ್ಲುವ ಗುಂಪು ಯಾವುದೆಂದರೆ ಯಾವ ಬುಟ್ಟಿಯಲ್ಲಿ ಹೆಚ್ಚು ಚಿತ್ರಗಳು ಅಥವಾ ವಸ್ತುಗಳು ಕಾಣಿಸಿಕೊಳ್ಳುತ್ತವೋ ಅವರೇ ಈ ಗುಂಪಿನಲ್ಲಿ ಗೆಲ್ಲುತ್ತಾರೆ.



## ಚರ್ಚೆ (ಪಾಠ ೨)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ಸುತ್ತಲೂ ಹೋಗುವುದಕ್ಕೆ ಯಾಕೆ ಬೇಕಾದಷ್ಟು ಇಲ್ಲ? ನಾನು ಮಾಡುವುದಕ್ಕಿಂತ ಹೆಚ್ಚಾಗಿ ಮಾಡುವ ಇತರ ಜನರಿದ್ದಾರೆ. ಆದರೆ ನಾನು ಮಾಡುವದಕ್ಕಿಂತಲೂ ಕಡಿಮೆ ಮಾಡುವ ಜನರೂ ಇದ್ದಾರೆ. ಅಸೂಯೆ ಮತ್ತು ಹೊಟ್ಟೆಕಿಚ್ಚು ಬಾರದಂತೆ ನಾವು ಮಾಡಿಕೊಳ್ಳುವುದು ಹೇಗೆ?

ಹಂಚಿಕೊಳ್ಳುವುದಕ್ಕೆ ನಮಗೆ ಯಾವಾಗಲೂ ಒಳ್ಳೇಯ ಅವಕಾಶಗಳು ಸಿಗುತ್ತವೆ ಮತ್ತು ನಮ್ಮ ಬಳಿ ಇರುವವುಗಳನ್ನು ನಾವು ಇತರರೊಂದಿಗೆ ಹಂಚಿಕೊಳ್ಳಬೇಕು. (2 ಸಮು.12:1-9; ಅಪೊ.ಕೃತ್ಯ.4:32-37; 2 ಕೊರಿಂಥ.8:10-15; 2 ಕೊರಿಂಥ.9:7-11; 2 ಥೆಸ್ಸ.3:6-12)

2. ನಾನು ಇನ್ನು ಹೆಚ್ಚಾಗಿ ಬೆಳೆಯದೇ ಇದ್ದರೂ, ಎಂಥಹ ವ್ಯತ್ಯಾಸವನ್ನು ನಾನು ಮಾಡಬಹುದು?


ಪ್ರತಿಯೊಂದು ದಿನ ನಿಮ್ಮ ತಂದೆತಾಯಿಗಳು ನಿಮಗೆ ಸೇವೆ ಮಾಡುತ್ತಿರುವ ವಿಷಯಗಳಿಗೋಸ್ಕರ ನೀವು ಆಲೋಚನೆ ಮಾಡುವುದಕ್ಕೆ ಎಷ್ಟು ವಿಧಾನಗಳಿವೆ? ಅವರು ನಿಮಗೆ ಸೇವೆ ಮಾಡುತ್ತಿರುವಾಗ ಏನಾದರೂ ವ್ಯತ್ಯಾಸ ಕಾಣಿಸಿಕೊಳ್ಳುತ್ತದೋ? ಯಾವ ಅವಶ್ಯಕತೆ ಇಲ್ಲದಿರುವಾಗಲೂ ಇತರರಿಗೆ ಸೇವೆ ಮಾಡುವದರಿಂದ ಪ್ರಪಂಚದಲ್ಲಿ ನೀವು ವ್ಯತ್ಯಾಸವನ್ನುಂಟು ಮಾಡುವುದನ್ನು ಕಲಿತುಕೊಳ್ಳುವುದೇ ಬೆಳವಣಿಗೆಯಲ್ಲಿ ಒಂದು ಭಾಗವಾಗಿರುತ್ತದೆ. ಮಾರ್ಕ.10:42-45; ಲೂಕ.10:38-42; ರೋಮಾ.12:1-3; 1 ಕೊರಿಂಥ.12:5-11.


3. ಅಧ್ಭುತ ಎಂದರೇನು? ಇತರ ಜನರಿಗೆ ನಡೆದ ನೀವು ಕೇಳಿಸಿಕೊಂಡ ಕೆಲವೊಂದು ಅದ್ಭುತಗಳು ಯಾವುವು? ನಿಮ್ಮ ಸ್ವಂತ ಜೀವನದಲ್ಲಿ ನೀವು ಎಂದಾದರೂ ಅದ್ಭುತವನ್ನು ಕಂಡಿದ್ದೀರೋ?

ಅದ್ಭುತ ಎಂದರೆ ನಮ್ಮ ಪ್ರಾಕೃತಿಕ ಲೋಕದಲ್ಲಿ ಪ್ರಾಕೃತಾತೀತವಾದ ಕಾರ್ಯವಾಗಿರುತ್ತದೆ. ಅನೇಕಸಲ, ನಾವು ಅದ್ಭುತಗಳಿಗಾಗಿ ಎದುರುನೋಡುವುದಿಲ್ಲ, ಆದರೆ ಅನೇಕಸಲ ದೇವರು ಅವುಗಳನ್ನು ಮಾಡಿ, ನಮ್ಮನ್ನು ಅಚ್ಚರಿಗೊಳಿಸುತ್ತಾರೆ. ಅವು ಒಂದು ಕಾರ್ ಆಕ್ಸಿಡೆಂಟ್ ಆಗದೆ ಮತ್ತು ಯಾವ ಗಾಯಗಳು ಶರೀರಕ್ಕೆ ಸಂಭವಿಸದೇ ಗುಣಪಡಿಸುತ್ತವೆ, ಶತ್ರುವಿಗೆ ನನ್ನ ಪ್ರೀತಿಯನ್ನು ತೋರಿಸದಕ್ಕಾಗದ ರೀತಿಯಲ್ಲಿ ನನ್ನ ಹೃದಯವು ಕಠಿಣಗೊಂಡಾಗ ನಿಜವಾದ ಪಶ್ಚಾತ್ತಾಪವನ್ನುಂಟು ಮಾಡುತ್ತದೆ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ ೯)



## ಲೂಕಾಸ್ ರವರ ಪ್ರಯೋಗ (ಪಾಠ ೯)

ಮ್ಯುಕಸ್

ಒಂದು ಸ್ವಚ್ಛವಾದ ಬಟ್ಟಲು ತೆಗೆದುಕೊಂಡು ಅದರೊಳಗೆ ನೀರನ್ನು ಸುರಿಯಿರಿ ಮತ್ತು ಅದರಲ್ಲಿ ಎರಡು ಪ್ಯಾಕೆಟ್ ಗೆಲಾಟಿನ್ ಹಾಕಿರಿ. ಆ ನೀರಿನಲ್ಲಿರುವ ಗೆಲಾಟಿನ್ ಚೆನ್ನಾಗಿ ಮಿಶ್ರಮವಾಗುವವರೆಗೂ ಬೆರೆತುಪಡಿಸಿರಿ. ಬಿಸಿ ನೀರಿನಲ್ಲಿ ಪ್ಯಾನ್ ಕೇಕ್ ಸಿರಪ್ ಸುರಿಯಿರಿ ಮತ್ತು ಆಗ ಅದು ಒಂದು ವಿಧವಾದ ಮ್ಯುಕಸ್ ರೂಪದಲ್ಲಿ ಬರುತ್ತದೆ. ನಿಜವಾದ ಮ್ಯುಕಸ್ ಪ್ರೋಟೀನ್ ಮತ್ತು ಸಕ್ಕರೆಯಿಂದ ತಯಾರಿಸುತ್ತಾರೆ, ನಮ್ಮ ಈ ಪ್ರಯೋಗದಲ್ಲಿ ಗೆಲಾಟಿನ್ ಪ್ರೋಟಿನ್ ಕೊಡುತ್ತದೆ ಮತ್ತು ಸಿರಪ್ ಸಕ್ಕರೆಯನ್ನು ಕೊಡುತ್ತದೆ. ಆದ್ದರಿಂದ ಇದನ್ನು ಎಂಜಾಯ್ ಮಾಡಿರಿ.
https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 10 ]--

## ಸೂಚನೆಗಳು! (ಕ್ಲೂಸ್) (ಪಾಠ 10)

### 1 ಸೂಚನೆ # 1 ಅಂಶ (ಪಾಠ 10)

ಅರಸನ ಅವಿಧೆಯ ದಾಸರ ಕೇಸ್

### 2 ಸೂಚನೆ #2 ನಾಟಕ (ಪಾಠ 10)

ಆಪರೇಟರ್ : ಬಾಬೆಲಿನ ಅವಿಗೆ ಕಂಪನಿ, ನಾನು ಹೇಗೆ ನಿಮ್ಮ ಕರೆಗೆ ಸಹಾಯ ಮಾಡಲಿ?

ಮೇನೆಜರ್ ; ಹಲೋ, ಹೌದು, ದಯವಿಟ್ಟು ಅವಿಗೆ ಸೇವೆಗೆ ನನ್ನ ಕರೆಯನ್ನು ತಗಲಿಸಿ?

ಆಪರೇಟರ್ : ಅವರು ಈಗಲೇ ಹೊರಗೆ ಹೋದರು, ನಾನು ಅ ಸಂದೇಶವನ್ನು ತೆಗೆದುಕೊಳ್ಳಬಹುದೇ?

ಮೇನೆಜರ್ ; ಹೌದು, ವಂದನೆಗಳು. ನನಗೆ ಒಂದು ಅವಿಗೆ ಇದೆ, ಅದನ್ನು ನಾನು ಒಂದು ಬಾರಿ ಪರೀಕ್ಷೆ ಮಾಡಿಸಬೇಕು.

ಆಪರೇಟರ್ : ಅದು ಹೊಸದಾ, ಅದು ದೂರಾ ಎನ್ನುವ ಬಯಲು ಪ್ರದೇಶದಲ್ಲಿದೆಯಾ?

ಮೇನೆಜರ್ ; ಹೌದು, ನೀವು ಹೇಳುತ್ತಿರುವುದೇ.

ಆಪರೇಟರ್ : ಸರಿ, ಅದನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಅದು 20 ತಿಂಗಳುಗಳಿಂದ ಯಾವ ಸೇವೆಯನ್ನು ಮಾಡಿಸದೆ ಇಟ್ಟುಕೊಂಡಿದ್ದಲ್ಲ. ಅದರೊಳಗೆ ಏನಾದರೂ ಸಮಸ್ಯೆ ಇದೆಯಾ?

ಮೇನೆಜರ್ ; ನನಗೆ ಅದು ಸರಿಯಾಗಿ ಗೊತ್ತಿಲ್ಲ.

ಆಪರೇಟರ್ : ಅದನ್ನು ಬಿಸಿ ಮಾಡುವುದಕ್ಕೆ ನಿಮಗೆ ಏನಾದರೂ ಅವಕಾಶ ಸಿಕ್ಕಿತ್ತೋ?

ಮೇನೆಜರ್ ; ಹೌದು, ನಿನ್ನೆ ಅದನ್ನು ಉರಿಸಿದ್ದೆವು, ಆದರೆ ಕೆಲವು ವಿಚಿತ್ರವಾದ ಸಂಘಟನೆಗಳು ನಡೆದವು.

ಆಪರೇಟರ್ : ಸರಿ, ಆ ಹೊಸ ಅವಿಗೆ ಉರಿಯುತ್ತಿರುವಾಗ ಒಂದಾನೊಂದು ಸಮಯದಲ್ಲಿ ಸ್ವಲ್ಪ ಸ್ವಲ್ಪ ಹೋಗೆ ಹೊರ ಬರುತ್ತದೆ ಮತ್ತು ಒಂದು ವಿಚಿತ್ರವಾದ ವಾಸನೆ ಬರಬಹುದು.

ಮೇನೆಜರ್ ; ಹೌದು, ನಿಜವಾಗಿ, ಅದೆಲ್ಲಾ ಸರಿ. ಆದರೆ ಯಾರೂ ಯಾವ ವಾಸನೆಯನ್ನಾಗಲಿ ಅಥವಾ ಯಾವ ಹೊಗೆಯನ್ನಾಗಲಿ ನೋಡಲಿಲ್ಲ, ಆದರೆ ಅದನ್ನು ತೆರೆದು, ಅದರೊಳಗೆ ಕೆಲವೊಂದು ವಸ್ತುಗಳನ್ನು ಹಾಕುತ್ತಿರುವಾಗ, ಹಾಕುತ್ತಿರುವ ಆ ಇಬ್ಬರು ಆಳುಗಳು ಸತ್ತು ಹೋದರು.

ಆಪರೇಟರ್ : ಆ ಅವಿಗೆಯ ಪ್ರವೇಶ ದ್ವಾರವು ಸುರಕ್ಷಿತವಾಗಿರುವುದಕ್ಕೆ ಸಾಮಾನ್ಯವಾಗಿ ಉರಿಸುವದಕ್ಕಿಂತಲೂ ಮೂರುರಷ್ಟು ಹೆಚ್ಚು ಬಿಸಿ ಮಾಡಿದರು. ನೀವು ಎಷ್ಟು ಬಿಸಿಯಾಗಿಟ್ಟಿದ್ದೀರಿ?

ಮೇನೆಜರ್ : ನಾವು ಅದನ್ನು ಸಾಮಾನ್ಯ ಬಿಸಿಗಿಂತ ಏಳರಷ್ಟು ಹೆಚ್ಚಾಗಿ ಬಿಸಿ ಮಾಡಿದ್ದೆವು.

ಆಪರೇಟರ್ : ಒಳ್ಳೇದು ಮಾಡಿದ್ರು ಬಿಡಿ. ಅವಿಗೆಯನ್ನು ಅಷ್ಟು ಬಿಸಿ ಮಾಡಬಹುದೆಂದು ನಾನು ಓದಿದ್ದೇನೆ. ಆದರೆ ಅಲ್ಲಿ ಕೆಲಸ ಮಾಡುವವರಿಗೆ ಅದು ಅಷ್ಟು ಒಳ್ಳೇದಲ್ಲ. ಒಳಗೆ ಇರುವುದೆಲ್ಲಾ ಸಂಪೂರ್ಣವಾಗಿ ನಾಶವಾಗುತ್ತದೆ.

ಮೇನೆಜರ್ : ಅದನ್ನೇ ನಾವು ಎದುರು ನೋಡಿದ್ದೆವು. ಆದರೆ, ಒಳಗೆ ಹಾಕಿರುವವುಗಳಿಗೆ ಯಾವ ಹಾನಿ ಸಂಭವಿಸಲಿಲ್ಲ. ವಿಚಿತ್ರವಾಗಿ ಅವುಗಳನ್ನು ಹಾಕುವದಕ್ಕೆ ಹೋಗಿರುವ ಆಳುಗಳೇ ಸತ್ತುಹೋದರು.

ಆಪರೇಟರ್ : ಸರಿ, ಅವರು ಬಂದಕೂಡಲೇ ನೀವು ಹೇಳಿದ್ದನ್ನು ಅವರಿಗೆ ನಾನು ಹೇಳುತ್ತೇನೆ.

ಮೇನೆಜರ್ : ಧನ್ಯವಾದಗಳು, ತುಂಬಾ ಸಂತೋಷ.

ಆಪರೇಟರ್ : ಬಾಬೆಲಿನ ಅವಿಗೆ ಕಂಪನಿಗೆ ಕರೆ ನೀಡಿದ್ದಕ್ಕಾಗಿ ವಂದನೆಗಳು, ಶುಭ ಹಾರೈಸುತ್ತಿದ್ದೇವೆ.

## 3 ಸೂಚನೆ #3 ವಸ್ತು (ಪಾಠ 10)

ತರಗತಿಗೆ ತೆಗೆದುಕೊಂಡು ಬನ್ನಿರಿ : ಬೆಂಕಿಪಟ್ಟ, ಹೋಗೆ ವಾಸನೆ ಬರುವ ಬಟ್ಟೆಗಳು




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 10)

ಇಲ್ಲಿ ನಿಮಗೆ ಕಾಣಿಸುತ್ತಿರುವ ಚಿತ್ರವು ಇತ್ತೀಚಿಗೆ ಬ್ರೆಜಿಲ್.ನಲ್ಲಿರುವ ಸ್ಟೀಲ್ ಮಿಲ್.ನಲ್ಲಿ ತೆಗೆದುಕೊಳ್ಳಲಾಗಿದೆ. ಅವಿಗೆಯ ಬಳಿ ಕೆಲಸ ಮಾಡುವ ಪುರುಷರು ತಪ್ಪದೇ ಸುರಕ್ಷಿತವಾದ ಉಡುಪುಗಳನ್ನು, ಬೂಟುಗಳನ್ನು, ಗ್ಲೋವ್.ಗಳನ್ನು ಮತ್ತು ತಲೆಗೆ ಹೆಲ್ಮೆಟ್.ಗಳನ್ನು ಹಾಕಿಕೊಳ್ಳಬೇಕು.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 10)



ರಹಸ್ಯ : ಸಂಗೀತ ಉಪಕರಣಗಳು - ತ್ರಿಕೋನ ಆಕಾರದ ಒಂದು ಬಗೆಯ ತಂತಿ ವಾದ್ಯ (ಹಾರ್ಪ್), ಲ್ಯೂಟ್, ಕೊಳಲು, ಮತ್ತು ಜಿದರ್ ಎಲ್ಲವುಗಳು ವೇದಿಕೆಯ ಮೇಲಿವೆ.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 10)

## ಬೈಬಲ್ ಕಥೆ (ಪಾಠ 10)

**ಶದ್ರಕ್, ಮೇಶಕ್, ಅಬೇದ್.ನೆಗೋ**

**ಬೈಬಲ್ ವಾಕ್ಯಭಾಗ : ದಾನಿಯೇಲ 3ನೇ ಅಧ್ಯಾಯ**



ಅರಸ ನೆಬೂಕದ್ನೆಚ್ಚರನು ಒಂದು ದೊಡ್ಡ ಎತ್ತರವಾದ ಬಂಗಾರದ ಪ್ರತಿಮೆಯನ್ನು ಕಟ್ಟಿ, ಎಲ್ಲರು ಅದಕ್ಕೆ ನಮಸ್ಕರಿಸಬೇಕೆಂದು ಅಪ್ಪಣೆ ಕೊಟ್ಟನು. ಅವನು ತನ್ನ ಕೆಳಗೆ ಇರುವ ಅಧಿಕಾರಗಳನ್ನು ಕರೆದು, ಆ ಪ್ರತಿಮೆಯನ್ನು ಉದ್ಘಾಟನೆ ಮಾಡಿರಿ ಎಂದನು. ಸಂಗೀತ ಧ್ವನಿ ಸುರುಳಿಯನ್ನು ನೀವು ಕೇಳಿದ ಪ್ರತಿಯೊಂದುಬಾರಿ, ಮೊಣಕಾಲೂರಿ ಆ ಪ್ರತಿಮೆಯನ್ನು ಆರಾಧನೆ ಮಾಡಬೇಕು ಎಂದು ಹೇಳಿದನು. ಆರಾಧನೆ ಮಾಡದ ಪ್ರತಿಯೊಬ್ಬರನ್ನು ಧಗ ಧಗ ಉರಿಯುತ್ತಿರುವ ಅವಿಗೆಯಲ್ಲಿ ಎಸೆಯುತ್ತೇವೆ ಎಂದು ಹೇಳಿದನು. ಆದರೆ ಅರಸ ನೆಬೂಕದ್ನೆಚ್ಚರನು ತನ್ನ ಕೆಲಸಗಾರರಲ್ಲಿ ಮೂವರು ಯೆಹೂದಿಯರು ಆ ಪ್ರತಿಮೆಗೆ ಮೊಣಕಾಲೂರಿ ಆರಾಧನೆ ಮಾಡದಿರುವದನ್ನು ಕಂಡು ಉಗ್ರನಾದನು. ಶದ್ರಕ್, ಮೇಶಕ್ ಮತ್ತು ಅಬೇದ್.ನೆಗೋ ತನ್ನ ಮುಂದಕ್ಕೆ ಕರಿಸಿಕೊಂಡು, ಅದು ನಿಜವೇ ಎಂದು ಕೇಳಿದನು. ಅವರು ಕೂಡ, ಹೌದು ಇದು ನಿಜವೇ ಎಂದು ಮತ್ತು ನಾವು ಆ ಪ್ರತಿಮೆಗೆ ಮೊಣಕಾಲೂರಿ ನಮಸ್ಕಾರ ಮಾಡುವುದಿಲ್ಲವೆಂದು ಹೇಳಿದರು. ಅವರನ್ನು ಕಾಪಾಡಿಕೊಳ್ಳುವುದಕ್ಕೆ ಅವರು ಚಿಂತೆ ಮಾಡಲಿಲ್ಲ, ಯಾಕಂದರೆ ಅವರನ್ನು ರಕ್ಷಿಸುವುದಕ್ಕೆ ನಿಜವಾದ ದೇವರಲ್ಲಿ ನಂಬಿಕೆ ಇಟ್ಟಿದ್ದರು. ಒಂದುವೇಳೆ ದೇವರು ಅವರನ್ನು ಕಾಪಾಡದಿದ್ದರೂ, ಅವಿಗೆಯಿಂದ ತಮ್ಮ ಕಾಪಾಡಿಕೊಳ್ಳುವುದಕ್ಕೊಸ್ಕರ ಆ ಪ್ರತಿಮೆಗೆ ನಾವು ನಮಸ್ಕಾರ ಮಾಡುವುದಿಲ್ಲ ಎಂದು ಅರಸನಿಗೆ ಹೇಳಿದರು. ಅರಸನು ತುಂಬಾ ಆವೇಶಗೊಂಡು, ಆ ಅವಿಗೆಯನ್ನು ಏಳರಷ್ಟು ಹೆಚ್ಚಾಗಿ ಬಿಸಿ ಮಾಡಿರಿ ಅಂದನು. ಶದ್ರಕ್, ಮೇಶಕ್ ಮತ್ತು ಅಬೇದ್.ನೆಗೋರವರನ್ನು ಗಟ್ಟಿಯಾಗಿ ಕಟ್ಟಿ, ಆ ಅವಿಗೆಯೊಳಗೆ ಹಾಕುವುದಕ್ಕೆ ಅವನು ತುಂಬಾ ಬಲವಾದ ಮನುಷ್ಯರನ್ನು ಕರೆಸಿದ್ದನು. ಈ ಅಗ್ನಿಯು ತುಂಬಾ ಬಿಸಿಯಾಗಿತ್ತು, ಅವರು ಎಸೆಯುವುದಕ್ಕೆ ಹೋದವರೇ ಸುಟ್ಟು ಸತ್ತುಹೋದರು. ಇದಾದನಂತರ ಆ ಅವಿಗೆಯಲ್ಲಿ ನಾಲ್ಕು ಮಂದಿಯನ್ನು ನೋಡಿದ ಅರಸನು ತುಂಬಾ ಹೆಚ್ಚಾಗಿ ಬೆರಗಾದನು. ಒಬ್ಬರು ನೋಡುವುದಕ್ಕೆ ದೇವರ ಮಗನಂತೆ ಕಾಣಿಸಿಕೊಂಡಿದ್ದರು! ಅರಸನು ಅವರನ್ನು ನೋಡಿ, "ಪರಾತ್ಪರ ದೇವರ" ಸೇವಕರಿವರು ಎಂದು ಕರೆದನು. ಆ ಅವಿಗೆಯಿಂದ ಹೊರ ಬನ್ನಿರಿ ಎಂದು ಅವರಿಗೆ ಹೇಳಿದನು. ಆ ಬೆಂಕಿಯ ಅವಿಗೆಯಿಂದ ಅವರು ಹೊರಬಂದಾಗ ಅವರ ಬಟ್ಟೆಗಳು ಸುಟ್ಟಿದ್ದಿಲ್ಲ, ಅವರ ಚರ್ಮವು, ಅಥವಾ ಅವರ ತಲೆಯ ಕೂದಲಿನಲ್ಲಿ ಒಂದು ಕೂದುಲು ಸುಟ್ಟಿರಲಿಲ್ಲ.

## ಅನ್ವಯ (ಪಾಠ 10)

ತಪ್ಪಾದ ಕೆಲಸವನ್ನು ಮಾಡುವದಕ್ಕೆ ನನ್ನನ್ನು ಒತ್ತಾಯ ಮಾಡಿದಾಗ, ನಾನು ಅದಕ್ಕೆ ಒಳಗಾಗುವುದಿಲ್ಲ.

## ಕಂಠಪಾಠ ವಾಕ್ಯ (ಪಾಠ 10)

"ಮಗನೇ, ಪಾಪಿಗಳು ದುಷ್ಪ್ರೇರಣೆಯನ್ನು ಮಾಡಿದರೆ ನೀನು ಒಪ್ಪಲೇ ಬೇಡ." - ಜ್ಞಾನೋ.1:10.

### ಮನೆಗೆಲಸ (ಪಾಠ 10)

ಮೋಸ ಮಾಡುವುದಕ್ಕೆ ಅಥವಾ ಲಭ್ಯದಲ್ಲಿರುವ ಉತ್ತರವನ್ನು ಕೊಡುವುದಕ್ಕೆ ನೀವು ಒತ್ತಡಕ್ಕೆ ಗುರಿಯಾಗಬೇಡಿರಿ ಮತ್ತು ಅದು ನಿಮಗೆ ಪರೀಕ್ಷೆಯಾಗಿರುತ್ತದೆ. ಉತ್ತರ ಕೊಡಬೇಕೆಂದು ನಿಮ್ಮ ಸ್ನೇಹಿತರು ನಿಮ್ಮನ್ನು ಕೇಳಿದಾಗ, ನೀವು “ಇಲ್ಲ” ಎಂದು ಹೇಳಿರಿ. ನೀವು ಸ್ಟೋರ್.ನಲ್ಲಿರುವಾಗ, ಯಾರೂ ನಿಮ್ಮನ್ನು ನೋಡದೇ ಇರುವಾಗ, ನೀವು ಕಳ್ಳತನ ಮಾಡಬೇಡಿರಿ.

### ದೇವರ ಡಿ.ಎನ್.ಎ. (ಪಾಠ 10)




ಕಷ್ಟನಷ್ಟಗಳು ಸಂಭವಿಸಿದಾಗ್ಯೂ ಯಾರು ದೇವರಿಗೆ ನಂಬಿಕೆಯಿಂದ ಇರುವ ಪ್ರತಿಯೊಬ್ಬರೊಂದಿಗೆ ಆತನು ಯಾವಾಗಲೂ ಇರುತ್ತಾನೆ.



## ವಿನೋದ ಸಮಯ! (ಪಾಠ 1□)

### ಆಟ (ಪಾಠ 10)

ವಾಕ್ಯವನ್ನು ಹಿಡಿದುಕೊಳ್ಳಿರಿ

ಉಪಾಧ್ಯಾಯರು ಪ್ರತಿಯೊಂದು ಗುಂಪಿಗೆ ಒಂದು ಪೆನ್ಸಿಲ್, ಒಂದು ಸ್ಟ್ರಾ, ಮತ್ತು ಕಂಠಪಾಠ ವಾಕ್ಯಗಳನ್ನು ಅಥವಾ ಪಾಠದಿಂದ ಮತ್ತು ಪದವನ್ನು ಕಂಡುಹಿಡಿಯಿರಿ (ಒಂದು ಪದಕ್ಕೆ ಒಂದು ಚಿಕ್ಕ ಕಾಗದ) ಎನ್ನುವ ಒಗಟಿನಿಂದ ಮುಖ್ಯ ಪದಗಳನ್ನು ಬರೆಯುವುದಕ್ಕೆ ಚಿಕ್ಕ ಚಿಕ್ಕ ಕಾಗದಗಳನ್ನೂ ಕೊಡುತ್ತಾರೆ. ಒಂದು ಗೋಲ್ ಲೈನ್ ಹಾಕಿರಿ. ಆ ಗೋಲ್ (ಗುರಿ) ಕಡೆಗೆ ಆ ಗುಂಪುಗಳು ನಿಂತಿರಬೇಕು ಮತ್ತು ಕಾಗದಕ್ಕೆ ಸ್ಟ್ರಾ ಚುಚ್ಚಿದ್ದನ್ನು ಬಾಯಿಂದ ಹಿಡಿದುಕೊಳ್ಳಬೇಕು, ಇದರಲ್ಲಿ ಕೈಗಳನ್ನು ಉಪಯೋಗಿಸಬಾರದು. ಗುಂಪಿನವರು ಆ ಕಾಗದವನ್ನು ಕೈಗಳ ಸಹಾಯವಿಲ್ಲದೆ ಇನ್ನೊಬ್ಬರಿಗೆ ಕೊಡುತ್ತಾರೆ. ಇನ್ನೊಬ್ಬ ವ್ಯಕ್ತಿ ಆ ಕಾಗದವನ್ನು ತನ್ನ ಬಾಯಲ್ಲಿರುವ ಸ್ಟ್ರಾನಿಂದ ಚುಚ್ಚಿ ತೆಗೆದುಕೊಳ್ಳಬೇಕು, ಆದನಂತರ ಗೋಲ್ ಲೈನ್.ಗೆ ಓಡಬೇಕು. ಆ ಕಾಗದವನ್ನು ಇನ್ನೊಬ್ಬರಿಗೆ ಕೊಡಬೇಕು.

### ಚರ್ಚೆ (ಪಾಠ 10)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ನಾನು ಕ್ರೈಸ್ತನಾಗಿದ್ದು ಪ್ರಸಿದ್ಧಿ ಹೊಂದದಿರುವಾಗ ಪರಿಸ್ಥಿತಿ ಏನು? ನನ್ನ ಸ್ವಂತ ಆಸೆಯನ್ನು ದೇವರನ್ನು ಅನುಸರಿಸುವ ಸ್ವಂತ ಆಸೆಗೆ ಯಾವರೀತಿ ಸಮತುಲ್ಯ ಮಾಡಬೇಕು?



ಬಲವಾದ ಕ್ರೈಸ್ತನಾಗಿದ್ದು, ಪ್ರಸಿದ್ಧಿ ಹೊಂದುವುದಕ್ಕೆ ಅವಕಾಶವುಂಟು, ಯಾಕಂದರೆ ನನ್ನ ನಂಬಿಕೆಯನ್ನು ಸ್ವೀಕರಿಸಿ, ಇತರರನ್ನು ಪ್ರೀತಿಸುತ್ತಾ ಇರಬೇಕು. ಇತರರಿಗೆ ಒಳ್ಳೆಯದನ್ನು ಮಾಡುವುದೇ ಪ್ರಸಿದ್ಧಿ ಹೊಂದುವುದಕ್ಕೆ ತಂತ್ರವಲ್ಲ, ಆದರೆ ಅದು ನಿಜವಾದ ಸ್ನೇಹಿತರನ್ನು ಗಳಿಸಲು ಒಂದು ದೊಡ್ಡ ಮಾರ್ಗವಾಗಿರುತ್ತದೆ. ಪ್ರಸಿದ್ಧಿಗಿಂತಲೂ ದೇವರನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದು ಆತನು ಯಾವಾಗಲೂ ನಮ್ಮಿಂದ ಬಯಸುತ್ತಿದ್ದಾರೆ. (ಜ್ಞಾನೋ.29:25; ಮತ್ತಾಯ.10:32-33; ಇಬ್ರಿ.12:14-15; 1 ಪೇತ್ರ.4:12-14).


2. ಒಂದುವೇಳೆ ಅದು ತಪ್ಪಲ್ಲವೆಂದು ತಿಳಿದರೆ ಆಗ ಏನು ಮಾಡಬೇಕು? ನಾನು ನನ್ನ ಭಾವನೆಗಳನ್ನು ನಂಬಬಹುದೇ?


ಇಲ್ಲ, ನಿನ್ನ ಭಾವನೆಗಳನ್ನು ನೀನು ನಂಬಬಾರದು. ದೇವರ ಸ್ವರವನ್ನು ಹೇಗೆ ಕೇಳಬೇಕು ಅಥವಾ ವಿವೇಚಿಸಬೇಕು ಎನ್ನುವುದು ಕಲಿತುಕೊಳ್ಳುವುದನ್ನು ಅಭ್ಯಾಸ ಮಾಡಬೇಕು. ದೇವರು ನಮಗೆ ಮಾಡಬೇಕೆಂದು ಹೇಳಿದ ವಿಷಯಗಳಿಗೆ ಮತ್ತು ನಮ್ಮ ಭಾವನೆಗಳಿಗೆ ಎಷ್ಟು ಸಮಾಂತರವಾಗಿವೆ ಎಂದು ನಾವು ಪರಿಶೀಲನೆ ಮಾಡಬೇಕು. ನಾವು ನಮ್ಮ ಭಾವನೆಗಳನ್ನು ಸರಿಯೆಂದಾಗಲಿ ಅಥವಾ ತಪ್ಪು ಎಂದಾಗಲಿ ಹೇಳುವುದಕ್ಕೆ ಆಗುವುದಿಲ್ಲ. (ಜ್ಞಾನೋ.1:1-7; ಜ್ಞಾನೋ.3:21-26; ರೋಮಾ.14:20-23; ಗಲಾತ್ಯ.5:16-17)

3. ನಾನೊಬ್ಬನೇ ಇಲ್ಲ (ಅಥವಾ ಮಾಡಲ್ಲ) ಎಂದು ಹೇಳುವುದರ ಮೂಲಕ ಏನಾಗುತ್ತದೆ?

ನಾನು ಯಾವಾಗಲೂ ಸರಿಯಾದದ್ದನ್ನು ಮಾಡುವುದಕ್ಕೆ ನಿರ್ಣಯಿಸಿಕೊಳ್ಳಬೇಕು. ಪ್ರತಿಯೊಬ್ಬರು ಮಾಡುವುದನ್ನೇ ನಾನು ಮಾಡಿದಾಗ ಅಥವಾ ಅದಕ್ಕೆ ತಕ್ಕ ಪರಿಣಾಮಗಳು ಯಾವುವು ನಡೆಯದೇ ಇದ್ದಾಗ, ಅದರಿಂದ ಯಾವ ಕೆಟ್ಟ ಕಾರ್ಯವು ನಡೆಯುತ್ತಿಲ್ಲವೆಂದು ನಾನು ತಿಳಿದುಕೊಂಡರೆ ಅದು ನಿಜವಾಗಿ ತಂತ್ರೋಪಯವಾಗಿ ತಿಳಿಯುತ್ತದೆ, ನೀವು ಕೆಟ್ಟ ಕಾರ್ಯವನ್ನು ಮಾಡಿದ್ದಕ್ಕೆ ಯಾವ ಪರಿಣಾಮವನ್ನು ನೀವು ನೋಡದೆ ಇರುವಾಗಲೂ ಸರಿಯಾದದ್ದನ್ನು ಮಾಡುವುದೇ ಜ್ಞಾನದಲ್ಲಿ ಒಂದು ಭಾಗವಾಗಿರುತ್ತದೆ. ಕೀರ್ತನೆ.25:1-5 ವಚನ ಭಾಗವು ದಾವೀದನು ಒಂದೇ ಪರಿಸ್ಥಿತಿಯಲ್ಲಿ ಯಾವರೀತಿ ಸ್ಪಂದಿಸಿದ್ದನೆಂದು ನಮಗೆ ತೋರಿಸುತ್ತದೆ ಮತ್ತು ಅದರ ಪರಿಣಾಮವನ್ನು ದೇವರು ನೋಡುವುದಕ್ಕಾಗಿ ದೇವರನ್ನು ಕರೆಯುವದನ್ನು ನಮಗೆ ತೋರಿಸುತ್ತದೆ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 10)





## ಲೂಕಾಸ್ ರವರ ಪ್ರಯೋಗ (ಪಾಠ 10)

ಮಿಲ್ಕ್ ಬಾಕ್ಸ್ ಕಾರ್

ಒಂದು ಕಾರ್ಡ್.ಬೋರ್ಡ್ ಮಿಲ್ಕ್ ಕಂಟೇನರ್ ಅಗಲಕ್ಕಿಂತ ಹೆಚ್ಚಾಗಿ ಒಂದು ಅರ್ಧ ಇಂಚ್ ಅಷ್ಟು ಕುಡಿಯುವ ಸ್ಟ್ರಾಗಳನ್ನು ಎರಡು ತುಂಡುಗಳಾಗಿ ಮಾಡಿರಿ. ರೌಂಡ್ ಕ್ಯಾಂಡಿ ಸ್ಟಿಕ್.ಗಳಿಂದ (ಲಾಲಿಪಾಪ್.ಗಳಿಗಾಗಿ ಉಪಯೋಗ ಮಾಡಿರುವವುಗಳನ್ನು, ಸ್ಟ್ರಾ ತುಂಡುಗಳಿಗಿಂತ ಉದ್ದ ಇರುವದಕ್ಕೆ ಒಂದು ಅರ್ಧ ಇಂಚ್ ಕತ್ತರಿಸಿ) ನಿಮ್ಮ ಕಾರ್.ಗೋಸ್ಕರ್ ಎರಡು ಅಚ್ಚುಗಳನ್ನು (ಅಕ್ಸೇಲ್.ಗಳನ್ನು) ಕತ್ತರಿಸಿ. ಸ್ಟ್ರಾಗಳ ಮೂಲಕ ಆಕ್ಸೇಲ್.ಗಳನ್ನಿಟ್ಟು, ಅವುಗಳಿಗೆ ನಾಲ್ಕು ಚಕ್ರಗಳನ್ನು ಅಂಟಿಸಿರಿ (ಮೆಡಿಸಿನ್ ಡಬ್ಬಿಗಳಿಂದ ಇವುಗಳನ್ನು ಮಾಡಬಹುದು). ಮಿಲ್ಕ್ ಬಾಕ್ಸ್ ಎರಡು ಬದಿಗಳಿಗೆ ಸ್ಟ್ರಾಗಳನ್ನು ಅಂಟಿಸಿರಿ, ಈಗ ಮಿಲ್ಕ್ ಬಾಕ್ಸ್ ಕಾರ್ ಸಿದ್ಧ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 11 ]--

## ಸೂಚನೆಗಳು! (ಕ್ಲೂಸ್) (ಪಾಠ 11)

### 1 ಸೂಚನೆ #1 ಅಂಶ (ಪಾಠ 11)

ಸೆರೆಮನೆಯ ಅಸ್ತಿವಾರಗಳು ಕದಲಿದ ಕೇಸ್

### 2 ಸೂಚನೆ #2 ನಾಟಕ (ಪಾಠ 11)

ಸೆರೆ ಯಜಮಾನ : ಸ್ವಲ್ಪ ಸಮಯದಲ್ಲಿಯೇ ನೀವು ಬಂದಿದ್ದಕ್ಕಾಗಿ ನಿಮಗೆ ವಂದನೆಗಳು. ನಾನು ಕೆಲಸ ಮಾಡುವ ಕ್ರಮದಲ್ಲಿ ಈ ಸೇರೆಗಳಿಗೆ ಕೆಲಸ ಮಾಡುವುದಕ್ಕೆ ಇಟ್ಟಿದ್ದರು.

ಅವೊನಿಲ್ : ಸಮಸ್ಯೆ ಏನೂ ಇಲ್ಲ. ಭೂಕಂಪನ ಬಂದಾಗ ಒಡೆದುಹೋದ ಭಾಗಗಳನ್ನು ನನಗೆ ತೋರಿಸುವೆಯಾ?

ಸೆರೆ ಯಜಮಾನ : ಹೌದು, ಅದು ಇಲ್ಲೇ ನಡೆದಿದ್ದು. ಈ ಎಲ್ಲಾ ಸೆರೆಮನೆಗಳನ್ನು ಪರಿಶೀಲನೆ ಮಾಡಬೇಕು, ವಿಶೇಷವಾಗಿ ಬಾಗಿಲುಗಳ ಕೀಲಿ ಹಾಕುವ ಸ್ಥಳಗಳನ್ನು ಪರೀಕ್ಷಿಸಬೇಕು.

ಅವೊನಿಲ್ : ಸರಿ, ನಾವೀಗ ನೋಡೋಣ.

ಸೆರೆ ಯಜಮಾನ : ಇಲ್ಲಿ ನೋಡಿ, ಇದನ್ನು ನೋಡಿ [ಬೆರಳಿನಿಂದ ತೋರಿಸುತ್ತಾ]

ಅವೊನಿಲ್ : ಸರಿ, ಹೌದು, ಇಲ್ಲಿ ಸ್ವಲ್ಪ ಮಾತ್ರವೇ ಆಗಿದೆ.

ಸೆರೆ ಯಜಮಾನ : ಇದು ಮಾತ್ರವೇ ಆಗಿದ್ದರೆ ಪರವಾಗಿಲ್ಲ.

ಅವೊನಿಲ್ : ಹುಡುಗ ನಾನು ಖಂಡಿತವಾಗಿ ಹೇಳುತ್ತೇನೆ. ಪ್ರತಿಯೊಂದು ಸೆರೆಮನೆಯು ಈ ಭೂಕಂಪದೊಂದಿಗೆ ಚೆನ್ನಾಗಿವೆ.

ಸೆರೆ ಯಜಮಾನ : ಅದು ನಿಜ. ಪ್ರತಿಯೊಂದು ಬಾಗಿಲು ತೆರೆಯಲ್ಪಟ್ಟಿವೆ.

ಅವೊನಿಲ್ : ಸರ್ ನೀವು ಅದೃಷ್ಟ ಇರುವವರು.

ಸೆರೆ ಯಜಮಾನ : ಹೌದು, ಈ ಸಂಘಟನೆಯಿಂದ ಈ ದಿನ ಎಂದಿಗೂ ಕೆಟ್ಟ ದಿನವಾಗಿರುತ್ತಿತ್ತು. ಆದರೆ ಇದು ನನ್ನ ಜೀವನದಲ್ಲೇ ಉತ್ತಮವಾದ ದಿನವಾಗಿದೆ.

ಅವೊನಿಲ್ : ಒಳ್ಳೇಯದು, ಹೂಂ, ನಾನು ಕೀಲು ಹಾಕುತ್ತಿರುವಾಗ ನನ್ನ ಹತ್ತಿರಕ್ಕೆ ಬರದವರನ್ನು ನೀವು ಸ್ವಲ್ಪ ಹೇಳಬಲ್ಲಿರಾ?

ಸೆರೆ ಯಜಮಾನ : ಅವರು ಬರುವುದಿಲ್ಲ. ಅವರು ಒಳ್ಳೇಯ ದಿನಗಳನ್ನು ಹೊಂದಿಕೊಳ್ಳುತ್ತಿದ್ದಾರೆ ಕೂಡ.

ಅವೊನಿಲ್ : ಅವರು ಚೆನ್ನಾಗಿ ನಿದ್ದೆ ಹೋಗುತ್ತಿರುವಂತೆ ಕಾಣಿಸಿಕೊಳ್ಳುತ್ತಿದೆ.

ಸೆರೆ ಯಜಮಾನ : ಹೌದು, ರಾತ್ರಿಯೆಲ್ಲಾ ಭೂಕಂಪ, ಹಾಡುಗಳು ಹಾಡುವುದು ಎಲ್ಲವು ಇದ್ದಿದ್ದವು.

ಅವೊನಿಲ್ : ಹಾಡುಗಳಾ?

ಸೆರೆ ಯಜಮಾನ : ನಾನು ನೋಡಿದ ಎಲ್ಲಾ ರಾತ್ರಿಗಳಿಗಿಂತಲೂ ಅದು ತುಂಬಾ ಅಸಹಜವಾದ ರಾತ್ರಿಯಾಗಿದ್ದಿತ್ತು.

ಅಪೊನಿಲ್ : ಸರಿ, ನಾನು ಕೆಲಸ ಶುರು ಮಾಡುತ್ತೇನೆ.

ಸೆರೆ ಯಜಮಾನ : ನಾನು ಸ್ವಲ್ಪ ಹೊತ್ತು ನಿದ್ದೆ ಮಾಡುತ್ತೇನೆ...

### 3 ಸೂಚನೆ #3 ವಸ್ತು (ಪಾಠ 11)

ತರಗತಿಗೆ ತೆಗೆದುಕೊಂಡು ಬನ್ನಿರಿ : ಕ್ರೈಸ್ತ ಸಂಗೀತ ಅಥವಾ ಸಭೆ ಹಾಡಿನ ಪುಸ್ತಕ

### 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 11)

ಗ್ರೀಸ್ ದೇಶದಲ್ಲಿನ ಫಿಲಿಪ್ಪಿಯಲ್ಲಿ ಪೌಲನನ್ನು ಇಟ್ಟಿರುವ ಸೆರೆಮನೆಯಿದು. ಇದನ್ನು ಇವತ್ತಿಗೂ ಚೆನ್ನಾಗಿ ಭದ್ರವಾಗಿ ಇಟ್ಟಿದ್ದಾರೆ ಮತ್ತು ಪ್ರವಾಸಿ ಸ್ಥಳವನ್ನಾಗಿ ಇದನ್ನು ಮಾಡಿದ್ದಾರೆ.






### 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 11)

ರಹಸ್ಯ : ಇತ್ತೀಚಿನ ಭೂಕಂಪದಿಂದ ಅವಶೇಷಗಳಾಗಿ ಬಿದ್ದಿರುವ ಮತ್ತು ಬಿರುಕುಗಳಿಂದ ಇರುವ ಜೈಲ್ ಬಾಗಿಲನ್ನು ತೆರೆಯಿರಿ.

**ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ**

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 11)

### ಬೈಬಲ್ ಕಥೆ (ಪಾಠ 11)

**ಪೌಲ ಮತ್ತು ಸೀಲ**

**ಬೈಬಲ್ ವಾಕ್ಯಭಾಗ : ಅಪೊ.ಕೃತ್ಯ.16**

ಪೌಲ ಮತ್ತು ಸೀಲರನ್ನು ಚಡಿಗಳಿಂದ ಚೆನ್ನಾಗಿ ಹೊಡೆದು, ಜೈಲಿನಲ್ಲಿ ಹಾಕಿದ್ದರು. ಅವರ ಮೇಲೆ ಪಟ್ಟಣವನ್ನು ಗಲಿಬಿಲಿ ಮಾಡುತ್ತಿದ್ದಾರೆನ್ನುವ ನಿಂದೆ ಹಾಕಲ್ಪಟ್ಟಿತ್ತು. ಅಲ್ಲಿರುವ ಸೆರೆಮನೆ ಯಜಮಾನನು ಅವರ ಕಾಲುಗಳಿಗೆ ಕೋಳವನ್ನು ಮತ್ತು ಕೈಗಳನ್ನು ಸರಪಣಿಗಳಿಂದ ಕಟ್ಟಿ ಬಿಗಿಸಿದನು. ಅವರನ್ನು ಒಳ ಕೋಣೆಯಲ್ಲಿ ಹಾಕಿ ಬಾಗಿಲನ್ನು ಗಟ್ಟಿಯಾಗಿ ಮುಚ್ಚಿದರು. ಪೌಲ ಮತ್ತು ಸೀಲರವರು ಆ ರಾತ್ರಿಯಲ್ಲಿ ಯೇಸುವಿಗೆ ಹಾಡುಗಳನ್ನು ಹಾಡುತ್ತಾ, ಪ್ರಾರ್ಥನೆಗಳನ್ನು ಮಾಡುತ್ತಾ ಸಮಯವನ್ನು ಕಳೆದರು. ಆಕಸ್ಮಿಕವಾಗಿ, ಅಲ್ಲಿ ಭೂಕಂಪವಾಯಿತು,



ಪೌಲ ಸೀಲರಿಗಿರುವ ಸರಪಣಿಗಳೆಲ್ಲವೂ ಕೆಳಗೆ ಬಿದ್ದವು ಮತ್ತು ಅವರ ಸೆರೆಮನೆಯ ಬಾಗಿಲು ತೆರೆಯಲ್ಪಟ್ಟಿತು. ಆ ಸೆರೆಮನೆಯ ಯಜಮಾನನು ಎದ್ದು ನೋಡಿದಾಗ, ಸೆರೆಮನೆ ಬಾಗಿಲುಗಳು ತೆರೆಯಲ್ಪಟ್ಟಿದ್ದವು. ಆಗ ಪೌಲ ಮತ್ತು ಸೀಲರು ತಪ್ಪಿಸಿಕೊಂಡಿದ್ದಾರೆಂದು ತುಂಬಾ ಭಯಗೊಂಡನು. ಅವರು ನಿಜವಾಗಿ ಹೋಗಿದ್ದರೆ, ಅವನಿಗೆ ಮರಣ ಖಂಡಿತ. ಅವನು ತನ್ನ ಕತ್ತಿಯನ್ನು ತೆಗೆದುಕೊಂಡು ಸಾಯುವುದಕ್ಕೆ ಹೋಗಿದ್ದನು. ಆದರೆ ಪೌಲ ಮತ್ತು ಸೀಲರು ಅಲ್ಲೇ ಇದ್ದಿದ್ದರೂ ಮತ್ತು ನಿನ್ನನ್ನು ನೀನು ಸಾಯಿಸಿಕೊಳ್ಳಬೇಡ ಎಂದು ಅವನಿಗೆ ಹೇಳಿದರು. ಪೌಲ ಮತ್ತು ಸೀಲರು ಅಲ್ಲೇ ಇರುವುದನ್ನು ಕಂಡು ಸೆರೆಮನೆಯ ಯಜಮಾನನು ತುಂಬಾ ಅಚ್ಚರಿಗೊಂಡು, ಅಲ್ಲೇ ಅವರ ಮುಂದೆ ಮೊಣಕಾಲೂರಿ, ನಾನು ಹೇಗೆ ರಕ್ಷಣೆ ಹೊಂದಬೇಕೆಂದು ಕೇಳಿಕೊಂಡನು. "ಕರ್ತನಾದ ಯೇಸುವಿನಲ್ಲಿ ನಂಬಿಕೆಯಿಡು, ನೀನು ಮತ್ತು ನಿನ್ನ ಕುಟುಂಬದವರು ತಪ್ಪದೇ ರಕ್ಷಣೆ ಹೊಂದುವಿರಿ" ಎಂದು ಪೌಲನು ಮತ್ತು ಸೀಲನು ಅವನಿಗೆ ಹೇಳಿದರು (ಅಪೊ.ಕೃತ್ಯ. 16:31). ಆ ಮಧ್ಯರಾತ್ರಿಯಲ್ಲೇ ಅವನ ಕುಟುಂಬದವರೆಲ್ಲರೂ ಯೇಸುವಿನಲ್ಲಿ ನಂಬಿಕೆ ಇಟ್ಟರು ಮತ್ತು ನೀರಿನಲ್ಲಿ ದೀಕ್ಷಾಸ್ನಾನ ಹೊಂದಿದರು.

### ಅನ್ವಯ (ಪಾಠ 11)

ನಾನು ಮಾಡದ ಕೃತ್ಯಗಳನ್ನು ನನ್ನ ಮೇಲೆ ಹೊರಿಸಿ ಹೇಳಿದಾಗ, ದೇವರು ನನಗೆ ಒಂದು ಅದ್ಭುತವಾದ ಆಶೀರ್ವಾದವನ್ನು ಇಟ್ಟಿರುತ್ತಾರೆ.

### ಕಂಠಪಾಠ ವಾಕ್ಯ (ಪಾಠ 11)

"ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು."
- ಮತ್ತಾಯ.5:11.

### ಮನೆಗೆಲಸ (ಪಾಠ 11)

ನೀವು ನಿಜವಾದ ಕ್ರೈಸ್ತರೆಂದು ತಿಳಿದು, ನಿಮ್ಮ ರಕ್ಷಣೆ ವಿಷಯದಲ್ಲಿ ಯಥಾರ್ಥವಾಗಿದ್ದು ಮಾತನಾಡಿರಿ. ಒಂದುವೇಳೆ ಜನರು ನಿಮ್ಮನ್ನು ಹಿಯಾಳಿಸಿದರೆ, ನಿಮ್ಮನ್ನು ಅಗೌರವಪಡಿಸಿದರೆ, ನೀವೇನು ಚಿಂತೆ ಮಾಡಬೇಡಿರಿ. ಸುಮ್ಮನಿದ್ದು, ನೀವು ಯಾವರೀತಿ ಆಶೀರ್ವಾದ ಹೊಂದುತ್ತೀರೋ ಅದನ್ನು ದೇವರಲ್ಲಿ ಕೇಳಿರಿ.

### ದೇವರ ಡಿ.ಎನ್.ಎ. (ಪಾಠ 11)




ಜೀವನವು ಸರಿಯಾದ ಮಾರ್ಗದಲ್ಲಿ ಹೋಗದಿರುವಾಗ ದೇವರು ತನ್ನ ಹಿಂಬಾಲಕರಿಗೆ ಸಂತೋಷವನ್ನು ಕೊಡುತ್ತಾರೆ ಮತ್ತು ಅಸಾಧ್ಯವಾದ ಪರಿಸ್ಥಿತಿಗಳಿಂದ ಅವರನ್ನು ಬಿಡುಗಡೆ ಮಾಡುತ್ತಾರೆ.



## ವಿನೋದ ಸಮಯ! (ಪಾಠ 11)

### ಆಟ (ಪಾಠ 11)

ನಾಲ್ಕು ಮೂಲೆಗಳು

1 ರಿಂದ 4 ನೇ ತರಗತಿಯವರೆಗೆ ಇರುವ ಮೂಲೆಗಳನ್ನು ಲೆಕ್ಕ ಮಾಡಿರಿ. ಮಡಿಚಿದ ಕಾಗದದ ತುಂಡುಗಳಿಂದ ಚೀಲವನ್ನು ತಯಾರು ಮಾಡಿರಿ ಮತ್ತು ಅವುಗಳ ಮೇಲೆ 1 ರಿಂದ 4 ರವರೆಗೆ ಸಂಖ್ಯೆಗಳನ್ನು ಬರೆಯಿರಿ. ಅದರಲ್ಲಿ ಒಂದನ್ನು "ಇಟ್" ಆಗಿರಲು ಆಯ್ಕೆ ಮಾಡಿರಿ. ಆ ವ್ಯಕ್ತಿ ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾನೆ (ತರಗತಿಗೆ ಮೊಮೆಂಟಮ್ ಬೇಕೆಂದರೆ, ಗಟ್ಟಿಯಾಗಿ 1 ರಿಂದ 10 ರವರೆಗೆ ಸಂಖ್ಯೆಗಳನ್ನು ಎಣಿಸಬೇಕು), ಉಳಿದ ವಿದ್ಯಾರ್ಥಿಗಳೆಲ್ಲರೂ ತರಗತಿಯಲ್ಲಿರುವ ನಾಲ್ಕು ಮೂಲೆಗಳಲ್ಲಿರುವ ಒಂದರ ಬಳಿಗೆ ಹೋಗಿ, ಅವರು ಒಂದರಿಂದ ಇನ್ನೊಂದು

ಕೋನೆಗೆ ಬದಲಾಗುತ್ತಿರುತ್ತಾರೆ. ಎಲ್ಲಾ ವಿದ್ಯಾರ್ಥಿಗಳು ಒಂದೇ ಮೂಲೆಗೆ ಸೇರಿಕೊಂಡಾಗ, "ಇಟ್" ಆಗಿರುವವರು ಒಂದು ಸಂಖ್ಯೆಯನ್ನು ಹೊರ ತೆಗೆಯುತ್ತಾರೆ. ಆ ಸಂಖ್ಯೆಯೊಂದಿಗೆ ಒಂದು ಮೂಲೆಯನ್ನು ಆಯ್ಕೆ ಮಾಡಿಕೊಂಡಿರುವ ಎಲ್ಲಾ ಮಕ್ಕಳು ಆಟದಿಂದ ಹೊರಗೆ ಹೋಗುತ್ತಾರೆ ಮತ್ತು ಅವರೆಲ್ಲರು ಸುಮ್ಮನೆ ಕೂಡಬೇಕು. ಇದನ್ನೇ ಮತ್ತೇ ಮತ್ತೆ ಆಡಿಸಿರಿ. ಆ ಆಟವು ನಾಲ್ಕು ಮಂದಿಗಿಂತ ಕಡಿಮೆ ಜನರವರೆಗೆ ಇಳಿಯುತ್ತದೋ, ಅವಾಗ ಪ್ರತಿಯೊಬ್ಬರೂ ಒಂದೊಂದು ಮೂಲೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದುವೇಳೆ ಯಾರು ನಿಲ್ಲದ ಮೂಲೆಯ ಸಂಖ್ಯೆಯನ್ನು ಹೊರ ತೆಗೆದರೆ, "ಇಟ್" ಆಗಿರುವವರು ಇನ್ನೊಂದನ್ನು ತೆಗೆಯಬೇಕು. ಈ ಆಟದಲ್ಲಿ ಒಬ್ಬರು ಇರುವವರೆಗೂ ಮುಂದೆವರಿಯುತ್ತಾಯಿರುತ್ತದೆ. ಆ ವಿದ್ಯಾರ್ಥಿಯೇ ಮತ್ತೊಂದು ಆಟದಲ್ಲಿ "ಇಟ್" ಆಗುತ್ತಾರೆ.

## ಚರ್ಚೆ (ಪಾಠ 11)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ಪ್ರಾಥನೆ ಮಾಡುವುದಕ್ಕೆ ಯಾವುದು ಸರಿ ಅಥವಾ ಯಾವುದು ತಪ್ಪು? ಪ್ರಾರ್ಥನೆ ಮಾಡಲು ಎಷ್ಟು ಹೊತ್ತು ತೆಗೆದುಕೊಳ್ಳುವುದು ಸರಿ? ಸರಿಯಾಗಿ ಪ್ರಾರ್ಥನೆ ಮಾಡುವುದಕ್ಕೂ ಮತ್ತು ವೇಷಧಾರಿಗಳಾಗಿ ಇರುವುದಕ್ಕೂ ಮಧ್ಯೆ ಪ್ರಾರ್ಥನೆಯಲ್ಲಿ ಸಮತುಲ್ಯವನ್ನು ಮಾಡುವುದು ಹೇಗೆ?



ಸರಿಯಾದ ವಿಧಾನವೆಂದರೆ ನಾವು ದೇವರೊಂದಿಗೆ ಮಾತನಾಡುವ ಆತನ ಮುಂದೆ ಯಥಾರ್ಥವಾಗಿರುವುದು. ತಪ್ಪಾದ ವಿಧಾನವೆಂದರೆ ನಮ್ಮನ್ನು ಎಲ್ಲರು ನೋಡಬೇಕೆಂದು ಎಲ್ಲರ ಮುಂದೆ ಗಟ್ಟಿಯಾಗಿ ಪ್ರಾರ್ಥನೆ ಮಾಡುವ ಮತ್ತು ತುಂಬಾ ಹೊತ್ತು ಪ್ರಾರ್ಥನೆ ಮಾಡುವ ವೇಷಧಾರಿಗಳು ಮಾಡುವ ಹಾಗೆ ಮಾಡುವುದಾಗಿರುತ್ತದೆ. ವೇಷಧಾರಿಗಳು ಕೆಲವೊಂದುಸಲ ಪ್ರಾರ್ಥನೆ ಮಾಡುವ ಹಾಗೆ ನಾವು ಅನೇಕ ಪದಗಳನ್ನು ಬಳಸಬಾರದೆಂದು ಯೇಸು ಹೇಳಿದ್ದಾರೆ, ಆದರೆ ಅವರು ತನ್ನ ಶಿಷ್ಯರನ್ನೇ ಒಂದು ಗಂಟೆ ಕೂಡ ಪ್ರಾರ್ಥನೆ ಮಾಡದಿದ್ದರೆ ಹೇಗೆ ಎಂದು ತನ್ನ ಶಿಷ್ಯರನ್ನು ಕೇಳಿದ್ದಾರೆ. (ಮತ್ತಾಯ.6:5-13).

2. ನಾನು ದೇವರಿಗೆ ಪಾರಾಗಿದ್ದೆನೆಂದು ತಿಳಿದುಕೊಳ್ಳುವುದಕ್ಕೆ ವಿಧಾನಗಳೇನು? ಅಂಥಹ ಸಮಯದಲ್ಲಿ ನಾನೇನು ಮಾಡಬೇಕು?


ಕೆಲವೊಂದುಸಲ ದೇವರಿಗೆ ದೂರಾದ ಅನುಭವದ ಮೂಲಕ ನಾವು ಹಾದು ಹೋಗಬೇಕೆಂದು ದೇವರು ನಮ್ಮನ್ನು ಕೇಳಿಕೊಳ್ಳುತ್ತಾರೆ. ಅಂಥಹ ಸಮಯಗಳಲ್ಲಿ, ನಾವು ನಮ್ಮ ಭಾವನೆಗಳನ್ನು ಪಕ್ಕಕ್ಕಿಟ್ಟು, ನಮ್ಮಲ್ಲಿರುವ ನಂಬಿಕೆಯನ್ನು ಕಾಪಾಡಿಕೊಳ್ಳಬೇಕು ಮತ್ತು ದೇವರಲ್ಲಿ ಭರವಸೆ ಇಡಬೇಕು. ಕೆಲವೊಂದು ಸಮಯಗಳಲ್ಲಿ, ನಾವು ದೇವರಿಗೆ ದೂರಾಗಿದ್ದೇವೆನ್ನುವ ಅನುಭವ ಸಿಕ್ಕುತ್ತದೆ, ಯಾಕಂದರೆ ನಾವು ಪಾಪದಲ್ಲಿರುತ್ತೇವೆ. ಅಂಥಹ ಸಮಯದಲ್ಲಿ, ನಾವು ಪಶ್ಚಾತ್ತಾಪ ಹೊಂದಿ, ನಮ್ಮ ಜೀವನವನ್ನು ಮಾರ್ಪಡಿಸಿಕೊಳ್ಳಬೇಕು. ನಾವು ಒಂದುವೇಳೆ ದೂರಾಗಿದ್ದಾರೆ, ಶ್ರದ್ಧೆಯಿಂದ ಇರಬೇಕು ಅಥವಾ ನಾವು ಏನಾದರೂ ತಪ್ಪು ಮಾಡಿದ್ದರೆ, ಅದಕ್ಕೆ ನಂಬಿಕೆ ಬೇಕು. ನಾವು ನಮ್ಮ ಭಾವನೆಗಳನ್ನು ಪಕ್ಕಕ್ಕೆ ಇಟ್ಟು, ನಂಬಿಕೆಯಿಂದ ಇರಬೇಕು. (ಕೀರ್ತನೆ.9:10, 42:6-11, 89:19-26; ಮತ್ತಾಯ.27:45-50; ಅಪೊ.ಕೃತ್ಯ.13:2)


3. ನಾನು ಪೆಟ್ಟನ್ನು ಹೊಂದಿದಾಗ, ಅದರ ಮೂಲಕ ನಾನು ಹೇಗೆ ಜೀವನ ಮಾಡುವುದು?

ದೇವರೇ ಬಲವಾದ ಬುರುಜು. ಸಭೆಯಲ್ಲಿ ಒಬ್ಬ ಅಣ್ಣನಿಗೆ ಅಥವಾ ಅಕ್ಕಗೆ ನಡೆಯುವ ಅತೀ ಭಯಂಕರ ಅನುಭವಗಳನ್ನು ನೀವು ಎಂದಾದರೂ ನೋಡಿದ್ದೀರೋ ಮತ್ತು ಅವರು ಯಾಕೆ ಇಂತಹ ಕಷ್ಟಗಳಿಂದ ಹೋಗಬೇಕೆಂದು ನಿಮಗೆ ಆಶ್ಚರ್ಯವಾಗಿರಬಹುದು? ಅಂತಹ ಪರಿಸ್ಥಿತಿಗಳನ್ನು ನೋಡುವುದು ತುಂಬಾ ಕಷ್ಟ, ಆದರೆ ಆ ರೀತಿ ಜೀವನ ಮಾಡುವುದು ಎಷ್ಟು ಕಷ್ಟವಲ್ಲವೋ? ಅನೇಕಸಲ ಇದು ಕಷ್ಟವಾಗಬಹುದು ಮತ್ತು ಸುಲಭವೂ ಆಗಬಹುದು. ಕಷ್ಟ ಯಾಕಂದರೆ ಅದು ವ್ಯಕ್ತಿಗತವಾದದ್ದು ಮತ್ತು ಅದು ತುಂಬಾ ಹೆಚ್ಚಾಗಿ ನೋಯಿಸುತ್ತದೆ. ಅದೇ ಸಮಯದಲ್ಲಿ ಆ ರೀತಿ ಜೀವನ ಮಾಡುವುದು ತುಂಬಾ ಸುಲಭ, ಯಾಕಂದರೆ ದೇವರೆ ಆಶ್ರಯ ದುರ್ಗವಾಗಿರುತ್ತಾರೆ, ಇರುವದಕ್ಕೆ ಒಂದು ಸುರಕ್ಷಿತವಾದ ಸ್ಥಳ ಅವರೇಯಾಗಿರುತ್ತಾರೆ ಮತ್ತು ಅಲ್ಲಿ ಚನ್ನಾಗಿ ಅತ್ತು ಪ್ರಾರ್ಥನೆ ಮಾಡಬಹುದು. ಯಾವುದು ಉತ್ತಮ? ಯಾವ ಆದರಣೆಯಿಲ್ಲದ ಸುಲಭ ಜೀವನ ಬೇಕೋ ಅಥವಾ ಎಂಥಹ ಕಷ್ಟಗಳಾಗಲಿ, ಅವುಗಳಲ್ಲಿ ಒಂದು ಒಳ್ಳೇಯ ಸಹವಾಸವಿರುವ ಕಠಿಣ ಜೀವನ ಬೇಕೋ? ಜನರು ತಾವು ಮಾಡಿದ ಕೆಟ್ಟ ಕಾರ್ಯಗಳ ಮೂಲಕ ಹೋಗಬಾರದೆಂದು ಅನೇಕರು ಹೇಳಿದ್ದನು ನಾನು ಕೇಳಿಸಿಕೊಂಡಿದ್ದೇನೆ, ಆದರೆ ಅದನ್ನೇ ಮತ್ತೇ ಮತ್ತೇ

ಮಾಡುತ್ತಾ ಇರುವುದಾದರೆ, ಅವರು ಯಾವುದನ್ನು ಮಾರ್ಪಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಯಾಕಂದರೆ ಅದರಿಂದ ಇನ್ನೂ ದೊಡ್ಡ ಸಮಸ್ಯೆಗಳು ಬರಬಹುದು. (ಯೊಬ.1:12-22; ಕೀರ್ತನೆ.23:1-4, 31:14-22; ಯೆರೆಮೀಯಾ.29:11)

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 11)






## ಲೂಕಾಸ್ ರವರ ಪ್ರಯೋಗ (ಪಾಠ 11)

ಕಾಗದವನ್ನು ಮಡುಚುವುದು

ಒಂದು ಕಾಗದವನ್ನು ಇಪ್ಪತ್ತು ಬಾರಿ ಅರ್ಧಕ್ಕೆ ಮಡುಚುಕೊಳ್ಳುತ್ತಾ ಹೋಗಲು ಪ್ರಯತ್ನಿಸಿರಿ. ಹಾಗೆ ಮಾಡುವುದು ತುಂಬಾ ಕಷ್ಟ ಯಾಕಂದರೆ ಆ ರೀತಿ ಮಾಡಿದರೆ ಒಂದಾನೊಂದುಬಾರಿ ಕಾಗದ ಹಿಡಿದುಕೊಳ್ಳುತ್ತದೆ. ಆದರೂ ಒಂದುಸಲ ಪ್ರಯತ್ನಿಸಿ ನೋಡಿರಿ, ನೀವು ಎಷ್ಟರ ಮಟ್ಟಿಗೆ ಕಾಗದವನ್ನು ಮಡುಚುತ್ತೀರೋ ತಿಳಿದುಕೊಳ್ಳಿರಿ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 12 ]--



## ಸೂಚನೆಗಳು! (ಕ್ಲೂಸ್) (ಪಾಠ 12)

### 1 ಸೂಚನೆ #1 ಅಂಶ (ಪಾಠ 12)

ವ್ಯರ್ಥವಾದ ಹಣಕ್ಕಾಗಿ ಮಾಡಿದ ನಿರ್ಣಯ ಕುರಿತಾದ ಕೇಸ್

### 2 ಸೂಚನೆ #2 ನಾಟಕ (ಪಾಠ 12)



ಸೈಮನ್ : ಸರಿ, ಮನುಷ್ಯರೇ, ನಮ್ಮ ಅತಿಥಿಗಾಗಿ ತೆಗೆದುಕೊಳ್ಳುವ ಈ ಸ್ಥಳವನ್ನು ತೆಗೆದುಕೊಳ್ಳಲು ನಮಗೆ 3 ಗಂಟೆಗಳ ಕಾಲ ಮಾತ್ರ ಇದೆ.

ಆಳು : ಸರ್, ಆ ಕಾಲದೊಳಗೆ ನಾವು ಸಿದ್ಧರಾಗುವುದಕ್ಕೆ ಸಾಧ್ಯನೇ ಇಲ್ಲ. ಹೊರಗಡೆ ಇರುವ ಎಲ್ಲಾ ಸಾಮಾನುಗಳನ್ನು ನಾವು ಇನ್ನೂ ತೊಳೆಯಬೇಕು ಮತ್ತು ಎಲ್ಲಾ ನೆಲಗಳನ್ನು ಮತ್ತು ಗೋಡೆಗಳನ್ನು ಪುನಃ ತೊಳೆಯಬೇಕು. ಎಲ್ಲಾ ರಗ್ಗುಗಳ, ತಲೆದಿಂಬುಗಳ ಧೂಳಿಯನ್ನು ನಾವು ಹೊಡೆಯಬೇಕು ಅಷ್ಟೇಅಲ್ಲದೆ ಎಲ್ಲಾ ಆಸನಗಳನ್ನು ಹೊರೆಸಬೇಕು. ಈ ಮಧ್ಯಾಹ್ನ ಕಾಲದಲ್ಲಿ ತುಂಬಾ ಧೂಳಿ ಕುಂತಿದೆ.

ಸೈಮನ್ : ಸರಿ, ನಾವು ಎಲ್ಲಾ ಚೆನ್ನಾಗಿ ಮಾಡಬೇಕು. ನನ್ನ ಮನೆಯ ಕುರಿತಾಗಿ ಈ ಮನುಷ್ಯನ ಮುಂದೆ ನಾನು ಕ್ಷಮೆ ಕೇಳುವುದು ನನಗೆ ಇಷ್ಟವಿಲ್ಲ.

ಆಳು : ಸರಿ, ನಾನು ಎಲ್ಲಾ ಕೆಲಸಗಳನ್ನು ಸರಿಯಾಗಿ ಮಾಡಿ ಮುಗಿಸುತ್ತೇನೆ. ಯಾಕಂದರೆ ಬೇರೊಂದು ಮಾರ್ಗ ಯಾವುದೂ ಇಲ್ಲ.

ಸೈಮನ್ : ಓಕೇ, ಸರಿ, ನೀನು ಮತ್ತು ನಿನ್ನ ಗುಂಪಿನವರು ಚೆನ್ನಾಗಿ ಮಾಡುತ್ತಾ ಹೋಗಿರಿ

ಆಳು : ನಾವು ರಾತ್ರಿ ಊಟವನ್ನು ಬಡಿಸುವುದಕ್ಕೂ ಕಡಿಮೆ ಜನರಿದ್ದೇವೆ. ನಾವು ರಾತ್ರಿ ಊಟವನ್ನು ಸಿದ್ಧ ಮಾಡಿ, ಬಡಿಸಬಹುದು. ಆದರೆ ನಾವು ಆತನ ಕಾಲುಗಳನ್ನು ತೊಳೆದು ಅಥವಾ ಆತನನ್ನು ಸರಿಯಾಗಿ ಸ್ವಾಗತಿಸಿ ಮಾಡುವದಕ್ಕೆ ಸಾಧ್ಯವಾಗುವುದಿಲ್ಲ.

ಸೈಮನ್ : ಸರಿ, ಆತನು ಅದನ್ನೆಲ್ಲಾ ಅರ್ಥ ಮಾಡಿಕೊಳ್ಳುತ್ತಾರೆಂದು ನನಗೆ ಭರವಸೆಯಿದೆ ಬಿಡು.

ಆಳು : ಅವರು ಪ್ರವಾಸಿಗಾರರಾ? ಆತನ ಪಾದಗಳನ್ನು ತೊಳೆಯುವುದು ಆಚಾರವಾಗಿದ್ದಿತ್ತೋ.

ಸೈಮನ್ : ಇದನ್ನು ಬಿಟ್ಟು ಬಿಡು, ನೀನು ಮಾಡುತ್ತೀಯಾ? ನಮಗೆ ಅವುಗಳೆಲ್ಲಾ ಮಾಡುವುದಕ್ಕೆ ಸರಿಯಾದ ಸೌಲಭ್ಯಗಳಿಲ್ಲ.

ಆಳು : ಇನ್ನೊಂದು ವಿಷಯ ಸರ್, ಅವರು ಪ್ರಖ್ಯಾತಿ ಪಡೆದವರೆಂದು ನಾನು ಕೇಳಿದ್ದೇನೆ. ನಿಮ್ಮ ಮನೆಯಲ್ಲಿ ಅಂತಹ ದೊಡ್ಡ ವ್ಯಕ್ತಿಯನ್ನು ಹೊಂದಿರುವುದೇ ದೊಡ್ಡ ಗೌರವ ಸರ್.

ಸೈಮನ್ : ಹೌದು, ನಾನು ಅಷ್ಟು ಸಂತೋಷವಾಗಿಲ್ಲ. ಗೌರವ ಎಂದರೆ ಏನು ಎನ್ನುವುದು ಅವರಿಗೆ ಗೊತ್ತಿರುತ್ತದೆಯೆಂದು ನನಗೆ ಗೊತ್ತಿಲ್ಲ. ಈ ರೀತಿಯಾಗಿಯೇ ಆತನು ನನ್ನ ಮನೆಯೊಳಗೆ ಆಹ್ವಾನಿಸಲ್ಪಡಬೇಕು. ಆತನು ಮಾಡುವಂತೆಯೇ ನಾವು ಅನೇಕಮಂದಿ ಅತಿಥಿಗಳನ್ನು ಕರೆಯುವುದಕ್ಕೆ ಆಗುವುದಿಲ್ಲ.

ಆಳು : ಸರ್ ನಿಜವಾಗಿ ಹೇಳಬೇಕೆಂದರೆ, ಆತನು ಇಲ್ಲಿಗೆ ಬರುವುದೇ ನಿಜವಾದ ಗೌರವವಾಗಿರುತ್ತದೆಯೆಂದು ನನ್ನ ಅನಿಸಿಕೆ.

ಸೈಮನ್ : ನಿನಗೆ ನೀನೆ ಹೇಳಿಕೋ; ನಾನು ಮಾತ್ರವೇ ಆತನನ್ನು ಆಹ್ವಾನಿಸಿದ್ದೇನೆ, ಯಾಕಂದರೆ ಇದನ್ನು ನಾನು ನಿರೀಕ್ಷಿಸಿದ್ದೇನೆ. ನನ್ನ ಬಳಿ ಇರದವುಗಳನ್ನು ಆತನು ನನಗೆ ಯಾವುದಾದರೊಂದನ್ನು ಕೊಡುವುದಕ್ಕೆ ಆತನ ಬಳಿ ಏನಾದರೂ ಇರುತ್ತದೆಯೆಂದು ನಾನು ಆಲೋಚನೆ ಮಾಡುತ್ತಿಲ್ಲ.

ಆಳು : ಹೌದು ಸರ್, ಈ ಸಿದ್ಧತೆಗಳ ವಿಷಯದಲ್ಲಿ ನಾನು ಉತ್ತಮವಾದ ರೀತಿಯಲ್ಲಿ ಆರಂಭಿಸಿದ್ದೇನೆ. ಒಂದುವೇಳೆ ನೀವು ಆತನ ಪಾದಗಳನ್ನು ತೊಳೆಯಬೇಕೆಂದರೆ, ತತ್ಕ್ಷಣ ಕಷ್ಟಪಡುವುದರ ಬದಲಾಗಿ ನಾನು ನೀರನ್ನು ಮತ್ತು ವಸ್ತ್ರವನ್ನು ಸಿದ್ಧ ಮಾಡಿರಲಾ?

ಸೈಮನ್ : [ಆಳನ್ನು ನೆಟ್ಟಗೆ ನೋಡುತ್ತಾ]

ಆಳು : ಬ್ಯಾಡ ಬಿಡಿ, ಈ ರೀತಿ ಹೇಳಿದ್ದಕ್ಕೆ ನನ್ನನ್ನು ಕ್ಷಮಿಸಿ.

## 3 ಸೂಚನೆ #3 ವಸ್ತು (ಪಾಠ 12)

ತರಗತಿಗೆ ತೆಗೆದುಕೊಂಡು ಬನ್ನಿರಿ : ಅತ್ತರು (ಪರ್ಫ್ಯೂಮ್)

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 12)




ಈ ನೀಲಿ ಡಬ್ಬಿಯಲ್ಲಿ ಯೆರೂಷಲೇಮಿನಿಂದ, ಇಸ್ರಾಯೇಲ್.ನಿಂದ ತೆಗೆದುಕೊಂಡುಬಂದ ಸ್ಪೈಕ್ನಾರ್ಡ್ ಎಣ್ಣೆ ಇದೆ. ಇದನ್ನು ಅಭಿಷೇಕಕ್ಕಾಗಿ ಉಪಯೋಗಿಸುತ್ತಾರೆ. ಇದನ್ನು ಇವತ್ತಿಗೂ ಕೊಂಡುಕೊಳ್ಳಬಹುದು. ಸೈಮನ್ ಮನೆಯಲ್ಲಿ ಯೇಸು ಪಾದಗಳನ್ನು ಅಭಿಷೇಕ ಮಾಡುವುದಕ್ಕೆ ಮರಿಯಳು ಉಪಯೋಗಿಸದ ಅತ್ತರು ಈ ಸ್ಪೈಕ್.ನಾರ್ಡ್ ಮರದಿಂದ ಮಾಡಲಾಗಿರುತ್ತದೆ.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 12)



ರಹಸ್ಯ : ಕುರ್ಚಿ ಹತ್ತಿರ ಒಂದು ಮೇಜು, ಆ ಮೇಜಿನ ಕೆಳಗೆ ಸ್ಪೈಕ್.ನಾರ್ಡ್ ಎಣ್ಣೆ (ಅತ್ತರು) ಚೆಲ್ಲಿ ಹೋಗಿದೆ.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 12)

## ಬೈಬಲ್ ಕಥೆ (ಪಾಠ 12)

**ಅತ್ತರಿನಿಂದ ಯೇಸು ಪಾದಗಳನ್ನು ತೊಳೆದದ್ದು**

**ಬೈಬಲ್ ವಾಕ್ಯಭಾಗದಿಂದ : ಲೂಕ.7:36-50**



ಸೀಮೋನನ ಮನೆಗೆ ಯೇಸು ಊಟಕ್ಕಾಗಿ ಕರೆಯಲ್ಪಟ್ಟಿದ್ದನು. ಇವರು ಆ ಮನೆಯಲ್ಲಿರುವಾಗಲೇ ಒಬ್ಬ ಸ್ತ್ರೀ ಅಲ್ಲಿಗೆ ಬಂದು, ಆತನ ಹಿಂದೆ ನಿಂತುಕೊಂಡು ಅಳುತ್ತಿದ್ದಳು, ಯಾಕಂದರೆ ಆಕೆ ಅತೀ ಭಯಂಕರವಾದ ಪಾಪ ಜೀವನವನ್ನು ನಡೆಸಿದ್ದಳು ಮತ್ತು ಆಕೆಗೆ ಕ್ಷಮೆಗಾಗಿ ಬಂದಿದ್ದಳು. ಆಕೆ ಯೇಸುವಿನ ಪಾದಗಳ ಮೇಲೆ ಬಿದ್ದು ಅಳುತ್ತಿರುವಾಗ, ಆಕೆ ಆ ಕಣ್ಣೀರಿನಿಂದ ಪಾದಗಳನ್ನು ತೊಳೆಯುವದಕ್ಕೆ ಆರಂಭಿಸಿದಳು. ಆತನ ಪಾದಗಳನ್ನು ಆಕೆ ತನ್ನ ಕೂದಲುಗಳಿಂದ ಚೆನ್ನಾಗಿ ತೊಳೆದಳು. ಆದನಂತರ ತುಂಬಾ ಹೆಚ್ಚು ಬೆಲೆಯುಳ್ಳ ಅತ್ತರು ತೆಗೆದುಕೊಂಡು ಯೇಸುವಿನ ಪಾದಗಳ ಮೇಲೆ ಸುರಿದಳು. ಸೀಮೋನನು ತುಂಬಾ ಹೆಚ್ಚಾಗಿ ಗೊಂದಲಗೊಂಡು, ಆ ವಿಷಯವನ್ನು ಯೇಸುವಿಗೆ ಹೇಳಿದನು. "ಯಾರು ಇಷ್ಟು ಕೃತಜ್ಞತೆಯಿಂದ ಇರುತ್ತಾರೆ: ಯಾರ ಪಾಪಗಳು ಹೆಚ್ಚಾಗಿ ಕ್ಷಮಿಸಲ್ಪಟ್ಟಿರುವ ವ್ಯಕ್ತಿಯೋ  ಅಥವಾ ಯಾರ ಪಾಪಗಳು ಅತೀ ಕಡಿಮೆಯಾಗಿ ಕ್ಷಮಿಸಲ್ಪಟ್ಟಿರುವರೋ?" ಎಂದು ಉತ್ತರ ಕೊಟ್ಟನು. : ಯಾರ ಪಾಪಗಳು ಹೆಚ್ಚಾಗಿ ಕ್ಷಮಿಸಲ್ಪಟ್ಟಿರುತ್ತವೋ, ಆ ವ್ಯಕ್ತಿಯೇ ಹೆಚ್ಚಾಗಿ ಕೃತಜ್ಞತೆಯನ್ನು ತೋರಿಸುತ್ತಾನೆಂದು ಸೀಮೋನನನಿಗೆ ಚೆನ್ನಾಗಿ ಗೊತ್ತಿತ್ತು. ಸೀಮೋನನೆ ನೀನು ಹೇಳಿದ್ದು ಸರಿ ಎಂದು ಹೇಳಿದನು. ಯೇಸು ಹೀಗೆಯೇ ಸೀಮೊನನಿಗೆ ಹೇಳುತ್ತಾ ಮುಂದೆವರಿಸಿದನು : "ನಾನು ನಿನ್ನ ಮನೆಗೆ ಬಂದಿದ್ದೇನೆ, ನೀನು ನನ್ನ ಪಾದಗಳನ್ನು ತೊಳೆದುಕೊಳ್ಳುವುದಕ್ಕೆ ನನಗೆ ನೀರು ಕೊಟ್ಟಿಲ್ಲ ಆದರೂ, ಆಕೆ ತನ್ನ ಕಣ್ಣೀರಿನಿಂದ ನನ್ನ ಪಾದಗಳನ್ನು ತೊಳೆದಳು. ನೀನು ನನಗೆ ಮುತ್ತು ಕೊಟ್ಟಿಲ್ಲ, ಆದರೆ ಆಕೆ ನಾನು ಇಲ್ಲಿಗೆ ಬಂದ ಕ್ಷಣದಿಂದಲೂ ನನ್ನ ಪಾದಗಳಿಗೆ ಮುತ್ತು ಕೊಡುತ್ತಾ ಇದೆ. ನನ್ನ ತಲೆಯ ಮೇಲೆ ನೀನು ಎಣ್ಣೆ ಹಾಕಲಿಲ್ಲ, ಆದರೆ ಆಕೆ ನನ್ನ ಪಾದಗಳ ಮೇಲೆ ಅತ್ತರನ್ನು ಸುರಿಸಿದಳು. ಆಕೆ ತನ್ನ ಹೆಚ್ಚಾದ ಪ್ರೀತಿಯನ್ನು ತೋರಿಸಿಕೊಂಡಳು, ಆಕೆಯ ಪಾಪಗಳು ಕ್ಷಮಿಸಲ್ಪಟ್ಟಿವೆ. ಸ್ವಲ್ಪ ಕ್ಷಮಿಸಲ್ಪಟ್ಟವರು ಸ್ವಲ್ಪವಾಗಿಯೇ ಪ್ರೀತಿ ಮಾಡುತ್ತಾರೆ." ಇದಾದನಂತರ ಯೇಸು ಆಕೆಯ ಕಡೆಗೆ ತಿರುಗಿ ನೋಡಿ, "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ, ನಿನ್ನ ನಂಬಿಕೆಯೇ ನಿನ್ನ ರಕ್ಷಿಸಿದೆ, ಸಮಾಧಾನದಿಂದ ಹೊರಟು ಹೋಗು" ಎಂದು ಹೇಳಿದನು.

## ಅನ್ವಯ  (ಪಾಠ 12)

ನಾನು ನನ್ನ ಪಾಪಗಳನ್ನು ಒಪ್ಪಿಕೊಂಡರೆ, ಯೇಸು ನನ್ನನ್ನು ಕ್ಷಮಿಸುತ್ತಾನೆ.

## ಕಂಠಪಾಠ ವಾಕ್ಯ  (ಪಾಠ 12)

"ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು." - 1 ಯೋಹಾನ.1:9.

## ಮನೆಗೆಲಸ  (ಪಾಠ 12)

ಧೂಳಿಯಲ್ಲಿ ಆಡಿ, ನಿಮ್ಮ ಕೈಗಳನ್ನು ನೋಡಿಕೊಳ್ಳಿರಿ, ನಿನ್ನ ಮೇಲೆ ಪಾಪ ಧೂಳಿ ಇದ್ದರೆ ಹೇಗೆ ಕಾಣಿಸುತ್ತದೆ ಊಹಿಸಿಕೋ. ಈಗ ನಿನ್ನ ಕೈಗಳನ್ನು ತೊಳೆದುಕೋ. ನೀವು ಮಾಡಿದ ಪಾಪಗಳೆಲ್ಲವುಗಳನ್ನು ಯೇಸುವಿನ ಬಳಿ ಒಪ್ಪಿಕೊಂಡರೆ, ಎಲ್ಲ ತೊಳೆಯಲ್ಪಡುತ್ತವೆ.  ಆತನಿಗೆ

ಇಷ್ಟವಾಗದ ಎಲ್ಲಾ ಪಾಪಗಳಿಗಾಗಿ ನೀವು ಕ್ಷಮೆಯನ್ನು ಪಡೆಯಳು ಆತನಲ್ಲಿ ಕೇಳಿಕೊಳ್ಳಿರಿ ಮತ್ತು ಪ್ರಾರ್ಥನೆ ಮಾಡಿರಿ. ನೀವು ಮಣ್ಣಿನಲ್ಲಿ ಆಟವಾಡಿದನಂತರ ನಿಮ್ಮ ಕೈಗಳನ್ನು ತೊಳೆದುಕೊಂಡಂತೆ ನಿಮ್ಮ ಅಂತರಂಗವನ್ನು ಆತನು ತೊಳೆಯುವ ಶಕ್ತನಾಗಿದ್ದಾನೆ.




### ದೇವರ ಡಿ.ಎನ್.ಎ. (ಪಾಠ 12)

ದೇವರು ಕ್ಷಮಿಸುವದಕ್ಕೆ ಯಾವ ಪರಿಮಿತಿಯೂ ಇಲ್ಲ.



## ವಿನೋದ ಸಮಯ! (ಪಾಠ 12)

### ಆಟ (ಪಾಠ 12)

ಕಳೆದ ಪಾಠಗಳ ಆಟವನ್ನು ಪುನಃಪರಿಶೀಲನೆ ಮಾಡುವುದು

ಸಂಪೂರ್ಣವಾಗಿ ಉಪಯೋಗವಾಗದ ಹಳೇ ವಿದ್ಯಾರ್ಥಿ ಪುಸ್ತಕಗಳನ್ನು ಒಂಗೂಡಿಸಿರಿ (ಯಾವುದೇ ವಯಸ್ಸಿನ ಪುಸ್ತಕವಾಗಲಿ). ತರಗತಿಯನ್ನು ಚಿಕ್ಕ ಚಿಕ್ಕ ಗುಂಪುಗಳಾಗಿ ವಿಭಜನೆ ಮಾಡಿರಿ. ಎಲ್ಲಾ ಒಗಟುಗಳನ್ನು ಸರಿಯಾಗಿ ಪೂರ್ತಿಗೊಳಿಸುವದಕ್ಕೆ ವೇಗವಾಗಿ ಕೆಲಸ ಮಾಡುವ ಗುಂಪಾಗಿ ಇರುವುದೇ ಈ ಆಟದ ಗುರಿ. ಇದು ಗುಂಪಿನ ಕೆಲವಾಗಿದ್ದರಿಂದ, ಗುಂಪಿನಲ್ಲಿರುವವರು ಒಬ್ಬರನ್ನೊಬ್ಬರು ಪ್ರೋತ್ಸಾಹಗೊಳಿಸಿಕೊಳ್ಳಬೇಕು. ಯಾವ ಗುಂಪು ಮೊದಲು ಮುಗಿಸುತ್ತದೋ ಅದೇ ಗುಂಪು ಈ ಆಟದಲ್ಲಿ ಗೆಲ್ಲುತ್ತಾರೆ. (ಈ ಆಟಕ್ಕೆ ಅವರು ಉಪಯೋಗಿಸದ ಎಲ್ಲಾ ಒಗಟುಗಳನ್ನು ಬಿಸಾಡಿದ್ದರೆ ಮತ್ತು ಎಲ್ಲರಿಗೆ ಕೊಡುವುದಕ್ಕೆ ಕಡಿಮೆ ಬಂದರೆ, ಉಪಾಧ್ಯಾಯರು ಎಲ್ಲಾ ವಯಸ್ಸಿನ ಗುಂಪುಗಳ ಆಟಗಳನ್ನು ಜೆರಾಕ್ಸ್.ಮಾಡಿಕೊಡಬಹುದು.)

### ಚರ್ಚೆ (ಪಾಠ 12)

( ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ನಾನು ದೇವರನ್ನು ನೋಡದೆ ಅಥವಾ ಆತನನ್ನು ಮುಟ್ಟದೆ ಆತನಿಗೆ ನನ್ನ ಪ್ರೀತಿಯನ್ನು ಮತ್ತು ಕೃತಜ್ಞತೆಯನ್ನು ಹೇಗೆ ತೋರಿಸುವುದು?

ನಾವು ದೇವರನ್ನು ಆತನ ಆಜ್ಞೆಗಳನ್ನು ಕೈಕೊಳ್ಳುವುದರ ಮೂಲಕ (1 ಯೋಹಾನ.4:12,21), ಇತರರನ್ನು ಪ್ರೀತಿಸುವುದರ ಮೂಲಕ (1 ಯೋಹಾನ.5:3) ಅಥವಾ ಆತನೊಂದಿಗೆ ಸಮಯವನ್ನು ಕಳೆಯುವುದರ ಮೂಲಕ ಅಥವಾ ಆತನೊಂದಿಗೆ ಮಾತನಾಡುವುದರ ಮೂಲಕ ಪ್ರೀತಿ ಮಾಡಬಹುದು.


2. ನಾವು ಇನ್ನು ಪಾಪದ ಆಲೋಚನೆಗಳನ್ನು ಇಟ್ಟುಕೊಂಡು, ಪಾಪಗಳನ್ನು ಮಾಡುತ್ತಾ ನಾವು ಹೇಗೆ ನೀತಿವಂತರಾಗುವುದಕ್ಕೆ ಸಾಧ್ಯ?


ದೇವರು ನಮ್ಮನ್ನು ಪವಿತ್ರತೆಯಿಂದ ಇರುವುದಕ್ಕೆ ಕರೆದಿದ್ದಾರೆ. ನಾನು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಬೇಕು ಮತ್ತು ನೀತಿಯನ್ನು ಕೊಂಡಾಡಬೇಕು. ನಮ್ಮ ಜೀವನಗಳಲ್ಲಿರುವ ಉದ್ದೇಶಪೂರಿತವಲ್ಲದ ಪಾಪಗಳ ವಿಷಯವಾಗಿಯೂ ನಾವು ದೇವರ ಬಳಿ ಕೇಳಿಕೊಳ್ಳಬಹುದು. ಅವುಗಳನ್ನೆಲ್ಲಾ ಆತನು ತೋರಿಸುವುದಕ್ಕೆ ಆತನು ನಂಬಿಗಸ್ತನಾಗಿದ್ದಾನೆ. (ಕೀರ್ತನೆ.32, 51; ಯೆಶಾಯ.59:1-2; ರೋಮಾ.6:12-15)


3. ನಾನು ಕೆಟ್ಟು ಹೋದರೆ ಪರಿಸ್ಥಿತಿ ಏನು? "ನಾನು ಯಾಕೆ ಇಷ್ಟು ಕೆಟ್ಟು ಹೋಗಿದ್ದೇನೆ" ಎಂದು ನಿಮ್ಮನ್ನು ನೀವು ನೋಡಿಕೊಂಡು ಆಲೋಚನೆ ಮಾಡುವಾಗ ಆ ಸಮಯದಲ್ಲಿ ಅನುಭೂತಿ ಹೇಗಿರುತ್ತದೆ?

ನಾವು ಕೆಟ್ಟವುಗಳನ್ನೇ ಆಯ್ಕೆ ಮಾಡಿಕೊಳ್ಳುತ್ತೇವೆ; ಅವುಗಳಲ್ಲಿ ಕೆಲವು ಭಯಂಕರವಾದ ಕೆಟ್ಟ ಕಾರ್ಯಗಳಾಗಿರುತ್ತವೆ. ಕೆಟ್ಟ ಅವಕಾಶಗಳಿಂದ ಬಿಡುಗಡೆ ಹೊಂದಲು ದೇವರು ಒಂದು ಒಳ್ಳೇಯ ಮಾರ್ಗವನ್ನು ಮಾಡಿದ್ದಾರೆ. ನಾವು ಪಶ್ಚಾತ್ತಾಪಪಡಬಹುದು, ಮತ್ತು ದೇವರೊಂದಿಗೆ ನಮ್ಮ ಸಂಬಂಧವನ್ನು ತಿರುಗಿ ಪುನಃರ್ ಸ್ಥಾಪಿಸಿಕೊಳ್ಳಲು ದೇವರ ಬಳಿ ನಮ್ಮ ಪಾಪಗಳನ್ನು ಒಪ್ಪಿಕೊಳ್ಳಬೇಕು. ಜನರೊಂದಿಗೆ ನಮ್ಮ ಸಂಬಂಧಗಳನ್ನು ಪುನರ್ ನಿರ್ಮಿಸಿಕೊಳ್ಳಲು ನಮ್ಮ ಕ್ರಿಯೆಗಳ ವಿಷಯದಲ್ಲಿ ನಾವು ಬಾಧ್ಯತೆಗಳನ್ನು ತೆಗೆದುಕೊಳ್ಳಬಹುದು ಮತ್ತು ಬೇಕಾದರೆ ಕೆಲವೊಂದು ವಿಷಯಗಳನ್ನು ಸರಿಪಡಿಸಿಕೊಳ್ಳಬಹುದು. ಇದರಿಂದ ಮತ್ತೊಮ್ಮೆ ಒಬ್ಬರಲ್ಲೊಬ್ಬರು ನಂಬಿಗಸ್ತರಾಗುವುದರ ಮೂಲಕ ಸ್ನೇಹವನ್ನು ತಿರುಗಿ ಬೆಳೆಸಿಕೊಳ್ಳಬಹುದು. (ಅರಣ್ಯ.15:22-31; ಲೂಕ.22:55-62; ರೋಮಾ.7:15-20; 1 ಯೋಹಾನ.1:7-9)

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 12)





## ಲೂಕಾಸ್ ರವರ ಪ್ರಯೋಗ (ಪಾಠ 12)

ಗ್ಲಾಸ್.ಗಳೊಂದಿಗೆ ಸಂಗೀತ (ಮ್ಯೂಜಿಕ್)

ಅನೇಕ ಗ್ಲಾಸ್.ಗಳಲ್ಲಿ ನೀರನ್ನು ಅನೇಕ ವಿಧವಾದ ಮಟ್ಟಗಳವರೆಗೆ ತುಂಬಿಸಿರಿ. ಆ ಗ್ಲಾಸ್.ಗಳ ಮೇಲೆ ಪೆನ್ಸಿಲ್.ನಿಂದ ಬಡಿದಾಗ ವಿಭಿನ್ನವಾದ ಶಬ್ದಗಳು ಬರುತ್ತವೆ. ಕಾಫಿ ಕಪ್.ಗಳಿಗಿಂತಲೂ ರೌಂಡ್ ಗ್ಲಾಸ್.ಗಳು ಉಪಯೋಗಿಸುವುದು ಒಳ್ಳೇಯದು, ಯಾಕಂದರೆ ಕಪ್.ಗಳ ಅಂಚುಗಳನ್ನು ಬಡಿದಾಗ ಒಳ್ಳೇಯ ಶಬ್ದ ಬರುತ್ತದೆ. ಗ್ಲಾಸ್ ಕಪ್.ಗಳಂತೆ ಸೆರಾಮಿಕ್ ಕಪ್.ಗಳು ಅಷ್ಟು ಚೆನ್ನಾಗಿ ಕೆಲಸ ಮಾಡುವುದಿಲ್ಲ ಮತ್ತು ಪ್ಲಾಸ್ಟಿಕ್ ಕಪ್.ಗಳು ಅಷ್ಟು ಚೆನ್ನಾಗಿ ಕೆಲಸ ಮಾಡುವುದಿಲ್ಲ, ನಿಮಗೆ ಸಾಧ್ಯವಾದರೆ ಗ್ಲಾಸ್.ಗಳಲ್ಲಿ ಒಂದು ಸ್ಕೇಲ್ ತೆಗೆದುಕೊಂಡು ಒಂದೊಂದು ಗ್ಲಾಸ್.ನಲ್ಲಿ ಒಂದೊಂದು ಮಟ್ಟಕ್ಕೆ ನೀರನ್ನು ಹಾಕಿ, ಅದರ ಮೇಲೆ ಒಂದು ಹಾಡನ್ನು ಬಾರಿಸಲು ಪ್ರಯತ್ನ ಮಾಡಿರಿ.

https://www.youtube.com/playlist?list=PLOBHMuQ9nHZT9tiMWNWGip3nii82SAjRh

# --[ ಕೇಸ್ 13 ]--



## ಸೂಚನೆಗಳು! (ಕ್ಲೂಸ್) (ಪಾಠ 13)

### 1 ಸೂಚನೆ #1 ಅಂಶ (ಪಾಠ 13)

ಕೇಸ್ : ಅವು ಮಾದಕ ದ್ರವ್ಯಗಳೋ, ಹಾರ್ಮೋನ್ಸ್, ಅಥವಾ ಸ್ಟೀರಿಯಾಡ್ಸ್?

### 2 ಸೂಚನೆ #2 ನಾಟಕ (ಪಾಠ 13)

ಕಮಾಂಡರ್ : ಸರಿ, ಕೇಳು, ನಮಗೆ ಸೋರೆಕ್ ವ್ಯಾಲಿಯಲ್ಲಿ ನೈಟ್ ಮಿಶನ್ ಇದೆ.



ಕಮಾಂಡರ್ : ನಮ್ಮ ಶತ್ರುಗಳ ವಿಷಯವನ್ನು ಮಾಹಿತಿ ಕೊಡಲು ನಮಗೊಬ್ಬ ಮಾಹಿತಿಗಾರ ಇದ್ದಾನೆ, ಒಂದು ಮಗ್ಗ ಮತ್ತು ಪಿನ್.ಗಳೊಂದಿಗೆ ನಾವು ನಿಷ್ಕ್ರಿಯಮಾಡಿದ್ದೇವೆ. ಅವನು ಮಲಗುವವರೆಗೂ ನಾವು ನಿರೀಕ್ಷಿಸೋಣ, ಆದನಂತರ ನಾವು ಬಿರುಗಾಳಿಯಿಂದ ಮನೆಯನ್ನು ಹಿಡಿದು, ಅವನನ್ನು ಹಿಡಿದುಕೊಳ್ಳೋಣ. ಸೈನಿಕ 1 ಮತ್ತು ಸೈನಿಕ 2 ಇಬ್ಬರು ಮೊಟ್ಟ ಮೊದಲು ಆ ಬಾಗಿಲು ಮೂಲಕ ಹೋಗುತ್ತಾರೆ. ನಿಮ್ಮ ಶತ್ರುವು ನಿಮ್ಮ ನಿಯಂತ್ರಣದಲ್ಲಿದ್ದಾಗ, ಎಲ್ಲವನ್ನು ಸ್ಪಷ್ಟಪಡಿಸು ಮತ್ತು ನಾವು ಅವನಿಗೆ "ಭದ್ರತೆ" ಕೊಡುತ್ತೇವೆ, ಮತ್ತು ಅವನನ್ನು ದಾಸರ ಮನೆಗೆ "ವರ್ಗಾಯಿಸುತ್ತೇವೆ."

ಸೈನಿಕ 1 ಮತ್ತು ಸೈನಿಕ 2 : [ಒಬ್ಬರನ್ನೊಬ್ಬರು ನೋಡಿಕೊಂಡು, ನಡಗುತ್ತಾ ನಗುತ್ತಾರೆ]

ಕಮಾಂಡರ್ : ಸೈನಿಕರೇ ಎಲ್ಲಾ ಸರಿಯಾಗಿದೆಯಾ?

ಸೈನಿಕ 1 : ಇನ್ನೊಂದು ರಾತ್ರಿಯಲ್ಲಿ ನಾವು ಮಾಡಿದ ಫ್ರೆಸ್ ರೋಪ್ಸ್ ಮಿಶನ್.ಗೆ ತುಂಬಾ ಹತ್ತಿರವಾಗಿದ್ದಂತೆ ಕಾಣಿಸುತ್ತಿದೆ. ಯಾರು ಚೆನ್ನಾಗಿ ಹೋಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಕೇಳಿಸಿಕೊಂಡಿದ್ದೇನೆ.

ಕಮಾಂಡರ್ : ಸೈನಿಕ ನಿಮ್ಮ ಅಭಿಪ್ರಾಯ ನನಗೆ ಬೇಕೆಂದಿದ್ದರೆ, ಮೊಟ್ಟ ಮೊದಲನೇಯದು ಯಾವುದೆಂದು ನಾನು ನಿಮಗೆ ಹೇಳುತ್ತಿದ್ದೆ. ನಾನು ಹೇಳುತ್ತಿರುವುದು ನಿಮಗೆ ಅರ್ಥವಾಗುತ್ತಿದೆಯಾ?

ಸೈನಿಕ 1 : ಹೌದು ಸರ್!

ಕಮಾಂಡರ್ : ನಾವು ಮಧ್ಯೆರಾತ್ರಿಯಲ್ಲಿ ಹೋಗುತ್ತಿದ್ದೇವೆ, ಹೊರ ತೆಗೆಯುವುದಕ್ಕೆ ನಮಗೆ 15 ನಿಮಿಷಗಳು ಮಾತ್ರ ಇರುತ್ತದೆ.

ಸೈನಿಕ 2 : ಸರ್, ಎಸ್ ಸರ್!

ಕಮಾಂಡರ್ : ಶತ್ರುವನ್ನು ನಿರಾಯುಧನನ್ನಾಗಿ ಮಾಡಿ, ಸಾಯಿಸುವುದಕ್ಕೆ ನೀವಿಬ್ಬರು ಹೆದರುತ್ತಿದ್ದೀರೋ?

ಸೈನಿಕ 1 : ಇಲ್ಲ ಸರ್?

ಕಮಾಂಡರ್ : ಅದು ಸರಿ, ಶತ್ರುವನ್ನು ಸಾಯಿಸಲು ನೀವು ಹೆದರುತ್ತಿಲ್ಲ.

ಸೈನಿಕ 2 : ನೀವು ಎಲ್ಲಿದ್ದೀರಿ ಸರ್?

ಕಮಾಂಡರ್ : ನಾನು ಹೊರಗಡೆ ಇದ್ದೆ, ಸ್ವಲ್ಪ ಸುರಕ್ಷಿತವಾದ ಸ್ಥಳದಲ್ಲಿ, ಮರಗಳ ಮಧ್ಯೆದಲ್ಲಿ ನಿಂತುಕೊಂಡಿದ್ದೆ.

ಸೈನಿಕ 1 : [ಸೈನಿಕ 2ನ್ನು ನೋಡಿ ನಗುತ್ತಾ] ಇದು ಒಳ್ಳೇಯ ಆಲೋಚನೆ, ಅಥವಾ ಅವನು ಎದ್ದು ಬಂದಾಗ ನಾವಿಬ್ಬರು ಪೆಟ್ಟು ತಿನ್ನುತ್ತೇವೆ.


ಸೈನಿಕ 2 : [ಹಿಂದಕ್ಕೆ ತಿರುಗಿ ನಗುತ್ತಾ] ತಮಾಷೆ ಮಾದಬೇಡ.

ಕಮಾಂಡರ್ : ನೀವೇನಾದರೂ ಹೇಳಿದ್ದೀರಾ.

ಸೈನಿಕ 1 ಮತ್ತು ಸೈನಿಕ 2 : [ಲಕ್ಷ್ಯಕ್ಕೆ ಬಂದು] ಇಲ್ಲ ಸರ್!

ಕಮಾಂಡರ್ : ನನಗೆ ಹಾಗೆ ಅನಿಸುತ್ತಿಲ್ಲ. [ಪ್ರೇಕ್ಷಕರ ಕಡೆಗೆ ತಮ್ಮ ಮುಖಗಳನ್ನು ತೋರಿಸುತ್ತಾ ಮತ್ತು ಕಿರಿಚುತ್ತಾ] ಈಗ ಸಿದ್ಧವಾಗಿರ್ರಿ, ನಾವು 10 ನಿಮಿಷದೊಳಗೆ ಮುಂದಕ್ಕೆ ಹೋಗಬೇಕು. ವೇದಿಕೆಯ ಮೇಲೆ ಸಲ್ಯೂಟ್.ಗಳು ಮತ್ತು ಮಾರ್ಚ್ ಮಾಡುತ್ತಾ ಮುಗಿಸಿದರು.

## 3 ಸೂಚನೆ # 3ವಸ್ತು (ಪಾಠ 13)




ತರಗತಿಗೆ ತೆಗೆದುಕೊಂಡು ಬನ್ನಿರಿ : ಬಾಚಣಿಗೆ ಮತ್ತು ಕತ್ತರಿಗಳು ಅಥವಾ ಕೂದಲು ಬ್ರಶ್

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 13)



ಕ್ರಿ.ಪೂ.604ರಲ್ಲಿ ನೆಬೂಕದ್ನೆಚ್ಚರನ ಸೆರೆಯಲ್ಲಿ ಬಿದ್ದ ಪಾಲಸ್ತೀನ ಪಟ್ಟಣಗಳು, ಈ ಚಿತ್ರವು ಪ್ರಸ್ತುತ ಅಷ್ಕೆಲೋನ್. ಈ ಪಟ್ಟಣದಲ್ಲಿ ಬಹುಶಃ ದೆಲಿಲಾ ನಿವಾಸ ಮಾಡಿರಬಹುದು.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 13)

ರಹಸ್ಯ: ದೊಡ್ಡ ದಳವನ್ನಾಗಿ ಮಾಡಿ ತೋರಿಸಲು ಹಗ್ಗದ ಮುಂಭಾಗವನ್ನು ಬಿಚ್ಚುವುದು.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 13)

## ಬೈಬಲ್ ಕಥೆ (ಪಾಠ 13)

**ಸಂಸೋನನು ಮತ್ತು ದೆಲೀಲ**

**ಬೈಬಲ್ ವಾಕ್ಯಭಾಗ : ನ್ಯಾಯಾ.16:1 -31**



ಇಸ್ರಾಯೇಲ್ ದೇಶಕ್ಕೆ ನಾಯಕನಾಗಿರಲು ಸಂಸೋನನು ದೇವರು ಆದುಕೊಂಡ ವ್ಯಕ್ತಿಯಾಗಿದ್ದನು ಮತ್ತು ಆತನು ಅವನಿಗೆ ಒಂದು ಅದ್ಭುತವಾದ ವರವನ್ನು ಕೊಟ್ಟಿದ್ದನು. ಅವನಿಗೆ ಅತ್ಯದ್ಭುತವಾದ ಮಾನವ ಶಕ್ತಿ ಯಿದ್ದಿತ್ತು. ಅವನು ಹೋರಾಟ ಮಾಡಿ, ಯುದ್ಧಗಳನ್ನು ಗೆಲ್ಲುತ್ತಿದ್ದನು, ಆದರೆ ಇದಕ್ಕೆ ಕಾರಣವೆಲ್ಲಾ ಅವನ ಕೂದುಲಾಗಿತ್ತು. ದೇವರು ಸಂಸೋನನನ್ನು ಬೇರ್ಪಾಟು ಮಾಡಿದ್ದನು, ಅದಕ್ಕಾಗಿ ಅವನು ಎಂದಿಗೂ ತನ್ನ ಕೂದಲನ್ನು ಕತ್ತರಿಸಕೊಳ್ಳಬಾರದು. ಸಂಸೋನನಿಗೆ ಸ್ತ್ರೀಯರ ಬಲಹೀನವಿದ್ದಿತ್ತು ಮತ್ತು ದೆಲೀಲ ಎನ್ನುವ ಹುಡುಗಿಯೊಂದಿಗೆ ಪ್ರೀತಿಯಲ್ಲಿ ಬಿದ್ದಿದ್ದನು. ಆದರೆ ಆಕೆ ಒಳ್ಳೇಯ ಹುಡಿಗಿಯಲ್ಲ. ಸಂಸೋನನನು ತನ್ನ ಪಟ್ಟಣದಲ್ಲಿದ್ದಾನೆಂದು ಫಿಲಿಷ್ಟಿಯರು ತಿಳಿದುಕೊಂಡಿದ್ದರು, ಆಗ ಅವನು ಅವಳ ಪ್ರೀತಿಯಲ್ಲಿದ್ದನು. ಅವರು ಅವಳ ಬಳಿಗೆ ಹೋಗಿ, ಒಂದುವೇಳೆ ಅವನನ್ನು ನೀನು ಹಿಡಿದುಕೊಟ್ಟರೆ ನಿನಗೆ ನಾವು ಹೆಚ್ಚು ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಅದಕ್ಕಾಗಿ ದೆಲೀಲ ಅವನನ್ನು ಹಿಡಿದುಕೊಳ್ಳಲು ಯತ್ನಿಸಿದಳು, ಆದರೆ ಸಂಸೋನನು ಆಟವನ್ನು ಆಡುವುದಕ್ಕೆ ಆರಂಭಿಸಿದನು. ಅವನು ಅವಳಿಗೆ ತಪ್ಪಾದ ಉತ್ತರಗಳನ್ನು ಹೇಳುವುದಕ್ಕೆ ಶುರು ಮಾಡಿದನು, ಏಳು ತಂತಿಗಳಿಂದ ನನ್ನನ್ನು ಕಟ್ಟಿದರೆ ಕೆಲಸ ಮಾಡಬಹುದು, ಹೊಸ ಹಗ್ಗದಿಂದ ನನ್ನನ್ನು ಕಟ್ಟಿ ಹಾಕಿದರೆ ಕೆಲಸ ಮಾಡಬಹುದು ಮತ್ತು ನನ್ನ ಕೂದಲನ್ನು ಜಡೆಗಳನ್ನಾಗಿ ನೇಯಿದರೆ ಕೆಲಸವಾಗಬಹುದು ಎಂದು ಅವನು ಅವಳಿಗೆ ಹೇಳಿದನು. ಆದರೆ ಹಾಗೆ ಮಾಡುವ ಪ್ರತಿಯೊಂದು ಬಾರಿ, ಆಕೆ ಫಿಲಿಷ್ಟಿಯನ್ನರ ಸೈನಿಕರನ್ನು ಕರೆ ಕಳುಹಿಸುತ್ತಿದ್ದಳು, ಆಗ ಸಂಸೋನನು ಅವರೊಂದಿಗೆ ಯುದ್ಧ ಮಾಡುತ್ತಿದ್ದನು. ದೆಲೀಲ ತುಂಬಾ ಕೋಪದಲ್ಲಿದ್ದಳು; ಆಕೆಗೆ ಅವರು ಕೊಡುವ ಹಣ ಬೇಕಾಗಿದ್ದಿತ್ತು, ಆದ್ದರಿಂದ ಆಕೆ ಸಂಸೋನನನ್ನು ಪೀಡಿಸುತ್ತಿದ್ದಳು. ಅವನು ಆಕೆಯನ್ನು ಪ್ರೀತಿಸುತ್ತಿಲ್ಲವೆಂದು ಅವನಿಗೆ ಹೇಳುತ್ತಿದ್ದಳು,ಯಾಕಂದರೆ ಅವನು ತನ್ನ ರಹಸ್ಯವನ್ನು ಹೇಳುವುದಕ್ಕೆ ಆಕೆಯನ್ನು ನಂಬಿರಲಿಲ್ಲ. ಕೊನೆಗೆ ಸಂಸೋನನು ಆಕೆಗೆ ರಹಸ್ಯವನ್ನು ಹೇಳಿದನು, ಅದೇನಂದರೆ, ತನ್ನ ಕ್ಷೌರವನ್ನು ಕತ್ತರಿಸಿದರೆ ತನಗಿರುವ ಬಲವೆಲ್ಲ ಹೋಗುತ್ತದೆಯೆಂದು ಹೇಳಿದನು. ಆ ರಾತ್ರಿಯಲ್ಲೇ ದೆಲೀಲ ತೊಡೆಯ ಮೇಲೆ ಸಂಸೋನನನು ಮಲಗಿದ್ದನು, ಆಗ ಆಕೆ ಫಿಲಿಷ್ಟಿಯನ್ ಸೈನಿಕರನ್ನು ಕರೆಸಿ, ಸಂಸೋನನಿಗೆ ಕ್ಷೌರ ಮಾಡಿಸಿದಳು. ಸಂಸೋನನು ಎದ್ದನಂತರ ದೇವರು ನನಗೆ ಕೊಟ್ಟ ಬಲದ ವರವನ್ನು ಕಳೆದುಕೊಂಡಿದ್ದೇನೆಂದು ತಿಳಿದುಕೊಂಡನು. ಫಿಲಿಷ್ಟಿಯನ್ನರು ದೆಲೀಲಾಗೆ ಹಣವನ್ನು ಕೊಟ್ಟರು. ಸಂಸೋನನಿಗೆ ಕುರುಡುತನವನ್ನುಂಟು ಮಾಡಿ, ಅವನನ್ನು ಸೆರೆಮನೆಯೊಳಗೆ ತಳ್ಳಿದರು.

## ಅನ್ವಯ (ಪಾಠ 13)

ದೇವರು ತನ್ನ ಪ್ರಣಾಳಿಕೆಗಾಗಿ ಉಪಯೋಗಿಸುವುದಕ್ಕೆ ಮಾತ್ರವೇ ಆತನು ನನಗೆ ವರಗಳನ್ನು ಕೊಟ್ಟಿದ್ದಾನೆ.

## ಕಂಠಪಾಠ ವಾಕ್ಯ (ಪಾಠ 13)

"ಈ ವರಗಳೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ." - 1 ಕೊರಿಂಥ.12:11.

### ಮನೆಗೆಲಸ (ಪಾಠ 13)

ನಿಮ್ಮ ಕುಟುಂಬ ಸದಸ್ಯರಿಗೆ ಉಪಯೋಗವಾಗುವ ಒಂದು ಕೊಡುಗೋರೆಯನ್ನು ಕೊಡಿರಿ. ಉದಾಹರಣೆ : ನಿಮ್ಮ ಅಮ್ಮನಿಗೆ ಊಟ ಬಡಿಸುವ ಚಮಚ, ನಿಮ್ಮ ತಾತನಿಗೆ ಒಂದು ಸಸಿ, ನಿಮ್ಮ ಅಪ್ಪನಿಗೆ ಕೈಗೆ ತೊಡಗುವ ಗ್ಲೋವ್ಸ್, ನಿಮ್ಮ ತಮ್ಮನಿಗೆ ಅಥವಾ ತಂಗಿಗೆ ಚೆನ್ನಾಗಿ ಕಾಣಿಸಿಕೊಳ್ಳುವ ಒಂದು ಪೆನ್ಸಿಲ್. ದೇವರು ನಿಮಗಾಗಿ ಇಟ್ಟಿರುವ ತನ್ನ ಪ್ರಣಾಳಿಕೆಯನ್ನು ಪೂರೈಸಲು ಆತನು ಯಾವರೀತಿ ತನ್ನ ವರಗಳಿಂದ ತುಂಬಿಸಿದ್ದಾರೆಂದು ಆಲೋಚನೆ ಮಾಡಿರಿ.

### ದೇವರ ಡಿ.ಎನ್.ಎ. (ಪಾಠ 13)




ದೇವರಿಗೆ ಒಂದು ಪ್ರಣಾಳಿಕೆ ಇದೆ ಮತ್ತು ಅದನ್ನು ಜನರು ಅನುಸರಿಸದೇ ಇರುವಾಗ ಅದಕ್ಕೆ ತಕ್ಕ ಪರಿಣಾಮಗಳನ್ನು ಎದುರುಗೊಳ್ಳಬೇಕಾಗಿರುತ್ತದೆ.



## ವಿನೋದ ಸಮಯ! (ಪಾಠ 13)

### ಆಟ (ಪಾಠ 13)

ಗೂಫಿ ಪರಿಚಯ ಮಾತುಗಳು (ಸಂಸೋನನನ ಸುಳ್ಳು ಅಥವಾ ನಿಜ)

ಒಂದುಸಲ ಮಕ್ಕಳೆಲ್ಲರು ನಿಲ್ಲಬೇಕು ಮತ್ತು ಹಾಗೆ ನಿಂತುಕೊಂಡಿರುವಾಗಲೇ ಅವರು ಅವರ ಕುರಿತಾಗಿ ಏನಾದರೊಂದು ಹೇಳಿಕೊಳ್ಳಬೇಕು. ಅವರು ಮೂರು ವಿಷಯಗಳನ್ನು ಹೇಳಬೇಕು, ಅವರಲ್ಲಿ ಒಬ್ಬನು ಪೂರ್ತಿಯಾಗಿ ತಪ್ಪು ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಆಗ ಇತರ ವಿದ್ಯಾರ್ಥಿಗಳು ಯಾರ ವ್ಯಾಖ್ಯೆ ಸರಿಯಲ್ಲವೆಂದು ಗ್ರಹಿಸಬೇಕು.

### ಚರ್ಚೆ (ಪಾಠ 13)

(ದೊಡ್ಡ ವಿದ್ಯಾರ್ಥಿಗಳಿಗಾಗಿ)

1. ಗಂಡು ಹೆಣ್ಣು ಸ್ನೇಹ ಸಂಬಂಧಗಳಲ್ಲಿ ಯಾವುದು ಸರಿಯಾದದ್ದು? ಅನುಸರಿಸುವ ಒಳ್ಳೇಯ ಸರಿಹದ್ದುಗಳೇನು?



ನೀನು ಬೆಂಕಿಯೊಂದಿಗೆ ಆಟವಾಡುತ್ತಿದ್ದೀಯ. ನಮ್ಮ ವಿಷಯದಲ್ಲಿ ದೇವರ ಪ್ರಣಾಳಿಕೆ ಏನೆಂದರೆ ವಿವಾಹಕ್ಕಾಗಿ ನಮ್ಮನ್ನು ನಾವು ಕಾಪಾಡಿಕೊಳ್ಳುವುದೇ. ನೀವು ಕೈಗಳನ್ನು ಹಿಡಿದುಕೊಳ್ಳುವುದು = ಮುತ್ತು ಕೊಡುವುದು ಎನ್ನುವಗಳನ್ನು ಮಾಡುವುದಕ್ಕೆ ಆರಂಭಿಸಿದರೆ, ಅದು ನಿಮ್ಮನ್ನು ಅಪಾಯಕರ ಪರಿಸ್ಥಿತಿಯೊಳಗೆ ತೆಗೆದುಕೊಂಡು ಹೋಗುತ್ತದೆ. ಆ ಭಯಂಕರವಾದ ಪರಿಸ್ಥಿತಿಯಿಂದ ನೀವು ತಿರುಗಿ ಬರುವುದಕ್ಕೆ ಆಗುವುದಿಲ್ಲ. ನಿಮ್ಮ ಭಾವನೆಗಳು ಪರಿಸ್ಥಿತಿಗಳ ಪ್ರಕಾರ ಮಾರ್ಪಡುತ್ತಾ ಇರುತ್ತವೆ; ನೀವು ಸರಿಯಾದ ಗಡಿಗಳನ್ನು ಹಾಕಿಕೊಂಡು ಜೀವಿಸುವ ಮುಂದಿನ ಸಮಯ ಬರುವುದಕ್ಕೆ ಮುಂಚಿತವಾಗಿ ನೀವು ನಿರ್ಣಯವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ. (ಕೀರ್ತನೆ.119;9-16; ರೋಮಾ.13:12-14; 2 ಕೊರಿಂಥ.6:14-18; 2 ಕೊರಿಂಥ.7:1)


2. ಇದರ ಕುರಿತಾಗಿ ಯಾರಿಗೂ ಗೊತ್ತಿರದೇ, ಇದನ್ನು ನನ್ನಲ್ಲೇ ರಹಸ್ಯವಾಗಿಟ್ಟುಕೊಂಡರೆ ಚೆನ್ನಾಗಿದ್ದರೆ ಪರವಾಗಿಲ್ಲವೋ?

ನೀವು ನೇರವಾಗಿ ರಹಸ್ಯದಲ್ಲಿದ್ದು ನಡೆದುಕೊಳ್ಳಬೇಕೆಂದರೆ, ಅದು ನಿವೇನಾಗಿದ್ದೀರೆಂದು ನೀವು ಆಲೋಚನೆ ಮಾಡುವವರು ನೀವಲ್ಲವೆಂದು ಅದು ನಿಮಗೆ ಎಚ್ಚರಿಕೆ ನೀಡುತ್ತದೆ. ಯಾರೋ ನೋಡದೇ ಇರುವಾಗ ನಾನು ಸರಿಯಾಗಿರುವುದನ್ನೇ ದೃಡತ್ವ ಎಂದು ಕರೆಯುತ್ತಾರೆ. ತಮ್ಮ ನಿಜ ಗುಣವನ್ನು ಬಚ್ಚಿಟ್ಟ ಜನರ ಮೇಲೆ ಮತ್ತು ಎಲ್ಲರು ಇರುವಾಗ ಒಳ್ಳೇಯರಾಗಿ ಕಾಣಿಸಿಕೊಂಡವರ ಮೇಲೆ ಯೇಸು ಕರುಣೆ ತೋರಿದಂತೆ ಆಧಾರಗಳಿಲ್ಲ. (ಅಪೊ.ಕೃತ್ಯ.5:1-11; 1 ತಿಮೊಥೆ.1:18-19; 1 ಯೋಹಾನ.2:3-6)

3. ಬಲ ಮತ್ತು ಸೌಂದರ್ಯದ ಕುರಿತಾಗಿ ಎಷ್ಟು ವಿಧವಾದ ಹೆಸರುಗಳನ್ನು ನೀವು ಹೇಳಬಲ್ಲಿರಿ? ಅದರಲ್ಲಿ ನಿಮಗೆ ಅತೀ ಹೆಚ್ಚಾಗಿ ಇಷ್ಟಪಡುವುದು ಯಾವುದು? ಉದಾಹರಣೆಗೆ, ಸಂಸೋನನನು ಭೌತಿಕವಾಗಿ ದೃಢ ಮತ್ತು ದೆಲೀಲ ಭೌತಿಕವಾಗಿ ಸುಂದರಿಯಾಗಿದ್ದಳು.

ಬಲಕ್ಕೆ ಸಲಹೆಗಳು: ಇನ್ನೊಬ್ಬರ ಒತ್ತಡವನ್ನು ತಾಳಿಕೊಳ್ಳುವುದು, ನೈತಿಕ ವಿಷಯಗಳು, ಒತ್ತಡವನ್ನು ಕಡಿಮೆ ಮಾಡಿಕೊಳ್ಳುವ ಸಾಮರ್ಥ್ಯ, ಹಾಸ್ಯ, ಮತ್ತು ನೋವನ್ನು ಎದುರುಗೊಳ್ಳುವುದು. ಭೌತಿಕ ಬಲ ಮತ್ತು ಸೌಂದರ್ಯಗಳೆನ್ನುವವು ನೋಡುವುದಕ್ಕೆ ತುಂಬಾ ಸುಲಭವಾಗಿ ಕಾಣಿಸಿಕೊಳ್ಳುತ್ತವೆ, ಆದರೆ ಒಬ್ಬ ವ್ಯಕ್ತಿಯ ನಿಜವಾದ ಬಲ ಮತ್ತು ಸೌಂದರ್ಯ ಎನ್ನುವವುಗಳು ಅಂತರಂಗಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆ. ( 1 ಪೇತ್ರ.3:5, 1 ತಿಮೊಥೆ.2:9; ಲೂಕ.1:80; 1 ತಿಮೊಥೆ.3:2-12)

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 13)









## ಲೂಕಾಸ್ ರವರ ಪ್ರಯೋಗ (ಪಾಠ 13)

ಕಿರುಕೊಳವೆ ಕ್ರಿಯೆ

ಒಂದು ಬಟ್ಟಲಲ್ಲಿ ನೀರನ್ನು ತುಂಬಿಸಿರಿ ಮತ್ತು ಅದರ ಪಕ್ಕದಲ್ಲಿ ಅದೇ ರೀತಿಯಾದ ಖಾಲಿ ಬಟ್ಟಲನ್ನು ಇಡಿರಿ. ಕಾಗದದ ಟವಲನ್ನು ತೇವಗೊಳಿಸಿ, ಅದನ್ನು ಬಾಗಿಸಿರಿ. ಅದನ್ನು ನೀರಿರುವ ಬಟ್ಟಲು ಮೇಲೆ ಮತ್ತು ಖಾಲಿ ಬಟ್ಟಲು ಮೇಲೆ ಹಾಕಿರಿ. ಕಿರುಕೊಳವೆಯನ್ನು ಉಪಯೋಗಿಸುವುದರ ಮೂಲಕ ನೀರಿರುವ ಬಟ್ಟಲುನಿಂದ ನೀರಿರದ ಬಟ್ಟಲುನೊಳಗೆ ಆ ನಿರು ನಿದಾನವಾಗಿ ಸೈಫೋನ್ ಆಗುತ್ತದೆ. ಇದು ಆ ಎರಡು ಬಟ್ಟಲುಗಳಲ್ಲಿ ಆ ನೀರು ಸಮಾನ ಮಟ್ಟಕ್ಕೆ ಬರುತ್ತದೆ.